04 January 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಚಿಲ್ಲರೆ ದುಡ್ಡು ತೆಗೆದಿಟ್ಟರೆ ಜೇಬು ಭಾರ ಕಡಿಮೆ ಆಗುತ್ತೆ, ಹಾಗೆ ಚಿಲ್ಲರೆ ವಿಷಯ ತಲೆಯಿಂದ ತಗೆದರೆ ಮನಶಾಂತಿ ಇರುತ್ತದೆ.
-ಮೈಲಾರ ಸಾವಿತ್ರಿಬಾಯಿ

**ಒಂದೊಳ್ಳೆ ಮಾತು**

"ನಿಮ್ಮ ವ್ಯಕ್ತಿತ್ವವನ್ನು ಯಾವತ್ತೂ ಬಿಟ್ಟು ಕೊಡಬೇಡಿ, ನಿಮ್ಮ ಸ್ವಂತಿಕೆಯ ಪಾತ್ರವನ್ನು ಯಾರೂ ಸರಿಯಾಗಿ ನಿಭಾಯಿಸುವುದಿಲ್ಲ."
ಮೈಲಾರ ಸಾವಿತ್ರಿಬಾಯಿ

info.varthaman@gmail.com

9742504916

ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 70 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

## ಕರ್ತವ್ಯ ನಿರ್ಲಕ್ಷ್ಯದಿಂದ ಎಸ್ಪಿ ಅಮಾನತು: ಪರಂ



**ತುಮಕೂರು:** ಬಳ್ಳಾರಿಯಲ್ಲಿ ಗಲಭೆ ನಡೆದ ಸ್ಥಳಕ್ಕೆ ಹೋಗಿ ನಿಯಂತ್ರಿಸದೆ, ಸಿಬ್ಬಂದಿಗೆ ನಿರ್ದೇಶನ ನೀಡದ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪವನ್ ನೆಜ್ಜೂರ್ ಅವರನ್ನು ಅನಿವಾರ್ಯವಾಗಿ ಅಮಾನತು ಮಾಡಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಸ್ಪಷ್ಟಪಡಿಸಿದರು.

ನಗರದಲ್ಲಿ ಶನಿ ವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪೊಲೀಸ್ ವರಿಷ್ಠಾಧಿಕಾರಿ ಸ್ಥಳಕ್ಕೆ ಹೋಗಿ ಸಿಬ್ಬಂದಿಗೆ ನಿರ್ದೇಶನ ಕೊಟ್ಟು ಗಲಭೆ ನಿಯಂತ್ರಿಸಬೇಕಿತ್ತು. ಅಧಿಕಾರಿಗಳಿಗೆ ಇಷ್ಟು ವರ್ಷ ಕೆಲಸ ಮಾಡಿದ ಅನುಭವ ಇರುತ್ತದೆ. ಆದರೂ ಸರಿಯಾಗಿ ಕರ್ತವ್ಯ ನಿರ್ವಹಿಸಿಲ್ಲ ಎಂದು ಟೀಕಿಸಿದರು.

ಕರ್ತವ್ಯಕ್ಕೆ ಯಾವ ಸಮಯದಲ್ಲೇ ರಿಪೋರ್ಟ್ ಮಾಡಿಕೊಳ್ಳಲಿ. ಒಂದು ದಿನ ಎಂಬುದು ಮುಖ್ಯವಲ್ಲ. ಕೆಲಸ ಎಂದ ಮೇಲೆ ಕೆಲಸ. ಅವರೇನೂ ಪೊಲೀಸ್ ಇಲಾಖೆಗೆ ಹೊಸಬರಲ್ಲ. ಜವಾಬ್ದಾರಿ ವಹಿಸಿಕೊಂಡ ತಕ್ಷಣ ಸವಾಲುಗಳು ಎದುರಾಗುತ್ತವೆ. ತಕ್ಷಣ ಕಾರ್ಯಪ್ರವೃತ್ತರಾಗಬೇಕಾಗಿತ್ತು ಎಂದು ತಿಳಿಸಿದರು.

## ಹಾರಿದ ಪೆಂಡಾಲ್: ಜಾರಕಿಹೊಳಿ ಪಾರು

**ಹಾವೇರಿ:** ಸುಂಟರಗಾಳಿಗೆ ಬೃಹತ್ ಪೆಂಡಾಲ್ ಕುಸಿದು ಬಿದ್ದಿದ್ದು, ಸಚಿವ ಸತೀಶ್ ಜಾರಕಿಹೊಳಿ ಪರಾಗಿದ್ದಾರೆ. ರಾಣೇಬೆನ್ನೂರಿನಲ್ಲಿ ಕಾರ್ಯಕ್ರಮ ಮುಗಿಸಿ ತೆರಳುವಾಗ ಘಟನೆಸ ನಡೆದಿದೆ.



ಸತೀಶ್ ಜಾರಕಿಹೊಳಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡುತ್ತಿದ್ದರು. ಈ ಸಂದರ್ಭದಲ್ಲಿ ಏಕಾಏಕಿ ಸುಂಟರಗಾಳಿ ಬೀಸಿದ್ದು ಕಾರ್ಯಕ್ರಮಕ್ಕೆ ಹಾಕಿದ್ದ ಪೆಂಡಾಲ್ ಕುಸಿದು ಬಿದ್ದಿದೆ. ಪೆಂಡಾಲ್‌ಗೆ ಹಾಕಿದ್ದ ತಗಡುಗಳು ಹಾರಾಡಿವೆ. ಘಟನೆಯಿಂದ ಕ್ಷಣ ಕಾಲ ವಿಚಲಿತರಾದ ಸತೀಶ್ ಜಾರಕಿಹೊಳಿ ನಂತರ ತೆರಳಿದರು.

## ಬಳ್ಳಾರಿ ಫೈರಿಂಗ್: ಮೃತ ಕೈ ಕಾರ್ಯಕರ್ತನ ಕುಟುಂಬಕ್ಕೆ 25 ಲಕ್ಷ ರೂ. ಪರಿಹಾರ



**ಬಳ್ಳಾರಿ:** ಬಳ್ಳಾರಿಯಲ್ಲಿ ಬ್ಯಾನರ್ ಕಟ್ಟುವ ವಿಚಾರವಾಗಿ ನಡೆದ ಗಲಾಟೆ ವೇಳೆ ಗುಂಡು ತಗುಲಿ ಮೃತಪಟ್ಟಿದ್ದ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ್ ಕುಟುಂಬಕ್ಕೆ ಸಚಿವ ಜಮೀರ್ ಅಹ್ಮದ್ ಖಾನ್ 25 ಲಕ್ಷ ರೂಪಾಯಿ ಪರಿಹಾರ ನೀಡಿದ್ದಾರೆ. ಬಳ್ಳಾರಿಯ ಹುಸೇನ್ ನಗರದಲ್ಲಿರುವ ರಾಜಶೇಖರ್ ನಿವಾಸಕ್ಕೆ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಜಮೀರ್ ಅಹ್ಮದ್, ಕುಟುಂಬಸ್ಥರಿಗೆ ಸಾಂತ್ವನ ಹೇಳಿ ಧೈರ್ಯ ತುಂಬಿದರು. ಇದೇ ವೇಳೆ ಮೃತರ ಕುಟುಮ್ಬಕ್ಕೆ 25 ಲಕ್ಷ ರೂಪಾಯಿ ಪರಿಹಾರ ನೀಡಿದರು. ಕುಟುಂಬದ ಜೊತೆ ಕಾಂಗ್ರೆಸ್ ಪಕ್ಷ ಸರ್ಕಾರ ಸದಾ ಇರಲಿದೆ ಎಂದು ಭರವಸೆ ನೀಡಿದರು. ರಾಜಶೇಖರ್ ಕುಟುಂಬಕ್ಕೆ ಮನೆ ಕಟ್ಟಿ ಕೊಡಲಾಗುವುದು. ಪಕ್ಷದ ವತಿಯಿಂದಲೂ ನೆರವು ನೀಡಲಾಗುವುದು ಎಂದು ಹೇಳಿದರು.

# ‘ಜಿ ರಾಮ್ ಜಿ’ ವಿರುದ್ಧ ಕೈ ಹೋರಾಟ

## ಕಾಯ್ದೆ ಹಿಂಪಡೆಯುವವರೆಗೂ ನಿಲ್ಲಲ್ಲ: ಸಿಎಂ ಸಿದ್ದರಾಮಯ್ಯ ಘೋಷಣೆ

**ಬೆಂಗಳೂರು:** ಕೇಂದ್ರ ಸರ್ಕಾರ ಮನರೇಗಾ ಬದಲಿಗೆ ಜಾರಿಗೆ ತಂದಿರುವ ವಿಕಸಿತ ಭಾರತ ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ ಗ್ರಾಮೀಣ (ವಿಬಿ ಜಿ ರಾಮ್ ಜಿ) ಕಾಯ್ದೆಯನ್ನು ಹಿಂಪಡೆದು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಮನರೇಗಾ) ಕಾಯ್ದೆ ಮರುಸ್ಥಾಪಿಸುವರೆಗೆ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಹೋರಾಟ ನಡೆಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಸಚಿವರ ಜೊತೆ ಜಂಟಿ ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಹೊಸ ಕಾಯ್ದೆಯನ್ನು ಕಾಂಗ್ರೆಸ್ ಪಕ್ಷ ಸಂಪೂರ್ಣವಾಗಿ ವಿರೋಧಿಸುತ್ತದೆ. ದೇಶದಲ್ಲಿ ಮನರೇಗಾ ಕಾಯ್ದೆಯನ್ನು ಮತ್ತೆ ಸ್ಥಾಪಿಸಬೇಕು. ಹಳೆ ಕಾಯ್ದೆಯನ್ನು ವಾಪಸ್ ಪಡೆದಿರುವುದು ಮಹಿಳೆಯರಿಗೆ, ಸಣ್ಣ ರೈತರಿಗೆ ಮಾಡಿದ ದ್ರೋಹ ಎಂದು ವಾಗ್ದಾಳಿ ನಡೆಸಿದರು.

ರೈತರು ಹೋರಾಟ ಮಾಡಿ ತಮ್ಮ ವಿರುದ್ಧವಾಗಿದ್ದ ಕಾಯ್ದೆಗಳನ್ನು ಕೇಂದ್ರ ಸರ್ಕಾರ ವಾಪಸ್ ಪಡೆಯುವಂತೆ ಮಾಡಿದ್ದರು. ಅದೇ ರೀತಿ ಸಾರ್ವಜನಿಕರು, ಕೂಲಿ ಕಾರ್ಮಿಕರು, ಸಂಘ ಸಂಸ್ಥೆಗಳ ಜೊತೆ ಸೇರಿ ನಾವೂ ಹೋರಾಟ ಮಾಡುತ್ತೇವೆ. ಕೇಂದ್ರ ಸರ್ಕಾರ ವಿಬಿ ಜಿ ರಾಮ್ ಜಿ ಕಾಯ್ದೆ ವಾಪಸ್ ಪಡೆಯುವವರೆಗೆ ನಮ್ಮ ಹೋರಾಟ ನಿಲ್ಲುವುದಿಲ್ಲ ಎಂದು ಘೋಷಿಸಿದರು.

ಮನರೇಗಾ ಕಾಯ್ದೆಯನ್ನು ಮತ್ತೆ ಜಾರಿಗೆ ತರುವ ಮೂಲಕ ಬಡವರ, ದಲಿತರು ಹಾಗೂ ಸಣ್ಣ ರೈತರ ಉದ್ಯೋಗದ ಹಕ್ಕು ಪುನರ್ ಸ್ಥಾಪಿಸಬೇಕು. ಪಂಚಾಯಿತಿಗಳ ಸ್ವಯಂ ಆಡಳಿತ ಹಕ್ಕು ಮರುಸ್ಥಾಪಿಸಬೇಕು ಎಂದು ಸಿಎಂ ಆಗ್ರಹಿಸಿದರು.

ನರೇಗಾ ವಿಚಾರದಲ್ಲಿ ಪ್ರಧಾನಿ ಮಧ್ಯಪ್ರವೇಶಿಸಬೇಕು. ಹೊಸ ಕಾಯ್ದೆಯನ್ನು ಅಮಾನತಿನಲ್ಲಿಟ್ಟು, ರಾಜ್ಯ ಸರ್ಕಾರದ ಜೊತೆ ಸಮಾಲೋಚನೆ ನಡೆಸಬೇಕು ಎಂದು ಪ್ರಧಾನಿಗೆ ಈಗಾಗಲೇ ಪತ್ರ ಬರೆದಿದ್ದೇನೆ. ನರೇಗಾ ಕಾಯ್ದೆಯು ಕೇವಲ ಉದ್ಯೋಗ ನೀಡಲು ಮಾತ್ರ ಸೀಮಿತ ಆಗಿರಲಿಲ್ಲ. ಅದೊಂದು ಐತಿಹಾಸಿಕ ನಿರ್ಣಯ. ಗಾಂಧೀಜಿಯವರ ಗ್ರಾಮ ಸ್ವರಾಜ್ ಕನಸು ನನಸು ಮಾಡುವ ಯೋಜನೆ ಅದಾಗಿತ್ತು. ಗಾಂಧೀಜಿಯವರನ್ನು ಗೋಡ್ಸೆ ಕೊಂದ. ಹೊಸ ಯೋಜನೆಯ ಮೂಲಕ ಈಗ ಎರಡನೇ ಬಾರಿಗೆ ಗಾಂಧೀಜಿಯವರನ್ನು ಬಿಜೆಪಿಯವರು ಕೊಂದು ಹಾಕುತ್ತಿದ್ದಾರೆ. ಇಷ್ಟೊಂದು ದ್ವೇಷ ಇರಬಾರದು ಎಂದು ಸಿದ್ದರಾಮಯ್ಯ

ಪುಟ 2ಕ್ಕೆ



### ರಾಜ್ಯಾದ್ಯಂತ ಆಂದೋಲನ

**ಬೆಂಗಳೂರು:** ಹೊಸ ಕಾಯ್ದೆಯನ್ನು ವಾಪಸ್ ಪಡೆಯುವಂತೆ ನರೇಗಾ ಕಾರ್ಮಿಕರು ಮತ್ತು ಪಕ್ಷದ ನಾಯಕರು ಸೇರಿದಂತೆ ಎಲ್ಲರನ್ನೂ ಒಟ್ಟುಗೂಡಿಸಿ ತಾಲ್ಲೂಕು, ಜಿಲ್ಲೆ, ರಾಜ್ಯ ಮಟ್ಟದಲ್ಲಿ ಆಂದೋಲನ ರೂಪಿಸುತ್ತೇವೆ ಎಂದು ಕೆಪಿಸಿಸಿ ಅಧ್ಯಕ್ಷರಾದ ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ಮನರೇಗಾ ಕಾಯ್ದೆಯಲ್ಲಿ ಕೇಂದ್ರ ಸರ್ಕಾರವೇ ಪೂರ್ಣವಾಗಿ ವೆಚ್ಚ ಭರಿಸುತ್ತಿತ್ತು. ಈಗ ಕೇಂದ್ರ ಸರ್ಕಾರ ಶೇ 60, ರಾಜ್ಯ ಸರ್ಕಾರ ಶೇ 40 ಕೊಡಬೇಕಿದೆ. ಆ ಮೂಲಕ, ರಾಜ್ಯಗಳ ಮೇಲೆ ಹೊರೆ ಹೊರಿಸಲಾಗಿದೆ. ಮಹಾತ್ಮಾ ಗಾಂಧಿ ಅವರ ಹೆಸರು ಬಳಸಿಕೊಳ್ಳುವ ನೈತಿಕ ಹಕ್ಕನ್ನು ಬಿಜೆಪಿ ಕಳೆದುಕೊಂಡಿದೆ ಎಂದು ಅವರು ಟೀಕಿಸಿದರು.

### ಕಾರ್ಪೊರೇಟ್ ಕಂಪನಿಗಳಿಗೆ ಲಾಭ

**ಬೆಂಗಳೂರು:** ಜನರು ನೆಮ್ಮದಿಯಿಂದ ಜೀವಿಸುವ ವಾತಾವರಣಕ್ಕೆ ಕಾರಣವಾಗಿರುವ ಕಾನೂನುಗಳನ್ನು ನಾಶ ಮಾಡುವುದೇ ಬಿಜೆಪಿಯವರ ಕೆಲಸ. ಇದಕ್ಕೆ ಬಿಜೆಪಿಗೆ ಆರ್‌ಎಸ್‌ಎಸ್ ಮಾರ್ಗದರ್ಶಕ. ಹಿಂದಿನ ಕಾಯ್ದೆಯನ್ನು ನಾಶ ಮಾಡಿ, ಅದರಿಂದ ಕಾರ್ಪೊರೇಟ್ ಕಂಪನಿಗಳಿಗೆ ಲಾಭ ಮಾಡಲು ಕೇಂದ್ರ ಸರ್ಕಾರ ಹೊರಟಿದೆ ಎಂದು ಸಿಎಂ ಸಿದ್ದರಾಮಯ್ಯ ಆರೋಪಿಸಿದರು.

ಹಳೆ ಕಾಯ್ದೆ ಪ್ರಕಾರ ಇದ್ದ ಜಾಗದಲ್ಲಿಯೇ ಕೆಲಸ ಸಿಗುವ ಜೊತೆಗೆ, ಕಾರ್ಮಿಕರು ತಮ್ಮ ಮಕ್ಕಳನ್ನು ಹತ್ತಿರದ ಶಾಲೆಗೆ ಕಳುಹಿಸಬಹುದಿತ್ತು. ಆಸ್ತಿ ಸೃಜನೆ ಆಗುತ್ತಿತ್ತು. ಅವರಿಗೆ ಉದ್ಯೋಗ ಸಿಗುತ್ತಿತ್ತು. ಉದ್ಯೋಗ ಕೇಳಿ ಪಡೆಯುವ ಹಕ್ಕು ಅವರಿಗೆ ಇತ್ತು ಎಂದರು.

ಆಹಾರ ಭದ್ರತಾ ಕಾಯ್ದೆಯನ್ನು ಬಿಜೆಪಿ ಹಿರಿಯ ನಾಯಕ ಮುರಳಿ ಮನೋಹರ ಜೋಶಿ ಗೇಲಿ ಮಾಡಿದ್ದರು. ಇದು ಆಹಾರ ಗ್ಯಾರಂಟಿ ಅಲ್ಲ. ಮತ ಗ್ಯಾರಂಟಿ ಎಂದು ಟೀಕೆ ಮಾಡಿದ್ದರು. ಯೋಜನೆಗಳ ಹೆಸರು ಬದಲಾಯಿಸುವುದು ಬಿಜೆಪಿಯವರ ಸಾಧನೆ. ಕಳೆದ 11 ವರ್ಷಗಳಲ್ಲಿ ಬಿಜೆಪಿಯವರು 30 ಯೋಜನೆಗಳ ಹೆಸರು ಬದಲಾಯಿಸಿದ್ದಾರೆ ಅಥವಾ ವಾಪಸ್ ಪಡೆದಿದ್ದಾರೆ ಎಂದು ಟೀಕಿಸಿದರು.

ಕೇಂದ್ರ ಸರ್ಕಾರದ ನಡೆ ವಿಕೇಂದ್ರೀಕರಣಕ್ಕೆ, ಒಕ್ಕೂಟ ವ್ಯವಸ್ಥೆಗೆ, ಸಂವಿಧಾನಕ್ಕೆ ವಿರುದ್ಧವಾಗಿದೆ. ಸಂವಿಧಾನದ 73ನೇ ತಿದ್ದುಪಡಿ ಪ್ರಕಾರ, ಗ್ರಾಮ ಸಭೆಗೆ ಮತ್ತು ಗ್ರಾಮ ಪಂಚಾಯಿತಿಗೆ ಇದ್ದ ಅಧಿಕಾರವನ್ನು ಈಗ ಕೇಂದ್ರ ಸರ್ಕಾರ ಕಿತ್ತುಕೊಂಡಿದೆ. ಮನುಸ್ಮೃತಿಯು, ಮಹಿಳೆಯರು, ದಲಿತರು, ಶೂದ್ರರ ಬಳಿ ಹಣ ಇರಬಾರದು. ಸ್ವಾಭಿಮಾನದಿಂದ ಬದುಕಬಾರದು. ಅವರು ಸಂಪೂರ್ಣ ಸೇವಕರಾಗಿರಬೇಕು ಎಂದು ಹೇಳುತ್ತದೆ. ಅದರಿಂದ ಪ್ರೇರೇಪಣೆ ಪಡೆದವರು ಆರ್‌ಎಸ್‌ಎಸ್‌ನವರು. ಅವರು ಬಿಜೆಪಿ ಸರ್ಕಾರಕ್ಕೆ ಮಾರ್ಗದರ್ಶಕರು ಎಂದು ವಾಗ್ದಾಳಿ ನಡೆಸಿದರು.

### ನಿರುದ್ಯೋಗ ಹೆಚ್ಚಳ

**ಹೊಸ ಕಾಯ್ದೆಯಿಂದ ನಿರುದ್ಯೋಗದ ಪ್ರಮಾಣ ಹೆಚ್ಚಳ ಆಗಲಿದೆ. ಕನಿಷ್ಠ ವೇತನದ ರಕ್ಷಣೆ ಇಲ್ಲದೆ ಕಾರ್ಮಿಕರು ಸಂಕಷ್ಟ ಅನುಭವಿಸಲಿದ್ದಾರೆ. ಕಾರ್ಮಿಕರು ಶೋಷಣೆ, ಒತ್ತಡಕ್ಕೆ ಒಳಗಾಗಲಿದ್ದಾರೆ. ಉದ್ಯೋಗದಲ್ಲಿ ಮಹಿಳೆಯರ ಪಾಲುದಾರಿಕೆ ಇಳಿಕೆ ಆಗಲಿದೆ. ದಲಿತರು ಮತ್ತು ಆದಿವಾಸಿಗಳ ಮೇಲೆ ಒತ್ತಡ**

ಪುಟ 2ಕ್ಕೆ

## ಮೈಸೂರು ವಿವಿ ಘಟಿಕೋತ್ಸವ ನಾಳೆ

### ರಾಜೇಂದ್ರಸಿಂಗ್ ಬಾಬು ಸೇರಿ ಮೂವರಿಗೆ ಗೌರವ ಡಾಕ್ಟರೇಟ್



**ಮೈಸೂರು:** ಚಲನಚಿತ್ರ ನಿರ್ದೇಶಕ ಎಸ್.ವಿ.ರಾಜೇಂದ್ರಸಿಂಗ್ ಬಾಬು, ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಟಿ.ಶ್ಯಾಮಭಟ್ ಮತ್ತು ಗ್ಲೋಬಲ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಪಿ.ಜಯಚಂದ್ರರಾಜು ಅವರಿಗೆ ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ನೀಡಲಾಗುತ್ತದೆ.


ನಗರದ ಕ್ರಾಫರ್ಡ್ ಭವನದಲ್ಲಿ ಜ.5ರಂದು ನಡೆಯಲಿರುವ 106ನೇ ವಾರ್ಷಿಕ ಘಟಿಕೋತ್ಸವದಲ್ಲಿ 30966 ಮಂದಿಗೆ ಪದವಿ ಪ್ರದಾನ ಮಾಡಲಾಗುತ್ತದೆ ಎಂದು ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಧ್ಯಕ್ಷತೆ ವಹಿಸುವರು. ಇಸ್ರೊ ಮಾಜಿ ಅಧ್ಯಕ್ಷ ಎಸ್.ಸೋಮನಾಥ್ ಭಾಗವಹಿಸುವರು. 26 ಮಂದಿಯ ಹೆಸರನ್ನು ಗೌರವ ಡಾಕ್ಟರೇಟ್‌ಗೆ ಶಿಫಾರಸು ಮಾಡಲಾಗಿತ್ತು. ಈ ಪೈಕಿ ಮೂವರಿಗೆ ಗೌರವ ಡಾಕ್ಟರೇಟ್ ನೀಡಲಾಗುತ್ತಿದ ಎಂದರು.

ಈ ಸಾಲಿನಲ್ಲಿ 18612 ಮಂದಿ ಮಹಿಳೆಯರು ಸೇರಿದಂತೆ 30966 ಮಂದಿ ಪದವಿ ಪಡೆಯಲಿದ್ದಾರೆ. 211 ಮಹಿಳೆಯರು ಮತ್ತು 238 ಪುರುಷರು ಸೇರಿ

ಪುಟ 2ಕ್ಕೆ

### ನಿವೃತ್ತಿ ವೇತನಕ್ಕೆ ಹಣವಿಲ್ಲ



ಪ್ರತಿ ವರ್ಷ ಸರ್ಕಾರದಿಂದ 50 ಕೋಟಿ ನಿವೃತ್ತ ವೇತನ ಕೊಡುತ್ತಿತ್ತು. ಕೋವಿಡ್ ಬಳಿಕ ಅದನ್ನು ನಿಲ್ಲಿಸಿದ್ದಾರೆ. ಅಲ್ಲದೆ ಈಗ 150 ಕೋಟಿ ಅವಶ್ಯತೆಯಿದೆ. ಹೀಗಾಗಿ ಸಮಸ್ಯೆ ಬಗ್ಗೆ ಸರ್ಕಾರಕ್ಕೆ ತಿಳಿಸಿದ್ದೇವೆ. ಸರ್ಕಾರ

ಪುಟ 2ಕ್ಕೆ

## ರೆಡ್ಡಿ ಜೈಲಿನಿಂದ ಬಂದ್ಮೇಲೆ ಗಲಾಟೆ ಶುರು!

### ಭರತ್ ರೆಡ್ಡಿ ಹೇಳಿಕೆಗೆ ಡಿ.ಕೆ.ಶಿವಕುಮಾರ್ ಹಾರಿಕೆ ಉತ್ತರ


**ಬೆಂಗಳೂರು:** ಕಳೆದ ಲೋಕಸಭಾ, ವಿಧಾನಸಭೆ ಚುನಾವಣೆ ಸೋಲನ್ನು ಬಿಜೆಪಿ ನಾಯಕರಿಗೆ ಅರಗಿಸಿಕೊಳ್ಳಲು ಆಗ್ತಾ ಇಲ್ಲ. ಬಳ್ಳಾರಿಗೆ ಜನಾರ್ದನ ರೆಡ್ಡಿ ಬರುವ ತನಕ ಒಂದೇ ಒಂದು ಗಲಾಟೆ ಆಗಿರಲಿಲ್ಲ. ಜೈಲಿನಿಂದ ಬಿಡುಗಡೆಯಾಗಿ ರೆಡ್ಡಿ ಬಳ್ಳಾರಿಗೆ ಕಾಲಿಟ್ಟ ನಂತರ ಗಲಾಟೆ ಶುರುವಾಗಿದೆ. ನಮ್ಮ ಶಾಸಕ ಗಲಾಟೆ ಕಂಟ್ರೋಲ್ ಮಾಡಲು ಹೋಗಿದ್ದರು ಎಂದು ಡಿ.ಕೆ.ಶಿವಕುಮಾರ್ ಹೇಳಿದರು.



ಇಡೀ ಬಳ್ಳಾರಿಗೆ ಬೆಂಕಿ ಹಚ್ಚುತ್ತಿದ್ದೆ ಅನ್ನೋ ಭರತ್ ರೆಡ್ಡಿ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಡಿಕೆಶಿ, ಯಾರು ಹೋಗ್ತಾರೆ ಬೆಂಕಿ ಹಚ್ಚಲು? ಅವರು ಹೇಳಿದ್ದು ಗೊತ್ತಿಲ್ಲ. ನೋಡ್ತೀನಿ ಅಂತ ಭರತ್ ರೆಡ್ಡಿ ಹೇಳಿಕೆಗೆ ಹಾರಿಕೆ ಉತ್ತರ ಕೊಟ್ಟರು.

ಜನಾರ್ದನ ರೆಡ್ಡಿ ಕೊಲೆಗೆ ಸಂಚು ಅನ್ನೋ ಆರೋಪಕ್ಕೆ ಪ್ರತಿಕ್ರಿಯೆ ನೀಡಿ, ಅವೆಲ್ಲಾ ಸುಳ್ಳು. ಕೋಟೆ ಕಟ್ಟಿಕೊಂಡು ಕುಳಿತಿದ್ದಾರೆ. ಯಾರು ಕೊಲೆ

ಪುಟ 2ಕ್ಕೆ



### ಕೊಲೆಗೆ ಬಿಜೆಪಿ ಕಾರಣ

**ಬೆಂಗಳೂರು:** ಬಳ್ಳಾರಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತನ ಕೊಲೆಗೆ ಬಿಜೆಪಿಯೇ ಕಾರಣ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ನೇರ ಆರೋಪ ಮಾಡಿದರು. ಅಲ್ಲದೆ, ನಮ್ಮ ಪಕ್ಷ ಕಾಂಗ್ರೆಸ್ ಶಾಸಕ ಭರತ್ ರೆಡ್ಡಿ ಪರ ನಿಲ್ಲಲಿದೆ ಎಂದು ಹೇಳಿದರು.

ಬೆಂಗಳೂರಿನಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಳ್ಳಾರಿ ಪ್ರಕರಣದಲ್ಲಿ ಕಾನೂನು ಪ್ರಕಾರ ಕ್ರಮ ಆಗುತ್ತದೆ. ನಾನು ನಮ್ಮ

ಪುಟ 2ಕ್ಕೆ

## ಬಾಗಲಕೋಟೆ, ದಾವಣಗೆರೆ ಉಪ ಚುನಾವಣೆಗೆ ಸಿದ್ಧತೆ

**ಬೆಂಗಳೂರು:** ಕಾಂಗ್ರೆಸ್ ಶಾಸಕರಾದ ಎಚ್.ವೈ.ಮೇಟಿ ಮತ್ತು ಶಾಮನೂರು ಶಿವಶಂಕರಪ್ಪ ಅವರ ನಿಧನದ ಬಳಿಕ ತೆರವಾಗಿರುವ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆ ನಡೆಸಲು ಚುನಾವಣಾ ಆಯೋಗ ಸಿದ್ಧತೆ ನಡೆಸಿದೆ.



2026ರ ಜ.1ಕ್ಕೆ ಅನ್ವಯಿಸುವಂತೆ ಅರ್ಹ ಮತದಾರರ ಪಟ್ಟಿಯನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪ್ರಕಟಿಸ ಲಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾ ಆಯುಕ್ತರು ತಿಳಿಸಿದ್ದಾರೆ. ಇದಕ್ಕೆ ಯಾವುದೇ ತಕಾರಾರು ಇದ್ದಲ್ಲಿ ಜ.24ರ ಒಳಗಾಗಿ ಸಲ್ಲಿಸುವಂತೆ ಆಯೋಗ ತಿಳಿಸಿದೆ. ಸಲ್ಲಿಕೆಯಾದ ತಕರಾರು ಅರ್ಜಿಗಳ ವಿಲೇವಾರಿ ಫೆ.7ರಂದು ನಡೆಯುಲಿದೆ. ಮತದಾರರ ಅಂತಿಮ ಪಟ್ಟಿ ಫೆ. 14ರಂದು ಪ್ರಕಟಿಸಲಾಗುವುದು ಎಂದು ಆಯೋಗ ತಿಳಿಸಿದೆ.

## ಭರತ್ ರೆಡ್ಡಿ ವಿರುದ್ಧ ದ್ವೇಷ ಭಾಷಣ ಕಾಯ್ದೆಯಡಿ ದೂರು ದಾಖಲಿಸಿ: ಛಲವಾದಿ

**ಹುಬ್ಬಳ್ಳಿ:** ಬಳ್ಳಾರಿಯ ಕೊಲೆ ಪ್ರಕರಣದ ಪ್ರಮುಖ ಆರೋಪಿ ಕಾಂಗ್ರೆಸ್ ಶಾಸಕ ಭರತ್ ರೆಡ್ಡಿ. ದ್ವೇಷ ಭಾಷಣ ಕಾಯ್ದೆಯಡಿ ಭರತ್ ರೆಡ್ಡಿಯನ್ನು ಬಂಧನ ಮಾಡಬೇಕು ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆಗ್ರಹಿಸಿದರು.



ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಬ್ಯಾನರ್ ಅಳವಡಿಸಿದಾಗ ಗಲಾಟೆ ನಡೆದಿದೆ. ಆ ಸಂದರ್ಭ ಜನಾರ್ದನ ರೆಡ್ಡಿ ಸ್ಥಳದಲ್ಲಿರಲಿಲ್ಲ. ಆಗ ಸ್ಥಳಕ್ಕೆ ಬಂದ ಶಾಸಕ ಭರತ್ ರೆಡ್ಡಿ ಐದು ನಿಮಿಷದಲ್ಲಿ ಸುಟ್ಟು ಹಾಕುತ್ತಿದ್ದೆ, ಮೂರ್ತಿ ಪ್ರತಿಷ್ಠಾಪನೆಯಿಂದಾಗಿ ಬಿಟ್ಟಿದ್ದೇನೆ ಎಂದು ಬೆದರಿಕೆ ಹಾಕಿದ್ದರು. ಇದು ದ್ವೇಷ ಭಾಷಣ ಕಾಯ್ದೆಯಡಿ ಬರುವುದಿಲ್ಲವೇ ಎಂದು ಪ್ರಶ್ನಿಸಿದರು.

ಬಳ್ಳಾರಿಯಲ್ಲಿ ನಡೆದ ಗಲಾಟೆ ಪ್ರಕರಣಕ್ಕೆ ಕಾರಣ ಯಾರು ಎನ್ನುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸ್ಪಷ್ಟವಾಗಿ ತಿಳಿದಿದೆ. ಹೀಗಾಗಿಯೇ ಶಾಸಕ ಭರತ್ ರೆಡ್ಡಿ ದೂರವಾಣಿ ಕರೆ ಮಾಡಿದರೂ ಅವರ ಜೊತೆ ಸಿಎಂ ಮಾತನಾಡಲಿಲ್ಲ. ಉಸ್ತುವಾರಿ ಸಚಿವ ಸಲೀಂ ಅಹ್ಮದ್ ಅವರ ಜೊತೆ ಮಾತನಾಡಿ, ಶಾಸಕರಿಗೆ ಬುದ್ಧಿ ಹೇಳಿ ಎಂದಿದ್ದಾರೆ. ಮುಖ್ಯಮಂತ್ರಿ ಅವರು ಯಾರು ತನ್ನವರು ಎಂದುಕೊಂಡಿದ್ದರೋ,

ಪುಟ 2ಕ್ಕೆ

## ಗನ್‌ಮ್ಯಾನ್‌ಗಳು ಪರಾರಿ

**ಬಳ್ಳಾರಿ:** ಬ್ಯಾನರ್ ಅಳವಡಿಕೆ ವಿಚಾರವಾಗಿ ನಡೆದ ಗಲಾಟೆಯಲ್ಲಿ ನಡೆದ ಫೈರಿಂಗ್ ಪ್ರಕರಣದ ಬೆನ್ನಲ್ಲೇ ಸತೀಶ್ ರೆಡ್ಡಿ ಖಾಸಗಿ ಗನ್‌ಮ್ಯಾನ್‌ಗಳು ನಾಪತ್ತೆಯಾಗಿದ್ದಾರೆ.

ಗಲಾಟೆ ವೇಳೆ ಸತೀಶ್ ರೆಡ್ಡಿ ಗನ್‌ಮ್ಯಾನ್‌ಗಳು ಗುಂಡು ಹಾರಿಸಿದ್ದರು. ಈಗಾಗಲೇ ಜನಾರ್ದನ ರೆಡ್ಡಿ ಹಾಗೂ ಸತೀಶ್ ರೆಡ್ಡಿಗೆ ಸಂಬಂಧಿಸಿದ ಗನ್ ಮ್ಯಾನ್‌ಗಳಿಂದ ಪೊಲೀಸರು 5 ಗನ್‌ಗಳನ್ನು ವಶಕ್ಕೆ ಪಡೆದಿದ್ದಾರೆ. ಗನ್‌ಗಳನ್ನ ವಶಕ್ಕೆ ಪಡೆದ ಬೆನ್ನಲ್ಲೇ ಸತೀಶ್ ರೆಡ್ಡಿ ಖಾಸಗಿ ನಾಲ್ವರು ಗನ್ ಮ್ಯಾನ್‌ಗಳು ನಾಪತ್ತೆಯಾಗಿದ್ದಾರೆ. ಎಲ್ಲಿಗೆ ನಾಪತ್ತೆಯಾಗಿದ್ದಾರೆಂಬ ಸುಳಿವು ಪತ್ತೆಯಾಗಿಲ್ಲ.

ಬ್ಯಾನರ್ ಅಳವಡಿಕೆ ವಿಚಾರವಾಗಿ ಶಾಸಕ ಜನಾರ್ದನ ರೆಡ್ಡಿ ನಿವಾಸದ ಬಳಿ ಗಲಾಟೆ ವೇಳೆ ನಡೆದ ಫೈರಿಂಗ್‌ನಲ್ಲಿ ಕಾಂಗ್ರೆಸ್ ಕಾರ್ಯಕರ್ತ ಮೃತಪಟ್ಟಿದ್ದರು. ಈ ಬೆಳವಣಿಗೆ ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರ ಜಟಾಪಟಿಗೆ ಕಾರಣವಾಗಿದೆ. ಘಟನೆಗೆ ಸಂಬಂಧಿಸಿದ ವಿಡಿಯೋಗಳು ರಿಲೀಸ್ ಆಗಿವೆ. ಗಲಾಟೆ ವೇಳೆ ಸತೀಶ್ ರೆಡ್ಡಿ ಗನ್‌ಮ್ಯಾನ್‌ಗಳು ಫೈರಿಂಗ್ ಮಾಡಿರುವುದು ವಿಡಿಯೋದಲ್ಲಿ ಕಂಡುಬಂದಿದೆ. ಯಾರ ಗುಂಡು ಮೃತನಿಗೆ ತಗುಲಿದೆ ಎಂಬ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

## ಚುಂಚನಕಟ್ಟೆ ಜಾನುವಾರು ಜಾತ್ರೆಗೆ ಬನ್ನಿ!





**ಶ್ಯಾಮ್ ಸುಂದರ್ ಕೆ.ಆರ್** ಕೆ.ಆರ್.ನಗರ

ಇತಿಹಾಸ ಪ್ರಸಿದ್ಧ ಚುಂಚನಕಟ್ಟೆ ಜಾತ್ರೆ ಆರಂಭವಾಗಿದೆ. ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆಯಲ್ಲಿ ವರ್ಷದ ಮೊದಲ ಜಾತ್ರೆ ಎನ್ನಲಾದ ಜಾನುವಾರು ಜಾತ್ರೆ ಪ್ರಾರಂಭವಾಗಿದೆ.

ವರ್ಷದ ಸುಗ್ಗಿಯ ನಂತರ ನಡೆಯುವ ಮೊದಲ ಜಾತ್ರೆ ಆಗಿರುವುದರಿಂದ ರೈತರಲ್ಲಿ ಉತ್ಸಾಹ ಮೂಡಿದೆ. ಜಾತ್ರೆಗೆ ವಿವಿಧ ಜಿಲ್ಲೆಗಳಿಂದ ರೈತರು ಜಾನುವಾರಗಳೊಂದಿಗೆ ಆಗಮಿಸುತ್ತಾರೆ. ರೈತರು ರಾಸುಗಳನ್ನು ಶೃಂಗಾರ ಮಾಡುತ್ತಾರೆ. ಎತ್ತ ನೋಡಿದರು ಶೃಂಗಾರಗೊಂಡ ಜಾನುವಾರು ಕಾಣಸಿಗುತ್ತದೆ. ಈ ದೃಶ್ಯವನ್ನು ಕಣ್ಣು ತುಂಬಿಕೊಳ್ಳುವುದೇ ಸೊಗಸು.

ಈ ಬಾರಿ 80 ಸಾವಿರದಿಂದ ಹತ್ತು ಲಕ್ಷ ವರೆಗಿನ ಬೆಲೆಯ ಎತ್ತುಗಳು ಜಾತ್ರೆಯಲ್ಲಿ ಜನಾಕರ್ಷಣೆ ಕೇಂದ್ರ ಬಿಂದುವಾಗಿವೆ. ಚುಂಚನಕಟ್ಟೆಯ ಜಾತ್ರೆಗೆ ಜಾನುವಾರು ಕೊಳ್ಳಲು ದೂರದ ಗದಗ ಬಳ್ಳಾರಿ, ಧಾರವಾಡ, ಕಲಬುರ್ಗಿ ಸೇರಿದಂತೆ ನೆರೆ ರಾಜ್ಯಗಳಾದ ಮಹಾರಾಷ್ಟ್ರ, ತಮಿಳುನಾಡು, ಆಂಧ್ರದಿಂದ ಸಹ ರೈತರ ದಂಡು ದಂಡಾಗಿ ಬರುತ್ತಾರೆ.

ಕೃಷಿಗೆ ಯಂತ್ರೋಪಕರಣ ಬಳಕೆ ಹೆಚ್ಚಾಗಿದ್ದರೂ ಕೂಡ ರೈತರಿಗೆ ಜೋಡೆತ್ತುಗಳ ಮೇಲೆ ಇರುವ ಪ್ರೀತಿ ಕಡಿಮೆಯಾಗಿಲ್ಲ. ದುಡಿಮೆಗೆ ಹೊಂದಿಕೊಳ್ಳುವ ಹಳ್ಳಿ ಕಾರ್ ಎತ್ತುಗಳಿಗೆ ಎಲ್ಲಿಲ್ಲದ ಬೇಡಿಕೆ ಇದೆ. ಪ್ರಮುಖ ಆಕರ್ಷಣೆಯಾಗಿದೆ.

ಚುಂಚನಕಟ್ಟೆಯ ಬಸವೇಶ್ವರ ವೃತ್ತದಿಂದ ದೇವಸ್ಥಾನದವರೆಗೆ ಆಟಿಕೆ ಅಂಗಡಿ ಕಡ್ಲೆಪುರಿ ಅಂಗಡಿ, ಸಿಹಿ ತಿಂಡಿ, ಪಾನಿಪುರಿ ಗೋಬಿ ಅಂಗಡಿ ವಿವಿಧ ಬಗೆಯ ಸಸ್ಯಾಹಾರಿ ಹಾಗೂ ಮಾಂಸಾಹಾರಿ ಹೋಟೆಲ್ ಗಳಲ್ಲಿ ಭರ್ಜರಿ ವ್ಯಾಪಾರ ನಡೆಯುತ್ತಿದೆ. ರಾಸುಗಳಿಗೆ ಯಾವುದೇ ರೋಗರುಜಿನ ಬಾರದಂತೆ ಪಶು ಇಲಾಖೆ ಸಹಾಯಕ ನಿರ್ದೇಶಕ ಡಾ.ಕೆ.ಸಿ.ರಾಮು ನೇತೃತ್ವದಲ್ಲಿ ತಾತ್ಕಾಲಿಕ ಪಶು ಚಿಕಿತ್ಸಾ ಕೇಂದ್ರ ಸ್ಥಾಪಿಸಲಾಗಿದೆ.

## ಬಳ್ಳಾರಿ ಗಲಾಟೆ: ಎಸ್‌ಪಿ ಪವನ್ ಪಾರ್ಟಿ!

### ಕೊಲೆ ನಡೆದರೂ ಸ್ಥಳಕ್ಕೆ ಬಾರದ ನಿಜ್ಜೂರು, ಚಿತ್ರದುರ್ಗ ಎಸ್‌ಪಿ ಆಗಮನ

**ಬೆಂಗಳೂರು:** ಬಳ್ಳಾರಿಗೆ ಹೊಸದಾಗಿ ವರ್ಗಾವಣೆ ಆಗಿದ್ದ ಎಸ್‌ಪಿ ಪವನ್ ನಿಜ್ಜೂರು ಅವರು ಗುರುವಾರ ರಾತ್ರಿ ಪಾರ್ಟಿ ಮೂಡ್‌ನಲ್ಲಿದ್ದ ಕಾರಣ ಅವರು ಗಲಾಟೆ ಸ್ಥಳಕ್ಕೆ ತೆರಳಲಿಲ್ಲ ಎನ್ನಲಾಗಿದೆ. ಶಾಸಕ ಜನಾರ್ದನ ರೆಡ್ಡಿ ನಿವಾಸದ ಮುಂದೆ ನಡೆದ ಘರ್ಷಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪವನ್ ನಿಜ್ಜೂರು ಅವರನ್ನು ಸರ್ಕಾರ ಶುಕ್ರವಾರ ಅಮಾನತು ಮಾಡಿತ್ತು.



ಬಳ್ಳಾರಿ ಎಸ್‌ಪಿಯಾಗಿ ಜ.1ರಂದು ಪವನ್ ನೆಜ್ಜೂರ್ ಅವರು, ಶೋಭಾರಾಣಿ ಅವರಿಂದ ಅಧಿಕಾರ ಸ್ವೀಕರಿಸಿದ್ದರು. ಅಧಿಕಾರ ಸ್ವೀಕರಿಸಿದ ನಂತರ ಎಸ್‌ಪಿ ಶೋಭಾರಾಣಿ ಅವರು ಸಿಬ್ಬಂದಿಗೆ ಪಾರ್ಟಿ ನೀಡಿದ್ದರು. ಈ ಪಾರ್ಟಿಯಲ್ಲಿ ಪವನ್ ನಿಜ್ಜೂರು ಮದ್ಯ ಸೇವಿಸಿದ್ದರು.

ಅಂದು ರಾತ್ರಿ ವೇಳೆ ಶಾಸಕ ಜನಾರ್ದನ ರೆಡ್ಡಿ ನಿವಾಸದ ಮುಂದೆ ಗಲಾಟೆ ಆರಂಭವಾಗಿತ್ತು. ಗಲಾಟೆ ನಡೆಯುತ್ತಿದ್ದರೂ ಪವನ್ ಅವರು ಸ್ಥಳಕ್ಕೆ ಹೋಗಿರಲಿಲ್ಲ. ಈ ಸಂದರ್ಭದಲ್ಲಿ ಹಿರಿಯ ಅಧಿಕಾರಿಗಳಿಗೆ ಅವರು ಮಾಹಿತಿ ನೀಡಬೇಕಿತ್ತು. ಗಲಾಟೆ ವಿಕೋಪಕ್ಕೆ ತಿರುಗಿದ ಬೆನ್ನಲ್ಲೇ ಕಾನೂನು ಸುವ್ಯವಸ್ಥೆ ಎಡಿಜಿಪಿ ಆರ್.ಹಿತೇಂದ್ರ ಮತ್ತು ಡಿಜಿ & ಐಜಿ ಸಲೀಂ ಫೋನ್ ಮಾಡಿದರೂ ಪವನ್ ಕರೆಯನ್ನೇ ಸ್ವೀಕರಿಸಿರಲಿಲ್ಲ. ಕೂಡಲೇ ಚಿತ್ರದುರ್ಗದ ಎಸ್‌ಪಿಗೆ ಸ್ಥಳಕ್ಕೆ ಹೋಗುವಂತೆ ಹಿರಿಯ ಅಧಿಕಾರಿಗಳು ಸೂಚನೆ ನೀಡಿದ್ದರು.

ಕೊನೆಗೆ ತಡರಾತ್ರಿ ಪವನ್ ನೆಜ್ಜೂರ್ ಸ್ಥಳಕ್ಕೆ ಭೇಟಿ ನೀಡಿದ್ದರು. ಪವನ್ ಅವರು ಸ್ಥಳಕ್ಕೆ ಭೇಟಿ ನೀಡುವ ಮೊದಲೇ ಉಳಿದ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ತೆರಳಿ ಪರಿಸ್ಥಿತಿ ನಿಭಾಯಿಸಿದ್ದರು. ಅತಿಯಾದ ಕುಡಿತದಿಂದ ನಿಯಂತ್ರಣ ಕಳೆದುಕೊಂಡಿದ್ದರಿಂದ ಮಾಧ್ಯಮಗಳ ಮುಂದೆ ಪವನ್ ಬಾರದಂತೆ ಹಿರಿಯ ಅಧಿಕಾರಿಗಳು

ಪುಟ 2ಕ್ಕೆ

### ಆತ್ಮಹತ್ಯೆಗೆ ಯತ್ನಿಸಿಲ್ಲ: ಡಿಸಿಪಿ

**ಬೆಂಗಳೂರು:** ಬಳ್ಳಾರಿ ಎಸ್‌ಪಿ ಪವನ್ ನಿಜ್ಜೂರ್ ಆತ್ಮಹತ್ಯೆಗೆ ಯತ್ನಿಸಿಲ್ಲ ಎಂದು ಬೆಂಗಳೂರು ಸಿಸಿಬಿ ಡಿಸಿಪಿ ಶ್ರೀಹರಿಬಾಬು ತಿಳಿಸಿದರು.

ಆರೋಗ್ಯದಲ್ಲಿ ಏರುಪೇರಾದ ಹಿನ್ನೆಲೆಯಲ್ಲಿ ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ. ಈಗ ಶಿರಾ ಬಳಿಯ ಫಾರ್ಮ್‌ಹೌಸ್‌ನಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ. ಪವನ್ ಆತ್ಮಹತ್ಯೆಗೆ ಯತ್ನಿಸಿದ್ದರು ಎಂಬ ವರದಿ ಸುಳ್ಳು ಎಂದು ಹೇಳಿದರು.

ಬಳ್ಳಾರಿಯಿಂದ ಮಂಡ್ಯ ಎಸ್‌ಪಿಯಾಗಿ ವರ್ಗಾವಣೆಯಾಗಿರುವ ಶೋಭಾರಣಿ ಮಾತನಾಡಿ, ಪವನ್ ನಿಜ್ಜೂರ್ ಆತ್ಮಹತ್ಯೆಗೆ ಯತ್ನಿಸಿಲ್ಲ. ನಾನು ಅವರ ಜೊತೆ ಮಾತನಾಡಿದ್ದೇನೆ. ಆತ್ಮಹತ್ಯೆ

ಪುಟ 2ಕ್ಕೆ

## ನಾಳೆ ಕುಂಬಾರರ ಮಹಾಸಮ್ಮೇಳನ, ಅಮೃತ ಮಹೋತ್ಸವ

ಮೈಸೂರು,ರಾಜ್ಯ ಕುಂಬಾರರ ಮಹಾ ಸಮ್ಮೇಳನ ಹಾಗೂ ಅಮೃತ ಮಹೋತ್ಸವ ಕಾರ್ಯಕ್ರಮ ಜ.5ರಂದು ಬೆಳಗ್ಗೆ 10.30ಕ್ಕೆ ನಗರದ ಕಲಾ ಮಂದಿರದಲ್ಲಿ ಜರುಗಲಿದೆ ಎಂದು ಅಧ್ಯಕ್ಷ ಎಚ್.ಎಸ್.ಪ್ರಕಾಶ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸಮುದಾಯದ ಸ್ವಾಮೀಜಿಗಳಾದ ಮೋಹನದಾಸ್ ಪರಮಹಂಸ ಸ್ವಾಮೀಜಿ, ಬಸವ ಕುಂಬಾರ ಗುಂಡಯ್ಯ ಸ್ವಾಮೀಜಿ, ಬಸವಮೂರ್ತಿ ಕುಂಬಾರ ಗುಂಡಯ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಸಿಎಂ ಸಿದ್ದರಾಮಯ್ಯ, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಡಿಸಿಎಂ ಡಿ.ಕೆ. ಶಿವಕುಮಾರ್ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಉದ್ಘಾಟಿಸುವರು, ಇನ್ನಿತರ ಸಚಿವರಾದ ಕೆ.ವೆಂಕಟೇಶ್, ಸತೀಶ್ ಜಾರಕಿಹೊಳಿ, ಡಾ.ರಾಮಲಿಂಗಾರೆಡ್ಡಿ, ಶಿವರಾಜ ತಂಗಡಗಿ, ಧರ್ಮವೀರ್ ಪ್ರಜಾಪತಿ, ಪ್ರೇಮೇಂದ್ರ ವಿಷ್ಣುಸೇನಾ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನಿಲ್ ಬೋಸ್ ಇನ್ನಿತರರು ವೇದಿಕೆಯಲ್ಲಿರಲಿದ್ದು, ತಾವು ಅಧ್ಯಕ್ಷತೆ ವಹಿಸುವುದಾಗಿ ತಿಳಿಸಿದರು.

ಪ್ರಧಾನ ಕಾರ್ಯದರ್ಶಿ ಕೆ.ಆರ್. ಸೋಮಶೇಖರ್ ಮಾತನಾಡಿ, ಸಮುದಾಯವನ್ನು ಒಗ್ಗೂಡಿಸಿ, ಒಂದೇ ವೇದಿಕೆಗೆ ಬರುವಂತೆ ಮಾಡಿ, ಸರ್ಕಾರದ ಸೌಲಭ್ಯಗಳು ದೊರಕಿಸುವಂತೆ ಮಾಡುವ ಪ್ರಯತ್ನ ಇದಾಗಿದೆ ಎಂದರು. ಆಡಳಿತ ಮಂಡಳಿ ಸದಸ್ಯ ಡಾ.ಎಂ.ಪಿ. ವರ್ಷ ಮಾತನಾಡಿದರು. ಮಂಜುನಾಥ್, ವೆಂಕಟೇಶ್, ಚಂದ್ರಶೇಖರ್, ಮಾರಶೆಟ್ಟಿ, ಇನ್ನಿತರರು ಇದ್ದರು.

# ಒಳಮೀಸಲಾತಿಯಲ್ಲಿ ಕಾಂಗ್ರೆಸ್ ಢೋಂಗಿತನ ಪ್ರದರ್ಶನ




ಮೈಸೂರು: ಸಿಎಂ ಸಿದ್ದರಾಮಯ್ಯ ಸರ್ಕಾರ ಸಾಮಾಜಿಕ ನ್ಯಾಯಪರ ಎಂದು ಹೇಳಿಕೊಳ್ಳುತ್ತ ಢೋಂಗಿತನ ಪ್ರದರ್ಶಿಸುತ್ತಿದೆ. ಒಳ ಮೀಸಲಾತಿಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ತೀರ್ಪು ಬಂದು 16 ತಿಂಗಳೇ ಕಳೆದರೂ ಸಮರ್ಪಕವಾಗಿ ಜಾರಿಗೊಳಿಸದೇ ಅನ್ಯಾಯ ಮಾಡುತ್ತಿದೆ ಎಂದು ಕರ್ನಾಟಕ ರಾಜ್ಯ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷ ಹಾಗೂ ವಕೀಲ ಅರುಣ್ ಕುಮಾರ್ ಕಿಡಿಕಾರಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸುಪ್ರೀಂಕೋರ್ಟ್ನ 7 ಸದಸ್ಯರ ಪೀಠ 2024 ರ ಆ. 1 ರಂದು ಐತಿಹಾಸಿಕ ತೀರ್ಪು ನೀಡಿ ಒಳ ಮೀಸಲಾತಿಯನ್ನು ಜಾರಿ ಮಾಡುವ ಅಧಿಕಾರ ರಾಜ್ಯಗಳಿಗೆ ಇದೆ ಎಂದು ಸ್ಪಷ್ಟವಾಗಿ ಹೇಳಿದೆ. ಅದರಂತೆ ಹರ್ಯಾಣ, ತೆಲಂಗಾಣ, ಆಂಧ್ರಪ್ರದೇಶ ಸರ್ಕಾರಗಳು ಕೇವಲ 6 ತಿಳಗಂಲ್ಲಿ ಒಳ ಮೀಸಲಾತಿಯನ್ನು ವೈಜ್ಞಾನಿಕವಾಗಿ, ಗೊಂದಲ ಇಲ್ಲದಂತೆ ಜಾರಿ ಮಾಡಿವೆ. ಆದರೆ ಕರ್ನಾಟಕ ಸರ್ಕಾರ 16 ತಿಂಗಗಳ ನಂತರವೂ ತಾನೇ ಮಾಡಿಕೊಂಡ ಗೊಂದಲ ಕಾರಣ ಒಳ ಮೀಸಲಾತಿ ಜಾರಿಗೊಳಿಸದೇ ತಿಣುಕಾಡುತ್ತಿದೆ ಎಂದು ಬೇಸರಿಸಿದರು.

ನ್ಯಾ. ನಾಗಮೋಹನ ದಾಸ್ ಆಯೋಗ ರಚಿಸಿ, ದಲಿತರ ಮೀಸಲು ನಿಧಿಯಿಂದ 120 ಕೋಟಿ ಒದಗಿಸಿ ಪರಿಶಿಷ್ಟ ಜಾತಿಗಳ ಗಣತಿ ನಡೆಸಿ ವರದಿ ಸಿದ್ಧಪಡಿಸುವಂತೆ ಮಾಡಿದ್ದು ಕಾಂಗ್ರೆಸ್ ಸರ್ಕಾರ. ಆದರೆ ಅದೇ ವರದಿಯಲ್ಲಿನ 1;6;5;4;1 ಹಂಚಿಕೆಯ ಶಿಫಾರಸನ್ನು ಮೂಲೆಗೆ ಹಾಕಿ ತಾನೇ 6;6;5 ರ ಅವೈಜ್ಞಾನಿಕ ಸೂತ್ರ ರೂಪಿಸಿದೆ. ಎಕೆ, ಎಡಿ, ಎಎ ಗೊಂದಲ ಹಾಗೆಯೇ ಮೂಮದುವರಿದಿದೆ. ಎಎ ಜಾತಿಗಳಲ್ಲಿ ಗುರುತಿಸಿಕೊಂಡವರು ಪ್ರವರ್ಗ 1 ಅಥವಾ ಪ್ರವರ್ಗ 2 ರಲ್ಲಿ ಎಲ್ಲಿ ಬೇಕಾದರೂ ಜಾತಿ ಪ್ರಮಾಣ ಪತ್ರ ಪಡೆಯಬಹುದು ಎಂದು ಸರ್ಕಾರ ಮಾಡಿರುವ ಆದೇಶ ದುರುಪಯೋಗವಾಗುತ್ತಿದೆ. ಮಾದಿಗರಲ್ಲದವರೂ ಪ್ರವರ್ಗ 1 ರಲ್ಲಿ ಜಾತಿ ಪ್ರಮಾಣಪತ್ರ ಪಡೆಯಲು ಅವಕಾಶ ಕೊಟ್ಟಿದ್ದಾರೆ. ಇದು ಒಳ ಮೀಸಲಾತಿಯ ಉದ್ದೇವನ್ನೇ ವಿಫಲಗೊಳಿಸಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಇದೀಗ ರಾಜ್ಯ ಸರ್ಕಾರ ಒಳ ಮೀಸಲಾತಿಯ ಬಗ್ಗೆ ಮಸೂದೆ ರೂಪಿಸಿ, ಸಮರ್ಪಕ ಚರ್ಚೆಗೂ ಅವಕಾಶ ಕೊಡದೇ ಕೇವಲ ಸಂಖ್ಯಾ ಬಲದಿಂದ ಅಂಗೀಕಾರ ಪಡೆದಿದೆ. ಆದರೆ ಈ ಮುಸೂದೆಯಲ್ಲೂ ಒಳ ಮೀಸಲಾತಿ ಜಾರಿ ಅಪೂರ್ಣವಾಗಿಯೇ ಉಳಿದಿದೆ. ರಾಜಕೀಯ ಒತ್ತಡಗಳಿಗೆ ಮಣಿದು ಬಡ್ತಿ ಅವಕಾಶಗಳನ್ನು ಒಳ ಮೀಸಲಾತಿಯಿಂದ ಹೊರಗಿಸಡಲಾಗಿದೆ. ಸರ್ಕಾರದ ನಿಯಮಾನುಸಾರ ಖಾಲಿ ಇರುವ ಹುದ್ದೆಗಳಲ್ಲಿ ಶೇ. 50 ನೇ ನೇಮಕಾತಿ ಮೂಲಕ, ಉಳಿದವು ಬಡ್ತಿ ಮೂಲಕ ಆಗುತ್ತವೆ. ಆದರೆ ಮಸೂದೆಯಲ್ಲಿ ಉದ್ದೇಶ ಪೂರ್ವಕವಾಗಿ ಬಡ್ತಿ ಅವಕಾಶಗಳನ್ನು ಸೇರ್ಪಡೆಗೊಳಿಸಿಲ್ಲ ಎಂದು ಆರೋಪಿಸಿದರು. ನ್ಯಾ.ನಾಗಮೋಹನ್ ದಾಸ್ ಅವರು ಸುಪ್ರೀಂಕೋರ್ಟ್ ನಿರ್ದೇಶನದಂತೆ 5 ಗುಂಪುಗಳಾಗಿ ವರ್ಗೀಕರಣ ಮಾಡಿದ್ದದೆರು. ನ್ಯಾ. ಸದಾಶಿವ ಆಯೋಗ, ಮಾಧುಸ್ವಾಮಿ ವರದಿ ಕೂಡ 4 ಗುಂಪುಗಳನ್ನಾಗಿ ವರ್ಗೀಕರಣ ಮಾಡಿದ್ದವು. ಆದರೆ ರಾಜ್ಯ ಸರ್ಕಾರ ರಾಜಕಾರಣ ಬೆರೆಸಿ ಸಾಮಾಜಿಕ ನ್ಯಾಯ ಬಲಿಗೊಟ್ಟಿದೆ. 6;6;5 ರ ಸೂತ್ರದಲ್ಲಿ 3 ಗುಂಪುಗಳನ್ನಾಗಿ ವರ್ಗೀಕರಣ ಮಾಡಿ ದೊಡ್ಡ ಗೊಂದಲ ಮಾಡಿದೆ. ಈ ಗೊಂದಲಕ್ಕೆ ಮಸೂದೆಯಲ್ಲಿ ಸಮರ್ಪಕ ಪರಿಹಾರ ಒದಗಿಸಿಲ್ಲವೆಂದರು. ಅಲ್ಲದೆ, ಅತ್ಯಂತ ಹಿಂದುಳಿದ, ಅತಿ ಸಣ್ಣ 59 ಜಾತಿಗಳಿರುವ ಅಲೆಮಾರಿಗಳ ಗುಂಪನ್ನು ಬಲಿಷ್ಠ ಗುಂಪಿಗೆ ಸೇರಿಸಿ ಅನ್ಯಾಯವೆಸಗಿದೆ ಎಂದು ದೂರಿದರು. ಜೊತೆಗೆ ಸರ್ಕಾರ ಒಳ ಮೀಸಲಾತಿಯ ಈ ಗೊಂದಲಗಳನ್ನು ಸರಿಪಡಿಸಬೇಕೆಂದು ಆಗ್ರಹಿಸಿದರು. ಜಿ. ಶ್ರೀನಿವಾಸ್, ಎನ್. ಸ್ವಾಮಿ, ಶಿವಣ್ಣ ಹುಳಿಮಾವು, ವಿ.ಎಸ್. ಸುಬ್ರಮಣಿ, ಧರ್ಮರಾಜ್, ಸುಬ್ರಮಣಿ ಇನ್ನಿತರರು ಇದ್ದರು.

# ಪೋಡಿ, ದುರಸ್ತಿ ಮಾಡಿಕೊಡಿ, ಸಾಗುವಳಿ ಚೀಟಿ ಕೊಡಿ

### ಜಿಲ್ಲಾಧಿಕಾರಿಗೆ ರೈತರ ಒತ್ತಾಯ । ರೈತ ಮುಖಂಡರೊಂದಿಗೆ ಸಭೆ



ಮೈಸೂರು: ಪೋಡಿ, ದುರಸ್ತಿ ಮಾಡಿಕೊಡಿ, ಸಾಗುವಳಿ ಚೀಟಿಯನ್ನು 53 ರ ಪ್ರಕಾರ ಕೊಡಿಸಿಕೊಡಿ. ಕಾಡಂಚಿನ ಜಮೀನುಗಳಲ್ಲಿ ಕಾಡು ಪ್ರಾಣಿಗಳ ಹಾವಳಿ ತಪ್ಪಿಸಿ, ಬೆಳೆ ಪರಿಹಾರ ಕೊಡಿಸಿ ಎಂಬಿತ್ಯಾದಿ ಬೇಡಿಕೆಗಳನ್ನು ಈಡೇರಿಸುವಂತೆ ರೈತರು ಜಿಲ್ಲಾಧಿಕಾರಿಗಳ ಒತ್ತಾಯಿಸಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶನಿವಾರ ಕೆಪಿಸಿಸಿ ರಾಜ್ಯ ವಕ್ತಾರ ಎಂ ಲಕ್ಷ್ಮಣ್ ಅವರ ನೇತೃತ್ವದಲ್ಲಿ ಸೇರಿದ್ದ ಪಿರಿಯಾಪಟ್ಟಣ, ಎಚ್.ಡಿ. ಕೋಟೆ, ಹುಣಸೂರು ತಾಲೂಕಿನ ರೈತ ಮುಖಂಡರ ಸಭೆಯಲ್ಲಿ ರೈತರು ಹಲವು ಮನವಿ ಮುಂದಿಟ್ಟರು.ಮಾನವ–ಪ್ರಾಣಿ ಸಂಘರ್ಷ ತಡೆಗೆ ಕ್ರಮವಹಿಸಿ. ತಾಲೂಕು ಕಚೇರಿಯಲ್ಲಿ ಜಮೀನಿಗೆ ಸಂಬಂಧಪಟ್ಟಂತಹ ಸಮಸ್ಯೆ ಇತ್ಯರ್ಥಕ್ಕೆ ವಿಳಂಬವಾಗುತ್ತಿರುವುದು ಸರಿಪಡಿಸಿ. ಪಿಡಿಒಗಳು ಸರಕಾರದ ಸವಲತ್ತುಗಳನ್ನು ತಲುಪಿಸುತ್ತಿಲ್ಲ. ರೈತರ ಸಹಾಯವಾಣಿ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದರು.

ಜತೆಗೆ ದಲ್ಲಾಳಿಗಳ ಹಾವಳಿ ತಪ್ಪಿಸಿ. ಸೂಕ್ತ ಸಾಲ ದೊರೆಯದೆ ರೈತರು ಮೈಕ್ರೊ ಫೈನಾನ್ಸ್ ಹಾವಳಿಗೆ ಸಿಲುಕಿರುವ ಸಮಸ್ಯೆಗೆ ಸ್ಪಂದಿಸಿ. ರೈತ ಆತ್ಮಹತ್ಯೆ ತಪ್ಪಿಸಿ.ಕಬ್ಬಿಗೆ ವೂಜ್ಞಾನಿಕ ಬೆಲೆ ನಿಗಪಡಿಸಿ. ಬೆಳೆ ವಿಮೆಯಿಂದ ರೈತರಿಗಿಂತ ಕಂಪೆನಿಗಳಿಗೆ ಅನುಕೂಲವಾಗುತ್ತಿರುವುದು ತಪ್ಪಿಸಿ ಎಂಬಿತ್ಯಾದಿ ಮನವಿಗಳನ್ನು ಸಲ್ಲಿಸಿದರು.

ರೈತರ ಬೇಡಿಕೆಗಳಿಗೆ ಅನುಗುಣವಾಗಿ ಸ್ಪಂದಿಸಿದ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಜಿಲ್ಲೆಯಲ್ಲಿ ಏಕ ವ್ಯಕ್ತಿ ದುರಸ್ತಿ ರದ್ದುಗೊಳಿಸಿ ದುರಸ್ತಿ ಮಾಡಿಕೊಡುವಲ್ಲಿ ಆಗುತ್ತಿದ್ದ ಲೋಪದೋಷಗಳನ್ನು ಸರಿಪಡಿಸಲಾಗಿದೆ. ಒಂದು ಸರ್ವೆ ನಂಬರ್‌ನಲ್ಲಿ ಇರುವ ಜಾಗಕ್ಕೆ ಮೀರಿದಷ್ಟು ಸಾಗುವಳಿ ಪತ್ರ ನೀಡಲಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಸಾಗುವಳಿಯಲ್ಲಿ ನಮೂದಿಸಿರುವಷ್ಟು ಜಾಗಕ್ಕೆ ದುರಸ್ತು ಮಾಡಿಕೊಡಲು ಜಾಗದ ಕೊರತೆ ಉಂಟಾಗುತ್ತದೆ. ಅಲ್ಲದೇ ಒಮ್ಮೆ ಒಬ್ಬರಿಗೆ ದುರಸ್ತು ಮಾಡಿಕೊಟ್ಟರೆ ಕಡೆಯಲ್ಲಿ ಉಳಿಯುವ ರೈತರು ನೀಡುವ ಸಾಗುವಳಿಗೆ ದುರಸ್ತು ಮಾಡಿಕೊಡಲು ಜಾಗವೇ ಇಲ್ಲದಂತಾಗುತ್ತದೆ. ಹಾಗಾಗಿ ಸದ್ಯ ಏಕ ವ್ಯಕ್ತಿ ದುರಸ್ತಿ ವಿಧಾನವನ್ನು ಕೈಬಿಡಲಾಗಿದೆ. ಬದಲಾಗಿ ಒಮ್ಮೆಗೆ ಒಂದು ಸರ್ವೆ ನಂಬರ್‌ನ ಎಲ್ಲಾ ರೈತರಿಗೆ ದುರಸ್ತಿ ಮಾಡುವ ಪ್ರಕ್ರಿಯೆ ಜಾರಿಗೊಳಿಸಲಾಗಿದೆ. ಇದರಿಂದ ರೈತರಿಗೆ ಆಗುತ್ತಿದ್ದ ಅನ್ಯಾಯ ತಪ್ಪಿದಂತಾಗಿದೆ ಎಂದರು.

**ವಾರದಲ್ಲಿ ದುರಸ್ತಿ ಮಾಡಿಕೊಡುತ್ತೇವೆ:**

ರೈತರ ಬಳಿ ಸಾಗುವಳಿ ಸೇರಿದಂತೆ ಒಟ್ಟು ಮೂರು ದಾಖಲೆಗಳಿದ್ದರೆ ಆ ಜಮೀನು ಕೆರೆ ಅಥವಾ ಡೀಮ್ಡ್ ಫಾರೆಸ್ಟ್ ವ್ಯಾಪ್ತಿಗೆ ಬಾರದಿದ್ದರೆ ಒಂದು ವಾರದಲ್ಲಿ ದುರಸ್ತಿ ಮಾಡಿಕೊಟ್ಟು ಖಾತೆ ಮಾಡಿಸಿಕೊಡಲಾಗುವುದು. ಭೂ ಸುಧಾರಣೆಯಂತೆ ಬಹಳ ಹಿಂದೆ ಗ್ರಾಂಟ್ ಆಗಿರುವ ಜಮೀನಿಗೆ ಸಂಬಂಸಿದ ವ್ಯಾಜ್ಯವನ್ನು ಗೈರುವಿಲ್ಲಾ ಸಮಿತಿಯಲ್ಲಿ ಬಗೆಹರಿಸಲು ಕ್ರಮವಹಿಸಲಾಗಿದೆ. ಅಂತೆಯೆ ಈ ಸಮಿತಿಗೆ ಈ ವರೆಗೆ ಎಂಟು ಸಾವಿರ ಅರ್ಜಿಗಳು ಬಂದಿವೆ. ಇವುಗಳನ್ನು ಪರಿಶೀಲಿಸಿ ಸರಿಪಡಿಸಲಾಗುವುದು ಎಂದು ತಿಳಿಸಿದರು.

### ಸ್ಪಂದಿಸದ ತಹಸೀಲ್ದಾರ್ ರೈತರ ಅಳಲು

**ಸಭೆಯಲ್ಲಿ ರೈತರು ತಾಲೂಕು ಕೇಂದ್ರದಲ್ಲಿ ತಹಶೀಲ್ದಾರ್ ಸೂಕ್ತ ರೀತಿ ಸ್ಪಂದಿಸುತ್ತಿಲ್ಲ. ಸಮಸ್ಯೆ ಹೇಳಿಕೊಂಡು ಬರುವ ರೈತರನ್ನು ಕೂರಿಸಿ ಮಾತನಾಡುವ ಸೌಜನ್ಯವನ್ನೂ ತೋರದೇ ಯಾವ ಕೆಲಸಗಳನ್ನು ಮಾಡಿಕೊಡದೇ ತಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳುತ್ತಾರೆ. ರೈತರ ಸಮಸ್ಯೆಗಳಿಗೆ ಸ್ಪಂದಿಸದೇ ಉಡಾಫೆ ಉತ್ತರಗಳನ್ನು ನೀಡುತ್ತಿದ್ದಾರೆ ಎಂದು ದೂರಿದರು. ತಹಶೀಲ್ದಾರ್ ಅವರೊಂದಿಗೆ ಸಭೆ ಮಾಡಿ ತಪ್ಪು ಮಾಡಿರುವವರ ವಿರುದ್ಧ ಕ್ರಮ ವಹಿಸುತ್ತೇವೆ ಎಂದು ಜಿಲ್ಲಾ ಕಾರಿ ಲಕ್ಷ್ಮೀಕಾಂತರೆಡ್ಡಿ ಪ್ರತಿಕ್ರಿಯಿಸಿದರು.**

ಮೊದಲ ಪುಟದಿಂದ

### ‘ಜಿ ರಾಮ್ ಜಿ’ ವಿರುದ್ಧ ಕೈ ಹೋರಾಟ

ಕಿಡಿಕಾರಿದರು. ನಿನ್ನೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಮನರೇಗಾ ಬಗ್ಗೆ ಚರ್ಚೆ ಮಾಡಿದ್ದೇವೆ. ನರೇಗಾ ವಾಪಸ್ ಪಡೆಯುವ ಮೊದಲು ಮೋದಿ ಸರ್ಕಾರ ಯಾವುದೇ ರಾಜ್ಯ ಸರ್ಕಾರದ ಜೊತೆಗೆ ಚರ್ಚೆ ಮಾಡಿಲ್ಲ. ಒಂದು ರೀತಿಯಲ್ಲಿ ಸರ್ವಾಧಿಕಾರ ಧೋರಣೆ ಪ್ರದರ್ಶನ ಮಾಡಿದೆ. ಈ ಮಸೂದೆ ಡಿ.17ರಂದು ಸಂಸತ್‌ನಲ್ಲಿ ಮಂಡನೆಯಾಗಿ 18ರಂದು ಕಾಯ್ದೆ ಆಗಿದೆ. ದೇಶದಲ್ಲಿ ಸುಮಾರು 12.16 ಕೋಟಿ ನರೇಗಾ ಕಾರ್ಮಿಕರಿದ್ದಾರೆ. ಅದರಲ್ಲಿ 6.21 ಕೋಟಿ ಮಹಿಳೆಯರಿದ್ದಾರೆ. ಪರಿಶಿಷ್ಟ ಜಾತಿಯವರು ಶೇ.17ರಷ್ಟಿದ್ದಾರೆ. ಪರಿಶಿಷ್ಟ ವರ್ಗದವರು ಶೇ.11ರಷ್ಟಿದ್ದಾರೆ. ಕರ್ನಾಟಕದಲ್ಲಿ 71.18 ಲಕ್ಷ ಸಕ್ರಿಯ ನರೇಗಾ ಕಾರ್ಮಿಕರಿದ್ದಾರೆ ಎಂದು ಮುಖ್ಯಮಂತ್ರಿ ಮಾಹಿತಿ ನೀಡಿದರು.

ಹಳೆ ಕಾಯ್ದೆಯ ಪ್ರಕಾರ ವರ್ಷದಲ್ಲಿ ಕನಿಷ್ಠ 100 ದಿನ ಕೆಲಸ ಕೊಡಬೇಕಿತ್ತು. ಕಾರ್ಮಿಕರು, ಸಣ್ಣ ರೈತರು ಎಲ್ಲಿ ವಾಸ ಮಾಡುತ್ತಾರೆಯೊ ಅಲ್ಲಿಯೇ. ಆದರೆ, ಹೊಸ ಕಾಯ್ದೆ ಪ್ರಕಾರ, ಎಲ್ಲಿ ಅಧಿಸೂಚನೆ ಹೊರಡಿಸುತ್ತಾರೊ ಅಲ್ಲಿ ಕೆಲಸ ಕೊಡಬೇಕು. ಹೀಗೆ ಮಾಡಿ ಹಕ್ಕು ಕಸಿದುಕೊಳ್ಳುವ ಅಂಶ ಹೊಸ ಕಾಯ್ದೆಯಲ್ಲಿದೆ. ಹಳೆ ಕಾಯ್ದೆಯಿಂದ ಪ್ರತಿ ಗ್ರಾಮ ಕೂಡಾ ಲಾಭ ಪಡೆಯಬಹುದಿತ್ತು. ಈಗ ಆ ಲಾಭ ಪಡೆಯಲು ಅವಕಾಶ ಇಲ್ಲ. ಸೂಚಿಸಿದ ಜಾಗದಲ್ಲಿ ಮಾತ್ರ ಕೆಲಸ ಮಾಡಬೇಕು. ಕಾರ್ಮಿಕರಿಗೆ ಇಡೀ ವರ್ಷ ಕೆಲಸ ಸಿಗುತ್ತಿತ್ತು. ಕೆಲಸ ಇಲ್ಲದೇ ಇದ್ದಾಗ ಕೆಲಸ ಕೊಡಬೇಕಿತ್ತು. ಈಗ ಕೃಷಿ ಚಟುವಟಿಕೆ ಇರುವ 60 ದಿನ ಕೆಲಸವನ್ನು ನಿಷೇಧಿಸಲಾಗಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

### ಭರತ್ ರೆಡ್ಡಿ ವಿರುದ್ಧ ದ್ವೇಷ ಭಾಷಣ ಕಾಯ್ದೆಯಡಿ ದೂರು ದಾಖಲಿಸಿ

ಅವರಿಂದಲೇ ಹೆಸರು ಹಾಳಾಗುತ್ತಿದೆ ಎಂದು ವ್ಯಂಗ್ಯವಾಡಿದರು.

ಸರ್ಕಾರಿ ಗನ್ ಮ್ಯಾನ್ ಬಳಸುವ ಗುಂಡಿಗೆ ಕರಾರುವಕ್ಕಾಗಿ ಲೆಕ್ಕ ನೀಡಬೇಕು. ಖಾಸಗಿಯಾಗಿ ಸಾಕಷ್ಟು ಮಂದಿ ಗನ್ ಮ್ಯಾನ್‌ಗಳನ್ನು ಇಟ್ಟುಕೊಂಡಿರುತ್ತಾರೆ. ಗುಂಡು ಹಾರಿಸಿ ಎಲ್ಲೋ ತಲೆ ಮರೆಸಿಕೊಳ್ಳುತ್ತಾರೆ. ಅವರು ಬಳಸುವ ಗುಂಡಿಗೆ ಲೆಕ್ಕ ಯಾಕೆ ಇಲ್ಲ? ಗುಂಪು ಗೂಡಿದ್ದು, ಗಲಾಟೆ ನಡೆಸಿದ್ದು, ಹಲ್ಲೆ ನಡೆಸಿದ್ದು, ಗುಂಡು ಹೊಡೆದಿದ್ದು ಹಾಗೂ ಸತ್ತಿದ್ದು ಅವರದ್ದೇ ಪಕ್ಷದವರು. ಆದರೆ, ಪ್ರಕರಣ ದಾಖಲಾಗಿದ್ದು ಮಾತ್ರ ಬಿಜೆಪಿಯ ಜನಾರ್ದನ ರೆಡ್ಡಿ ಹಾಗೂ ಇತರರ ವಿರುದ್ಧ ಎಂದು ವಾಗ್ದಾಳಿ ನಡೆಸಿದರು.

### ರೆಡ್ಡಿ ಜೈಲಿನಿಂದ ಬಂದ್ಮೇಲೆ ಗಲಾಟೆ ಶುರು!

ಮಾಡ್ತಾರೆ? ನೂರು ಜನ ಸೆಕ್ಯುರಿಟಿ ಇಟ್ಕೊಂಡಿದ್ದಾರೆ. ಅದೆಲ್ಲಾ ಡ್ರಾಮಾ. ಜನರಿಗೆ ಇವರಿಂದ ಭಯ ಇದೆ ಅಂತ ಜನಾರ್ದನ ರೆಡ್ಡಿ ವಿರುದ್ಧ ವಾಗ್ದಾಳಿ ನಡೆಸಿದರು.

ಘಟನೆ ಆದಾಗ ಶ್ರೀರಾಮುಲು ಕೂಡ ಫೋನ್ ಮಾಡಿದ್ದರು. ಎಸ್‌ಪಿಗೆ ನಾನೇ ಮಾತಾಡಿದೆ. ನಮಗೂ ಜವಾಬ್ದಾರಿ ಇದೆ. ಕೆಪಿಸಿಸಿ ಅಧ್ಯಕ್ಷ ಆಗಿಯೂ ಜವಾಬ್ದಾರಿ ಇದೆ ಎಂದರು. ನ್ಯಾಯಾಂಗ ತನಿಖೆಗೆ ಬಿಜೆಪಿ ಬೇಡಿಕೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಕಾನೂನು ತನ್ನ ಕೆಲಸ ಮಾಡಲಿದೆ. ಗುಂಡು ಹಾರಿಸಿದ್ದು ಸರಿನಾ ಎಂಬ ಪ್ರಶ್ನೆಗೆ ತನಿಖೆ ಆಗ್ತಾ ಇದೆ ಉತ್ತರ ಸಿಗಲಿದೆ ಎಂದು ಹೇಳಿದರು.

### ಮೈಸೂರು ವಿವಿ ಘಟಿಕೋತ್ಸವ ನಾಳೆ

449 ಮಂದಿ ಪಿಎಚ್.ಡಿ ಪದವಿ ಪಡೆಯುವರು. ಒಟ್ಟು 442 ಪದಕ, 197 ಬಹುಮಾನ, 213 ಅಭ್ಯರ್ಥಿಗಳು ಪಡೆಯಲಿದ್ದಾರೆಂದು ತಿಳಿಸಿದರು.

**ಕಾವೇರಿ ನೀರಾವರಿ ನಿಗಮ ನಿಯಮಿತ**
**(ಕರ್ನಾಟಕ ಸರ್ಕಾರದ ಉದ್ಯಮ)**
**ಕಾರ್ಯಪಾಲಕ ಅಭಿಯಂತರರವರ ಕಛೇರಿ, ನಂ.2, ಕೆ.ಸಿ. ವಿಭಾಗ, ಕೊಳ್ಳೇಗಾಲ–571440, ಚಾಮರಾಜನಗರ ಜಿಲ್ಲೆ**

**ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 18/2025–26 ದಿನಾಂಕ: 03.01.2026**

(ಕೆಪಿಪಿ– ಪೋರ್ಟಲ್‌ನಲ್ಲಿ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕಬಿನಿ ನಾಲಾ ವಿಭಾಗ, ಕೊಳ್ಳೇಗಾಲ ಇವರು ಸಮಾಲೋಚಕರ ಮೂಲಕ ಕಾವೇರಿ ನದಿ ಪಾತ್ರದಲ್ಲಿ ಬರುವ ಕೊಳ್ಳೇಗಾಲ ತಾಲ್ಲೂಕಿನ 9 ಪ್ರವಾಹ ಪೀಡಿತ ಗ್ರಾಮಗಳಲ್ಲಿ ಜಲಾವೃತವಾಗಿ ತೊಂದರೆಯಾಗುತ್ತಿರುವುದರಿಂದ ರಕ್ಷಣಾತ್ಮಕ ಗೋಡೆಗಳನ್ನು ನಿರ್ಮಿಸುವ ಕಾಮಗಾರಿಗೆ ಸರ್ವೆ ಕಾರ್ಯ ಕೈಗೊಂಡು ವಿಸ್ತ್ರತ ಯೋಜನಾ ವರದಿ ತಯಾರಿಸಲು ಸರ್ಕಾರಿ ಸ್ವಾಮ್ಯದ ಇಲಾಖೆಯಲ್ಲಿ ನೊಂದಣಿಯಾಗಿರುವ ಮತ್ತು Registrar of Companies / Minister of Micro, Small and medium Enterprises ರಲ್ಲಿ ನೋಂದಾಯಿಸಲ್ಪಟ್ಟ ಹಾಗೂ ಸೂಕ್ತ ಚಾಲ್ತಿ ISO ಪರವಾನಿಗೆ ಹೊಂದಿರುವ ಸಮಾಲೋಚಕರಿಂದ ಶೇಕಡಾವಾರು ದರದ ಟೆಂಡರ್‌ಗಳನ್ನು ಹಾಗೂ ವಿಭಾಗ ಕಛೇರಿ ಮತ್ತು ಉಪ–ವಿಭಾಗ ಕಛೇರಿಯ ಕಟ್ಟಡಗಳನ್ನು ರಿಪೇರಿ ಮಾಡುವ ಕಾಮಗಾರಿಗಾಗಿ ಅರ್ಹವರ್ಗದಲ್ಲಿ ನೊಂದಣಿಯಾಗಿರುವ ಗುತ್ತಿಗೆದಾರರಿಂದ ಕೆ.ಡಬ್ಲ್ಯೂ–1 ಪ್ರಕಾರ ಕೆಪಿಪಿಪಿ ಪೋರ್ಟಲ್‌ನಲ್ಲಿ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಮೊತ್ತ ರೂ.20.72 ಲಕ್ಷಗಳು (ಇ.ಎಂ.ಡಿ ಮೊತ್ತ ರೂ.50,000/–) ಹಾಗೂ ರೂ.13.36 ಲಕ್ಷಗಳು (ಇ.ಎಂ.ಡಿ ಮೊತ್ತ ರೂ.33,500/–) ಕಾಲಮಿತಿ(ಮಳೆಗಾಲ ಸೇರಿದಂತೆ). ಟೆಂಡರ್ ಪ್ರಕಟಣೆಯಂತೆ ಪ್ರೊಸೆಸಿಂಗ್ ಶುಲ್ಕವನ್ನು ಇ–ಪೇಮೆಂಟ್ ಮೂಲಕ ಸಂದಾಯ ಮಾಡುವುದು. ಟೆಂಡರ್ ಕ್ವಾರಿಸ್/ಕ್ಲಾರಿಫಿಕೇಷನ್ ಕೊನೆಯ ದಿನಾಂಕ: 09.01.2026 ಮಧ್ಯಾಹ್ನ 4.00 ಗಂಟೆವರೆಗೆ. ಆನ್ ಲೈನ್ ಮೂಲಕ ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ:12.01.2026 ಸಾಯಂಕಾಲ 5.00 ಗಂಟೆಯವರೆಗೆ ಟೆಂಡರ್‌ಗಳನ್ನು ತೆರೆಯುವ ದಿನಾಂಕ: 13.01.2026 ಸಾಯಂಕಾಲ 5.30 ಗಂಟೆಗೆ. ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ ಆರ್ಥಿಕ ಬಿಡ್ಡು ತೆರೆಯಲಾಗುವುದು (ರಕ್ಷಣಾತ್ಮಕ ಗೋಡೆ ನಿರ್ಮಾಣ ಕಾಮಗಾರಿಗೆ ಅನ್ವಯವಾಗುತ್ತದೆ). ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ: https://kppp.karnataka.gov.in ರಲ್ಲಿ ಪಡೆಯಬಹುದು.

**ಸಹಿ/– ಕಾ.ಇಂ.**

ಸಂ:ವಾಸಾಸಂಇ:ಚಾನಗರ:616:2025–26

# ಇಂದು ಲೂಯಿಸ್ ಕಪ್ ಕ್ರಿಕೆಟ್ ಪಂದ್ಯಾವಳಿ



ಮೈಸೂರು: ಲೂಯಿಸ್ ಬ್ರೈಲ್ ಅವರ 217ನೇ ಜನ್ಮ ದಿನಾಚರಣೆ ಅಂಗವಾಗಿ ಮೈಸೂರಿನ ಎಸ್‌ಜೆಸಿಇ ಮೈದಾನದಲ್ಲಿ ಭಾನುವಾರ(ಜ.4) ಬೆಳಗ್ಗೆ 8.30ಕ್ಕೆ ವಿಶೇಷ ಚೇತನರ ಲೂಯಿಸ್ ಕಪ್ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದ್ದು, ರಾಷ್ಟ್ರೀಯ ಕ್ರಿಕೆಟ್ ಪಟು ಸೇರಿದಂತೆ 3 ತಂಡಗಳಲ್ಲಿ 70ಕ್ಕೂ ಹೆಚ್ಚು ಅಂಧ ಕ್ರಿಕೆಟ್ ಪಟುಗಳು ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ದೃಷ್ಟಿ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಬಿ.ಆರ್.ದಿವಾಕರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪ್ರರ್ತಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೃಷ್ಟಿ ಚಾರಿಟೇಬಲ್ ಟ್ರಸ್ಟ್ ವಿಶೇಷ ಚೇತನರಿಗಾಗಿ ಕಳೆದ ಹಲವು ವರ್ಷಗಳಿಂದ ವಿವಿಧ ಕಾರ್ಯಕ್ರಮ ರೂಪಿಸುತ್ತಾ ಬಂದಿದೆ. ಅದರಲ್ಲೂ ದೃಷ್ಟಿ ಹೀನರ ಏಳಿಗೆಗಾಗಿ ಶ್ರಮಿಸುತ್ತಿದೆ. ಈ ಹಿನ್ನೆಲೆಯಲ್ಲಿ ದೃಷ್ಟಿ ಹೀನರಿಗೆ ಬ್ರೈಲ್ ಲಿಪಿಯನ್ನು ಕೊಡುಗೆಯಾಗಿ ಕೊಟ್ಟು ಅಂಧರ ಬಾಳಲ್ಲಿ ಬೆಳಕು ತುಂಬುವಂತೆ ಮಾಡಿದ ಲೂಯಿಸ್ ಬ್ರೈಲ್ ಅವರ ಜನ್ಮ ದಿನದ ಹಿನ್ನೆಲೆಯಲ್ಲಿ ವಿಶೇಷ ಚೇತನರ ಲೂಯಿಸ್ ಕಪ್ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದ್ದು, ಈ ಪಂದ್ಯಾವಳಿಯಲ್ಲಿ ಮೂರು ತಂಡಗಳು ಪಾಲ್ಗೊಳ್ಳುತ್ತಿವೆ. ದೃಷ್ಟಿಹೀನರಿಗಾಗಿ ಸಿದ್ಧಪಡಿಸಿರುವ ಗೆಜ್ಜೆ ಶಬ್ದ ಬರುವ ಚೆಂಡಿನೊಂದಿಗೆ ತಲಾ 10 ಓವರ್ ಪಂದ್ಯ ಜರುಗಲಿದೆ ಎಂದು ವಿವರಿಸಿದರು. ಈ ಕ್ರಿಕೆಟ್ ಪಂದ್ಯಾವಳಿಗೆ ಹಲವು ಮಂದಿ ನೆರವು ನೀಡಿ, ಪ್ರೋತ್ಸಾಹಿಸಿದ್ದಾರೆ. ನಾಳೆ (ಜ.4) ಬೆಳಗ್ಗೆ 8.30ಕ್ಕೆ ಬೆಂಗಳೂರಿನ ಆರ್ಯನ್ ಫೌಂಡೇಶನ್ ಸ್ಥಾಪಕ ಆರ್ಯನ್ ಸೂರ್ಯ ಎಸ್.ಎ. ಹಾಗೂ ಆರ್ಯನ್ ಫೌಂಡೇಶನ್ ಟ್ರಸ್ಟಿ ಅಮಿತಾ ಸುನೀಲ್ ಎಂ.ಆರ್. ಅವರು ಕ್ರಿಕೆಟ್ ಪಂದ್ಯಾವಳಿಯನ್ನು ಉದ್ಘಾಟಿಸಲಿದ್ದಾರೆ. ಅಂದು ಸಂಜೆ 4 ಗಂಟೆಗೆ ಸಮಾರೋಪ ಸಮಾರಂಭ ಜರುಗಲಿದ್ದು, ರಂಗರಾವ್ ಮೆಮೋರಿಯಲ್ ಸ್ಕೂಲ್ ಫಾರ ಡಿಫರೆಂಟ್ಲಿ ಎಬಲ್ಡ್ ಸಂಸ್ಥೆಯ ಕಾರ್ಯನಿರ್ವಾಹಕ ಕಾರ್ಯದರ್ಶಿ ಆರ್.ಹರೀಶ್, ರೋಟರಿ ಕ್ಲಬ್ ಆಫ್ ಮೈಸೂರು ವೆಸ್ಟ್ ಅಧ್ಯಕ್ಷ ರೊ.ದೇವರಾಜ್, ಕಾರ್ಯದರ್ಶಿ ಬಿ.ಎಂ.ರುದ್ರೇಶ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೃಷ್ಟಿ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಬಿ.ಆರ್.ದಿವಾಕರ್ ವಹಿಸಲಿದ್ದಾರೆ. ಇದೇ ವೇಳೆ ನಿರಾಮಯ ಫೌಂಡೇಶನ್ ಸಂಸ್ಥಾಪಕರಾದ ಆರ್.ರಕ್ಷಿತಾ ಅವರನ್ನು ಸನ್ಮಾನಿಸುವುದಾಗಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ದೃಷ್ಟಿ ಚಾರಿಟೇಬಲ್ ಟ್ರಸ್ಟ್ ಪದಾಧಿಕಾರಿಗಳಾದ ಕೆ.ಬಿ.ದರ್ಶನ್, ಸುನೀಲ್, ನೂತನ್‌ಕುಮಾರ್ ಇದ್ದರು.

ಮೊದಲ ಪುಟದಿಂದ

### ಕೊಲೆಗೆ ಬಿಜೆಪಿ ಕಾರಣ

ಶಾಸಕನ ಪರ ನಿಲ್ತೀನಿ ಅಂತ ಭರತ್ ರೆಡ್ಡಿ ಪರ ಡಿಕೆಶಿ ಬ್ಯಾಟ್ ಬೀಸಿದರು.ಯಾರದ್ದೋ ಮನೆ ಮುಂದೆ ರಸ್ತೆಯಲ್ಲಿ ಬ್ಯಾನರ್ ಹಾಕಿದರೆ ಬಿಜೆಪಿಯವರಿಗೆ ಎನು ಸಮಸ್ಯೆ? ನಮ್ಮ ಮನೆ ಮುಂದೆ, ಸಿಎಂ ಮನೆ ಮುಂದೆಯೂ ಬಿಜೆಪಿಯವರು ಬ್ಯಾನರ್ ಹಾಕ್ತಾರೆ. ಅದು ಸಾರ್ವಜನಿಕ ರಸ್ತೆ. ಸಂಭ್ರಮದಿಂದ ಕಾರ್ಯಕ್ರಮ ಮಾಡಲು ನಾವು ಬ್ಯಾನರ್ ಹಾಕಿದ್ದು ಅಷ್ಟೇ. ಈ ಘಟನೆಯಿಂದ ನಮ್ಮ ಕಾರ್ಯಕರ್ತರನ್ನು ಕಳೆದುಕೊಂಡಿದ್ದೇವೆ ಇದಕ್ಕೆ ಬಿಜೆಪಿ ಕಾರಣ ಎಂದು ಕಿಡಿಕಾರಿದರು.

### ನಿರುದ್ಯೋಗ ಹೆಚ್ಚಳ

ಸೃಷ್ಟಿ, ಬಲವಂತದ ವಲಸೆ ಜೊತೆಗೆ, ಗ್ರಾಮೀಣ ಬದುಕಿನಲ್ಲಿ ಸಂಕಷ್ಟ ತೀವ್ರಗೊಳ್ಳಲಿದೆ. ಪಂಚಾಯಿತಿಗಳು ಅನುಷ್ಠಾನಗೊಳಿಸುವ ಸಂಸ್ಥೆಗಳಾಗಲಿವೆ. ಸ್ಥಳೀಯ ಕಾಮಗಾರಿಗಳನ್ನು ನಿರ್ಧರಿಸುವ ಅಧಿಕಾರ ಪಂಚಾಯಿತಿಗಳಿಗೆ ಇರುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

### ಆತ್ಮಹತ್ಯೆಗೆ ಯತ್ನಿಸಿಲ್ಲ: ಡಿಸಿಪಿ

ಯತ್ನ ಎನ್ನುವುದು ಸುಳ್ಳು. ಸದ್ಯ ಅವರು ಫಾರ್ಮ್ ಹೌಸ್‌ನಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ ಎಂದು ತಿಳಿಸಿದರು

ಮೊದಲ ಪುಟದಿಂದ

### ನಿವೃತ್ತಿ ವೇತನಕ್ಕೆ ಹಣವಿಲ್ಲ

ಬಜೆಟ್ ನಲ್ಲಿ ಇದನ್ನು ಘೋಷಿಸಿದರೆ ಸಮಸ್ಯೆ ಇತ್ಯರ್ಥವಾಗಲಿ ಎಂದು ಕುಲಪತಿ ಕೆ. ಎನ್.ಲೋಕನಾಥ್ ತಿಳಿಸಿದರು.

ಹಾಸನ, ಚಾಮರಾಜನಗರ ಸೇರಿ ಎಲ್ಲಾ ಜಿಲ್ಲೆಗಳಲ್ಲಿ ವಿಶ್ವ ವಿದ್ಯಾನಿಲಯ ಪ್ರಾರಂಭಗೊಂಡ ಹಿನ್ನೆಲೆಯಲ್ಲಿ ಇಲ್ಲಿನ ಆದಾಯ ಕುಂಠಿತವಾಗಿದೆ. ಇಲ್ಲಿನ ಸಿಬ್ಬಂದಿಯನ್ನು ಕಾಯಂ ಮಾಡುವಂತೆ ಸರ್ಕಾರಕ್ಕೂ ಪತ್ರ ಬರೆಯಲಾಗಿದೆ. ಆದಾಯ ಕುಂಠಿತವಾಗಿ ಖರ್ಚು ಹಿಂದಿನಷ್ಟೇ ಇದೆ. ಹೀಗಾಗಿ 12 ವರ್ಷದಿಂದ ಯಾವುದೇ ನೇಮಕಾತಿ ಪ್ರಕ್ರಿಯೆ ಆಗಿಲ್ಲ ಎಂದು ತಿಳಿಸಿದರು.

### ಬಳ್ಳಾರಿ ಗಲಾಟೆ: ಎಸ್‌ಪಿ ಪವನ್ ಪಾರ್ಟಿ!

ಮುಂಜಾಗ್ರತೆ ವಹಿಸಿದ್ದರು. ಮಾಧ್ಯಮಗಳ ಜೊತೆ ಚಿತ್ರದುರ್ಗ ಎಸ್ಪಿ ಮಾತನಾಡಿದ್ದರು.

ಬಳ್ಳಾರಿ ರೇಂಜ್ ಡಿಐಜಿ ಆಗಿರುವ ವರ್ತಿಕಾ ಕಟಿಯಾರ್ ಈ ಎಲ್ಲಾ ವಿಚಾರಗಳನ್ನು ತಮ್ಮ ವರದಿಯಲ್ಲಿ ಉಲ್ಲೇಖಿಸಿದ್ದರು. ಹೀಗಾಗಿ ಸರ್ಕಾರ ಅವರನ್ನು ಅಮಾನತು ಮಾಡುವ ನಿರ್ಧಾರ ಕೈಗೊಂಡಿದೆ ಎಂದು ತಿಳಿದು ಬಂದಿದೆ.

# ವಿವಿಗಳ ಪುನಶ್ಚೇತನಕ್ಕೆ ಜನಾಂದೋಲನ ಮೈತ್ರಿ



ಮೈಸೂರು: ನಮ್ಮ ಸಾರ್ವಜನಿಕ ವಿವಿಗಳು ಅವನತಿಯ ಹಾದಿಯಲ್ಲಿದ್ದು, ಸರ್ಕಾರ ಅವುಗಳತ್ತ ಗಮನ ಹರಿಸಿ ತುರ್ತಾಗಿ ಪುನಶ್ಚೇತನಗೊಳಿಸಬೇಕೆಂದು ಜನಾಂದೋಲನ ಮಹಾ ಮೈತ್ರಿ ರಾಜ್ಯ ಸಂಚಾಲಕ ಉಗ್ರ ನರಸಿಂಹೇಗೌಡ ಆಗ್ರಹಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಉನ್ನತ ಶಿಕ್ಷಣ ಸಚಿವ ಡಾ. ಸುಧಾಕರ್ ಸ್ವತಃ ವೈದ್ಯರಾಗಿದ್ದಾರೆ. ಆದರೆ ಅವರು ನಮ್ಮ ಅತ್ಯಂತ ಹಳೆಯ ಶಿಕ್ಷಣ ಸಂಸ್ಥೆಗಳಾಗಿರುವ ಸಾರ್ವಜನಿಕ ವಿವಿಗಳನ್ನು ಬಲ ಪಡಿಸುವ ಬದಲು ಅವುಗಳನ್ನು ಮೌನವಾಗಿ ಕೊಲ್ಲುವ ಕೆಲಸ ಮಾಡುತ್ತಿದ್ದಾರೆ. ಇಂತಹ ವಿವಿಗಳನ್ನು ನಿರ್ಲಕ್ಷಿಸಿ ಕೇವಲ ವಿದೇಶ ಪ್ರವಾಸ ಹಾಗೂ ಖಾಸಗೀ ವಿವಿಗಳ ಉತ್ತೇಜನದಲ್ಲಿ ತೊಡಗಿದ್ದಾರೆ. ಕಳೆದ ಎರಡೂವರೆ ವರ್ಷಗಳಲ್ಲಿ ನಾಲ್ವರು ಪ್ರದಾನ ಕಾರ್ಯದರ್ಶಿಗಳನ್ನು ಬದಲಾಯಿಸಿದ್ದಾರೆ. ವಿವಿಗಳ ಬೋಧಕ ಸಿಬ್ಬಂದಿಗೆ ನೀಡಲು ಹಣವಿಲ್ಲ ಎಂದು ದೂರಿದರು.

ಮೈಸೂರು ವಿವಿ ಕುಲಪತಿಗಳು ಶಿಕ್ಷಣದ ಗುಣಮಟ್ಟ ಸುಧಾರಿಸುವ ಬದಲು ಶೈಕ್ಷಣಿಕ ಚಟುವಟಿಕೆ ಹತ್ತಿಕ್ಕುವ ಕೆಲಸ ಮಾಡುತ್ತಿದ್ದಾರೆ. ಅತಿಥಿ ಉಪನ್ಯಾಸಕರ ಮೇಲೆ ಹಣ ವ್ಯಯಿಸಲಾಗುತ್ತಿದೆ. ಬಹುತೇಕ ವಿಭಾಗಗಳು ಕಾಯಂ ಪ್ರಾಧ್ಯಾಪಕರಿಲ್ಲದೇ ಶೈಕ್ಷಣಿಕ ಚಟುವಟಿಕೆಗಳು ಸೊರಗುತ್ತಿವೆ. ಮಹಾರಾಜ, ಯುವರಾಜ ಕಾಲೇಜುಗಳಲ್ಲಿಯೂ ಇದೇ ಪರಿಸ್ಥಿತಿ ಇದೆ. ವಿವಿಯಲ್ಲಿನ ನಡೆದ ಅಕ್ರಮ ಹಣಕಾಸು ಚಟುವಟಿಕೆ ಕಾರಣ ಪಿಂಚಣಿ ನೀಡಲೂ ಹಣವಿಲ್ಲದಂತಾಗಿದೆ. ಪ್ರತಿಭಟನೆ ನಿಷೇಧಿಸುವ ಸರ್ವಾಧಿಕಾರಿ ಧೋರಣೆ ಅನುಸರಿಸಲಾಗುತ್ತಿದೆ ಎಂದು ಆರೋಪಿಸಿದರು.ಎಐಯುಟಿಯುಸಿ ಜಿಲ್ಲಾ ಕಾರ್ಯದರ್ಶಿ ಚಂದ್ರಶೇಖರ ಮೇಟಿ ಮಾತನಾಡಿ, ಮಂಡ್ಯ ವಿವಿ ಅವನತಿ ಹೊಂದುತ್ತಿದ್ದು, ಕೆಲವೇ ಲಕ್ಷ ರೂ.ಗಳಲ್ಲಿ ನಿರ್ಮಿಸಬಹುದಾದ ಕಮಾನಿಗೆ 3 ಕೋಟಿ ವೆಚ್ಚ ಮಾಡಲಾಗಿದೆ. ಆದರೆ ಪೌರ ಕಾರ್ಮಿಕರಿಗೆ ಕಳೆದ ಹಲವಾರು ತಿಂಗಳಿನಿಂದ ವೇತನ ನೀಡಲು ಇವರು ಹಣವಿಲ್ಲ ಎನ್ನುತ್ತಾರೆ. ಈ ಬಗ್ಗೆ ಕುಲಪತಿ, ರಾಜ್ಯಪಾಲರು ಅಥವಾ ಉನ್ನತ ಶಿಕ್ಷಣ ಸಚಿವರು ತಲೆ ಕೆಡಿಸಿಕೊಂಡಿಲ್ಲ. ಇದೇ ಪರಿಸ್ಥಿತಿ ಇತರೆ ಸರ್ಕಾರಿ ವಿವಿಗಳದ್ದಾಗಿದೆ. ಹೀಗಾಗಿ ಈ ಉನ್ನತ ಶಿಕ್ಷಣ ಸಂಸ್ಥೆಗಳ ಉಳಿವಿಗೆ ಎಲ್ಲರೂ ಗಮನ ಹರಿಸಬೇಕೆಂದು ಒತ್ತಾಯಿಸಿದರು. ಅಭಿರುಚಿ ಗಣೇಶ್, ಟಿ.ಆರ್. ಸುನಿಲ್ ಇದ್ದರು.

**ಪುರಸಭಾ ಕಾರ್ಯಾಲಯ, ಟಿ.ನರಸೀಪುರ**
**ಮೈಸೂರು ಜಿಲ್ಲೆ – 571124**
**Email: ka.tnarasipura.tmc@gmail.com**
**Website : www.tnarasipuratown.mrc.gov.in**
**Phone: 08227-261232**
**ನಂ:ಪು.ತಿ.ನ/ಆ.ಶಾ/ಎಸ್.ಬಿ.ಎಂ.2.0/ಬಯೋಕಲ್ಚರ್/04/2025–26 ದಿ: 29.12.2025**

**ಟೆಂಡರ್ ಪ್ರಕಟಣೆ**

**ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ**
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999–2000ರ ನಿಯಮದಂತೆ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https:kppp.karnataka.gov.in ಮುಖಾಂತರ ತಿ.ನರಸೀಪುರ ಪುರಸಭೆ ಯಿಂದ ಈ ಕೆಳಕಂಡ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಷರತ್ತು ಮತ್ತು ನಿಬಂಧನೆಗಳನ್ನು ಹಾಗೂ ಟೆಂಡರ್ ಷೆಡ್ಯೂಲ್ ದಿನಾಂಕಗಳ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ನೋಡಬಹುದು ಮತ್ತು ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ: 08227–261232 ಅನ್ನು ಸಂಪರ್ಕಿಸಿ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

**ಕ್ರ.ಸಂ.1 ವಿವರ:** Supply of Bio Culture and Spraying machine 6.5 HP Capacity Motor to T Narasipura TMC Indent No: DMA/2025-26/IND5568 **ಅಂದಾಜು ಮೊತ್ತ (ಲಕ್ಷಗಳಲ್ಲಿ):** 6.67 **ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):** 15010/-

**ಸಹಿ/– ಮುಖ್ಯಾಧಿಕಾರಿ, ಪುರಸಭೆ, ಟಿ.ನರಸೀಪುರ**
DIPR/DDMYS/1462/KSMCA/831/2025-26

# ಪರಿಸರ ಜಾಗೃತಿ ಜಾಥಾ




ಗುಂಡ್ಲುಪೇಟೆ: ನೆಮ್ಮದಿಯ ಹಾಗೂ ಆರೋಗ್ಯಕರ ಬದುಕಿಗೆ ಪರಿಸರವನ್ನು ಸಂರಕ್ಷಿಸುವುದು ಅತ್ಯಂತ ಅಗತ್ಯ. ಪರಿಸರದ ಸಂರಕ್ಷಣೆ ಎಂಬುದು ನಮ್ಮೆಲ್ಲರ ಜವಾಬ್ದಾರಿ ಮಾತ್ರವಲ್ಲದೆ ಪ್ರತಿಯೊಬ್ಬರ ಹೊಣೆಗಾರಿಕೆಯೂ ಹೌದು ಎಂದ. ಹಿರಿಯ ಸಿವಿಲ್ ಮತ್ತು ಜೆಎಂಎಫ್ ಸಿ ನ್ಯಾಯಾಧೀಶರಾದ ಬಸವರಾಜ್ ತಳವಾರ್ ಅಭಿಪ್ರಾಯಪಟ್ಟರು

ಪಟ್ಟಣದ ನ್ಯಾಯಾಲಯದ ಅವರಣದಲ್ಲಿ ತಾಲೂಕು ಕಾನೂನು ಸೇವೆಗಳ ಸಮಿತಿ. ವಕೀಲರ ಸಂಘ.ಸಾಮಾಜಿಕ ಅರಣ್ಯ ವಲಯ. ಪೋಲಿಸ್ ಇಲಾಖೆ ಹಾಗೂ ಶಿಕ್ಷಣ ಇಲಾಖೆ. ಗುಂಡ್ಲುಪೇಟೆ. ಇವರ ಸಂಯುಕ್ತ ಆಶ್ರಯದಲ್ಲಿ "ಇಂದು ರಕ್ಷಿಸಿ–ನಾಳೆ ಸುರಕ್ಷಿತ" ಪರಿಸರ ಜಾಗೃತಿ ಜಾಥಾ ಹಾಗೂ ಸ್ವಚ್ಛತಾ ಕಾರ್ಯಕ್ರಮಕ್ಕೆ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು ನಂತರ ಮಾತನಾಡಿ ಅವರು ಮನುಷ್ಯ ಆರೋಗ್ಯವಾಗಿ ಬದುಕಬೇಕಾದರೆ ಉತ್ತಮ ಪರಿಸರದ ಅನಿವಾರ್ಯವಿದೆ. ಕೊರೋನಾ ಸೋಂಕು ಬಂದು ಹೋದ ಮೇಲೆ ಪರಿಸರ ಉಳಿಸಲು ಹೊಸ ಯತ್ನಗಳು ಆರಂಭವಾಗಿದೆ. ಬದಲಾವಣೆಗೆ ನಾವೆಲ್ಲರೂ ಕೈಜೋಡಿಸಬೇಕಾಗಿದೆ. ಪ್ರಕೃತಿಯ ಮೇಲೆ ಮಾನವನ ಅಕ್ರಮಣ ಹೆಚ್ಚಾಗುತ್ತಿದೆ. ಜೀವಪರಿಸರ ಬಿಕ್ಕಟ್ಟು ಉಂಟಾಗಲಿದೆ. ಪ್ರಕೃತಿಯಲ್ಲಿನ ನೈಸರ್ಗಿಕ ಸಂಪತ್ತು ನಾಶವಾಗುತ್ತಿದ್ದು, ಅನೇಕ ಜೀವರಾಶಿಗಳು ಕಣ್ಮರೆಯಾಗುತ್ತಿವೆ ಎಂದರು.

ಇಂದಿನ ಕಲುಷಿತ ವಾತಾವರಣದಲ್ಲಿ ಆರೋಗ್ಯವಂತ ಜೀವನಕ್ಕಾಗಿ ಪರಿಸರ ಸಂರಕ್ಷಣೆ ಮಾಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಉತ್ತಮ ಪರಿಸರ ನಿರ್ಮಾಣ ಮಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಬೇಕು. ಹಸಿರು ಉಸಿರಾಗಬೇಕಿದೆ. ಉತ್ತಮ ಪರಿಸರ ಉತ್ತಮ ಆರೋಗ್ಯವನ್ನು ನೀಡುತ್ತದೆ ಎಂದರು. ಇಂದು ಹಲವಾರು ಕಾರಣಗಳಿಂದ ಪರಿಸರ ನಾಶವಾಗುತ್ತಿದೆ. ಆದ್ದ ರಿಂದ ಪರಿಸರ ರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯ ವಾದಾಗ ಪರಿಸರ ಸುರಕ್ಷಿತವಾಗಿರುತ್ತದೆ. ಮನೆಯಂಗಳ, ಬೀದಿಯಲ್ಲಿ, ಶಾಲಾ ಆವರಣ, ಸರ್ಕಾರಿ ಕಚೇರಿಗಳ ಆವರಣದಲ್ಲಿ ಕಡ್ಡಾಯವಾಗಿ ಸಸಿ ನೆಡಬೇಕು ಎಂದು ಕರೆ ನೀಡಿದರು. ಪ್ರಕೃತಿ ನಮಗೆ ಎಲ್ಲವನ್ನು ನೀಡಿದೆ. ಎಂದು ತಿಳಿಸಿದರು ಪ್ರಧಾನ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರಾದ ಎಂಟಿ ದೀಪು. ಹಾಗೂ ಅಪಾರ ಸಿವಿಲ್ ಮತ್ತು ಜೆಎಂ ಎಫ್‌ಸಿ ನ್ಯಾಯಾಧೀಶರಾದ. ಆರ್ ಬಿ ಗಿರೀಶ್ ರವರು ಮುಖ್ಯ ಅತಿಥಿಗಳಾಗಿದ್ದರು ಈ ಸಂದರ್ಭದಲ್ಲಿ ತಾಲೂಕು ವಕೀಲರ ಸಂಘದ ಅಧ್ಯಕ್ಷ ಟಿ ವಂಕಟೇಶ್. ಸಾಮಾಜಿಕ ಅರಣ್ಯ ವಲಯ ಅರಣ್ಯ ಅಧಿಕಾರಿ. ರವಿ. ಸರ್ಕಾರಿ ಸಹಾಯಕ ಅಭಿಯೋಜಕರು ರೇವಣ್ಣ ಪಿ ಸಿ. ಪುರಸಭೆಯ ಸಿಬ್ಬಂದಿ ವರ್ಗ ಹಾಗೂ ವಕೀಲರ ಸಂಘದ ಕಾರ್ಯದರ್ಶಿ ಬಸವರಾಜ್.ಮತ್ತು ವಕೀಲರು ಹಾಜರಿದ್ದರು

# 6 ತಿಂಗಳಲ್ಲಿ ಉಂಡುವಾಡಿ ಯೋಜನೆ ಪೂರ್ಣ



ಮೈಸೂರು: ನಗರ ಮತ್ತು ಹೊರವಲಯದ ಬಡಾವಣೆಗಳು, ಗ್ರಾಮಾಂತರ ಪ್ರದೇಶದ ಹಳ್ಳಿಗಳಿಗೆದಿನದ 24ಗಂಟೆಗಳ ಕಾಲ ಕುಡಿಯುವ ನೀರು ಒದಗಿಸುವ ಹಳೇ ಉಂಡುವಾಡಿ ಯೋಜನೆ ಕಾಮಗಾರಿ ಆರು ತಿಂಗಳಲ್ಲಿ ಮುಗಿಯಲಿದ್ದು, ಅಲ್ಲಿಯವರೆಗೆ ಕಾವೇರಿ, ಕಬಿನಿ ಜಲಮೂಲದಿಂದ ಒದಗಿಸುತ್ತಿರುವ ಪ್ರದೇಶಗಳಲ್ಲಿ ನೀರಿನ ಸಮಸ್ಯೆ ಉಂಟಾಗದಂತೆ ನೋಡಿಕೊಳ್ಳಬೇಕು ಎಂದು ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ನಗರಪಾಲಿಕೆ ವಲಯ ಕಚೇರಿ ಮೂರರಲ್ಲಿ ಶನಿವಾರ ನಡೆದ ಚಾಮುಂಡೇಶ್ವರಿ ಕ್ಷೇತ್ರದ ವ್ಯಾಪ್ತಿಗೆ ಬರುವ ಪಾಲಿಕೆ ವಲಯ ಕಚೇರಿ, ಪಟ್ಟಣ ಪಂಚಾಯಿತಿ, ನಗರಸಭೆ ಅಧಿಕಾರಿಗಳ ಸಭೆಯಲ್ಲಿ ಮುಂದಿನ ಆರು ತಿಂಗಳ ಕಾಲ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದಾಗಿರುವ ಕಾರಣ ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಿದರು. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾರ್ಯಪಾಲಕ ಅಭಿಯಂತರ ಆಸೀಫ್ ಇಕ್ಬಾಲ್ ಖಲೀಲ್ ಮಾತನಾಡಿ, 2018ರಲ್ಲಿ ಹಳೇ ಉಂಡುವಾಡಿ ಯೋಜನೆಗೆ ಅನುಮೋದನೆ ಸಿಕ್ಕಿದ್ದು, ಮೂರು ವರ್ಷಗಳಿಂದ ಕಾಮಗಾರಿ ಆರಂಭವಾಗಿ ಪ್ರಗತಿಯಲ್ಲಿದೆ. 31 ಓವರ್‌ಹೆಡ್ ಟ್ಯಾಂಕ್‌ಗಳಲ್ಲಿ 22 ಪೂರ್ಣವಾಗಿ,7ಟ್ಯಾಂಕ್ ಏಪ್ರಿಲ್ ತಿಂಗಳಲ್ಲಿ ಮುಗಿಯಲಿದೆ.ಉಳಿದ ಎರಡು ಜೂನ್ ತಿಂಗಳಲ್ಲಿ ಮುಗಿಯಲಿದೆ.ಪೈಪ್‌ಲೈನ್ ಕಾಮಗಾರಿ ನಡೆಯುತ್ತಿದೆ ಎಂದು ವಿವರಿಸಿದರು. ಬೆಳಗೊಳ ಒಂದನೇ ಹಂತದಲ್ಲಿ 2,27 ಎಂಎಲ್‌ಡಿ, ಎರಡನೇ ಹಂತದ 13.62,ಮೂರನೇ ಹಂತದಲ್ಲಿ 36.32 ಎಂಎಲ್‌ಡಿ,ಹೊಂಗಳ್ಳಿ ಎರಡನೇ ಹಂತ 54, ಮೂರನೇ ಹಂತದ 48ಎಂಎಲ್‌ಡಿ, ಮೇಳಾಪುರ 1ನೇ ಹಂತ 50ಎಂಎಲ್‌ಡಿ, ಕಬಿನಿ ಜಲಾಶಯದಿಂದ 60ಎಂಎಲ್‌ಡಿ ನೀರು ಡ್ರಾ ಮಾಡಲಾಗುತ್ತಿದೆ. ಹಳೇ ಉಂಡುವಾಡಿ ಯೋಜನೆ ಪೂರ್ಣವಾಗುವ ತನಕ ಮೇಳಾಪುರ,ಹೊಂಗಳ್ಳಿ ಮೂಲದಿಂದ ರಮ್ಮನಹಳ್ಳಿ ಭಾಗಕ್ಕೆ, ಕಬಿನಿ ಮೂಲದಿಂದ ಶ್ರೀರಾಂಪುರ,ಬೋಗಾದಿ ಭಾಗಕ್ಕೆ ಹರಿಸಲಾಗುತ್ತಿದೆ. ಕಬಿನಿ ಎರಡನೇ ಹಂತದ 60ಎಂಎಲ್‌ಡಿ ನೀರಿನಲ್ಲಿ ವಿಜಯನಗರ ನಾಲ್ಕನೇ ಹಂತ, ಎಸ್‌ಬಿಎಂ ಲೇಔಟ್, ರೂಪಾನಗರ ಇನ್ನಿತರ ಪ್ರದೇಶಗಳಿಗೆ ಹರಿಸಲಾಗುತ್ತದೆ ಎಂದು ಹೇಳಿದರು. ಈ ವೇಳೆ ಶಾಸಕ ಜಿ.ಟಿ.ದೇವೇಗೌಡ ಹಾಲಿ ಬಡಾವಣೆಗಳು,ಗ್ರಾಮಗಳಿಗೆ ನೀರು ಕೊಡುವ ಜತೆಗೆ ಖಾಸಗಿ ಬಡಾವಣೆಗಳಿಗೆ ನೀರು ಕೊಡಬೇಕು. ಬಡಾವಣೆಗಳಲ್ಲಿ ನಿರ್ಮಿಸಿರುವ ಓವರ್‌ಹೆಡ್ ಟ್ಯಾಂಕ್‌ಗೆ ಸಂಪರ್ಕ ಕೊಡಬೇಕು. ಎಲ್ಲೆಲ್ಲಿ ಪೈಪ್‌ಲೈನ್ ಅಗತ್ಯವಿದೆ, ಯಾವ್ಯಾವ ಕಡೆಗಳಲ್ಲಿ ಸಂಪರ್ಕ ಕೊಡಬೇಕು, ಎಲ್ಲಿ ಮಿಸ್ಸಿಂಗ್ ಲಿಂಕ್ ಇದೆ ಎನ್ನುವುದನ್ನು ಪರಿಶೀಲಿಸಬೇಕು. ನಗರಪಾಲಿಕೆ, ಸ್ಥಳೀಯ ಸಂಸ್ಥೆಗಳು,ನಗರ ನೀರು ಸರಬರಾಜು ಮಂಡಳಿ ಅಧಿಕಾರಿಗಳು ಜಂಟಿ ಸರ್ವೆ ಮಾಡಿ ವರದಿ ತಯಾರಿಸಬೇಕು. ಖಾಸಗಿ ಬಡಾವಣೆಗಳಿಗೆ ನೀರು ಕೊಡಲು ಪೈಪ್‌ಲೈನ್ ಅಗತ್ಯವಿದ್ದರೆ ತಕ್ಷಣವೇ ಕ್ರಿಯಾಯೋಜನೆ ರೂಪಿಸಿ ಅನುಮೋದನೆ ಪಡೆದು ಟೆಂಡರ್ ಪ್ರಕ್ರಿಯೆ ಆರಂಭಿಸಿ ಎಂದು ಸೂಚಿಸಿದರು.

**ನೀರಿನ ಸಮಸ್ಯೆ ಇತ್ಯರ್ಥಕ್ಕೆ ಕ್ರಮಕೈಗೊಳ್ಳಿ**

**ಮುಂದಿನ ಜೂನ್ ತಿಂಗಳವರೆಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗಬಹುದಾಗಿರುವುದರಿಂದ ಸಮಸ್ಯೆಗಳ ಪಟ್ಟಿ ಮಾಡಬೇಕು. ಪರಸ್ಪರ ಸಮನ್ವಯತೆಯಿಂದ ನೀರು ಕೊಡಬೇಕು. ಪ್ರತಿನಿತ್ಯ ಜನರು ಬಂದು ಸಮಸ್ಯೆ ಹೇಳುತ್ತಾರೆ.ಅಧಿಕಾರಿಗಳು ಒಬ್ಬರಿಗೊಬ್ಬರು ಮಾತನಾಡಿಕೊಂಡು ದಿನನಿತ್ಯ ನಿವಾಸಿಗಳಿಗೆ ನೀರು ಹರಿಸುವ ಕೆಲಸ ಮಾಡಬೇಕು. ಯುಜಿಡಿ ಸಮಸ್ಯೆ ಬರದಂತೆ ನಿತ್ಯ ಅಧಿಕಾರಿಗಳು ಬಡಾವಣೆಗಳಿಗೆ ಭೇಟಿ ನೀಡಿವೀಕ್ಷಿಸಿದರೆ ಗೊತ್ತಾಗುತ್ತದೆ.**

**–ಜಿ.ಟಿ.ದೇವೇಗೌಡ** ಶಾಸಕ

# ಶಿಲ್ಪಕಲಾ ಸೌಂದರ್ಯಕ್ಕೆ ಜೀವ ತುಂಬಿದ ಅಮರಶಿಲ್ಪಿ ಜಕಣಾಚಾರಿ

## ಶಾಸಕ ಸಿ.ಪುಟ್ಟರಂಗಶೆಟ್ಟಿ ಅಭಿಮತ | ಅಮರಶಿಲ್ಪಿ ಜಕಣಾಚಾರಿ ದಿನಾಚರಣೆ



ಚಾಮರಾಜನಗರ, ಜಕಣಾಚಾರಿಯವರು ಅದ್ಭುತ ಕಲಾ ಪ್ರಕಾರಗಳ ಮೂಲಕ ಶಿಲ್ಪಕಲಾ ಸೌಂದರ್ಯಕ್ಕೆ ಜೀವ ತುಂಬಿದ್ದಾರೆ ಎಂದು ಮೈಸೂರು ಸೇಲ್ಸ್ ಇಂಟರ್ನ್ಯಾಷನಲ್ ಲಿಮಿಟೆಡ್ ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ತಿಳಿಸಿದರು.

ನಗರದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ, ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಕಣಾಚಾರಿಯವರು ನಿರ್ಮಿಸಿದ ದೇವಾಲಯಗಳ ಶಿಲ್ಪಕಲಾ ಸೌಂದರ್ಯ ಜೀವಂತಿಕೆಯಿಂದ ಕೂಡಿದ್ದು, ಇಂದಿಗೂ ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿವೆ. ಇದು ಸ್ಪರ್ಧಾತ್ಮಕ ಹಾಗೂ ತಂತ್ರಜ್ಞಾನ ಮುಂದುವರಿದಿರುವ ಯುಗವಾಗಿದ್ದು, ಯಾವುದೇ ಕೆಲಸ ಕಾರ್ಯಗಳು ಕೆಲವೇ ದಿನಗಳಲ್ಲಿ ಪೂರ್ಣಗೊಳ್ಳಲಿವೆ. ಆದರೆ ಯಾವುದೇ ತಂತ್ರಜ್ಞಾನವಿಲ್ಲದ ಅಂದಿನ ಕಾಲದಲ್ಲಿ ಶಿಲ್ಪಕಲೆಯಲ್ಲಿ ಉತ್ತಮ ಕರಕುಶಲತೆ ಪ್ರದರ್ಶಿಸಿದ ಜಕಣಾಚಾರಿಯವರು ಇಂದಿಗೂ ಪ್ರಸ್ತುತವಾಗಿದ್ದಾರೆ ಹಾಗೂ ಸ್ಮರಣೀಯರಾಗಿದ್ದಾರೆ ಎಂದರು.

ಹೊಯ್ಸಳ ಅರಸರ ಕಾಲದಲ್ಲಿ ನಿರ್ಮಿಸಲಾದ ಬೇಲೂರು, ಹಳೆಬೀಡು ಹಾಗೂ ಸೋಮನಾಥಪುರದ ದೇವಾಲಯಗಳು ಅದ್ಭುತ ಶಿಲ್ಪಕಲೆಗಳನ್ನು ಹೊಂದಿದೆ. ಕರ್ನಾಟಕದ ಶಿಲ್ಪಕಲೆಗೆ ಅಪಾರ ಕೊಡುಗೆ ನೀಡಿದ ಅಮರಶಿಲ್ಪಿ ಜಕಣಾಚಾರಿ ಅವರ ಜಯಂತಿ ಕಾರ್ಯಕ್ರಮವು ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ನಡೆಯಬೇಕು. ವಿಶ್ವಕರ್ಮ ಸಮುದಾಯ ಸಂಘಟಿತರಾಗಬೇಕು. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು. ಸಮುದಾಯವು ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಾಗೂ ರಾಜಕೀಯವಾಗಿ ಮುಂಚೂಣಿಗೆ ಬರಬೇಕು ಎಂದು ತಿಳಿಸಿದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನ ಮಾತನಾಡಿ ಅಮರಶಿಲ್ಪಿ ಜಕಣಾಚಾರಿ ಅವರು 800 ವರ್ಷಗಳ ಹಿಂದೆಯೇ ಶಿಲ್ಪಕಲೆಯಲ್ಲಿ ಮಾಡಿದ ಸಾಧನೆ ಅವಿಸ್ಮರಣೀಯವಾಗಿವೆ. ಶಿಲ್ಪಕಲೆಯಲ್ಲಿ ಅವರು ಮಾಡಿದ ಸಾಧನೆ ಹಾಗೂ ವಿಶಿಷ್ಟ ಕಲಾ ಪ್ರಕಾರಗಳನ್ನು ಮುಂದಿನ ಪೀಳಿಗೆಗೆ ಬಳುವಳಿಯಾಗಿ ನೀಡಬೇಕು ಎಂದರು.

ಮುಖ್ಯ ಭಾಷಣ ಮಾಡಿದ ಕೊಳ್ಳೇಗಾಲದ ನಿವೃತ್ತ ಶಿಕ್ಷಕರಾದ ಮುಳ್ಳೂರು ಪಿ. ಸಿದ್ದಪ್ಪಾಜಿ ಅವರು ತುಮಕೂರು ಜಿಲ್ಲೆಯ ಕೈದಾಳ ಗ್ರಾಮದಲ್ಲಿ ಅಮರಶಿಲ್ಪಿ ಜಕಣಾಚಾರಿ ಅವರು ಜನಿಸಿದರು. ಅವರ ಶಿಲ್ಪಿ ಜಕಣಾಚಾರಿಯವರು ನಿರ್ಮಿಸಿದ 93 ದೇವಾಲಯಗಳಲ್ಲಿ ಇಂದು ಸೋಮನಾಥಪುರ, ಬೇಲೂರು ಮತ್ತು ಹಳೆಬೀಡಿನಲ್ಲಿ ಮಾತ್ರ ಅಸ್ತಿತ್ವದಲ್ಲಿವೆ. ಟಿ. ನರಸೀಪುರ ತಾಲೂಕಿನ ಸೋಮನಾಥಪುರ ದೇವಾಲಯವನ್ನು ಜಕಣಾಚಾರಿಯವರು 15 ವರ್ಷಗಳ ಅವಧಿಯಲ್ಲಿ ನಿರ್ಮಿಸಿದರು ಎಂದರು.

ಜಕಣಾಚಾರಿಯವರು ನಿರ್ಮಿಸಿದ ದೇವಾಲಯಗಳ ಶಿಲ್ಪಕಲೆಯಲ್ಲಿ ಅತ್ಯದ್ಭುತ ಕೆತ್ತನೆಗಳನ್ನು ಕಾಣಬಹುದಾಗಿದೆ. ಅದೇ ಮಾದರಿಯಲ್ಲಿ ಬೇಲೂರು, ಹಳೆಬೀಡುಗಳಲ್ಲಿ ದೇವಾಲಯಗಳಲ್ಲಿನ ಸುಂದರ ಕೆತ್ತನೆ ಇಂದಿಗೂ ಜನರ ಕಣ್ಮನ ಸೆಳೆಯುತ್ತಿವೆ. ಹೊಯ್ಸಳರ ರಾಜ ವಿಷ್ಣುವರ್ಧನನು ಜಕಣಾಚಾರಿಂರುವರ ಕಾಯಕವನ್ನು ಮೆಚ್ಚಿ ಅಮರಶಿಲ್ಪಿ ಎಂಬ ಬಿರುದು ನೀಡಿ ಗೌರವಿಸಿರುವುದು ಬಹಳ ವಿಶೇಷವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕರಕುಶಲ ಕಲೆಗಳಲ್ಲಿ ಸಾಧನೆಗೈದ ಸಮುದಾಯದ 10 ಮಂದಿಯನ್ನು ಸನ್ಮಾನಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಬಿ.ಎಸ್. ರಾಜು, ವಿಶ್ವಕರ್ಮ ಸಮುದಾಯದ ಜಿಲ್ಲಾಧ್ಯಕ್ಷರಾದ ಹೊನ್ನಳ್ಳಿ ಮಹೇಶ್, ಪ್ರಧಾನ ಕಾರ್ಯದರ್ಶಿ ಹರದನಹಳ್ಳಿ ಸುರೇಶ್, ಗೌರವಾಧ್ಯಕ್ಷರಾದ ಸೋಮಾಚಾರಿ, ವಿಶ್ವಕರ್ಮ ನಿಗಮ ಮಂಡಳಿಯ ನಾಮನಿರ್ದೇಶಿತ ಸದಸ್ಯರಾದ ಶ್ರೀನಿವಾಸ ಆಚಾರ್, ಕನ್ನಡ ಜಾಗೃತಿ ಸಮಿತಿಯ ಸದಸ್ಯರಾದ ಪದ್ಮಾ ಪುರುಷೊತ್ತಮ್, ಮುಖಂಡರಾದ ಲಿಂಗಣ್ಣಚಾರಿ, ಶ್ರೀನಿವಾಸಮೂರ್ತಿ, ಇತರರು ಉಪಸ್ಥಿತರಿದ್ದರು.

# ಸಾವಿತ್ರಿ ಬಾಪುಲೆ ಹಚ್ಚಿದ ಅಕ್ಷರದ ಹಣತೆ ಬೆಳಗುತ್ತಿದೆ

### ಸುಭಾಷ್ ಮಾಡ್ರಹಳ್ಳಿ ಅಭಿಮತ



ಗುಂಡ್ಲುಪೇಟೆ: ಸಾವಿತ್ರಿ ಬಾಪುಲೆ ಹಚ್ಚಿದ ಅಕ್ಷರದ ಹಣತೆ ಬೆಳಗುತ್ತಿದೆ ಎಂದು ಸುಭಾಷ್ ಮಾಡ್ರಹಳ್ಳಿ ಅಭಿಪ್ರಾಯ ಪಟ್ಟರು.

ಅವರು ಮಾನವ ಬಂಧುತ್ವ ವೇದಿಕೆ ಹಾಗೂ ಸರ್ಕಾರಿ ಪ್ರಾಥಮಿಕ ಶಾಲೆ ರಾಘವಪುರ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದ್ದ ಅಕ್ಷರ ಮಾತೆ ಸಾವಿತ್ರಿ ಬಾಪುಲೆ ರವರ 195 ಜನ್ಮ ದಿನಾಚರಣೆ ಕಾರ್ಯಕ್ರಮ ದಲ್ಲಿ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು. ಶೋಷಿತರ ಬದುಕಿನಲ್ಲಿ ಬೆಳಕಾಗಿ ಬಂದರು. ಎರಡು ಶತಮಾನದ ಹಿಂದೆ ಮಡಿ ವಂತಿಕೆ ಸಮಾಜದಲ್ಲಿ ಭಾರತೀಯ ಮೂಲ ನಿವಾಸಿಗಳಿಗೆ ಶೈಕ್ಷಣಿಕ ಕ್ರಾಂತಿ ಮಾಡಿದ ಜ್ಯೋತಿ ಬಾಪುಲೆ ದಂಪತಿಗಳ ತ್ಯಾಗದ ಪ್ರತಿಫಲವೇ ಜ್ಞಾನ ಜ್ಯೋತಿ ಡಾ ಅಂಬೇಡ್ಕರ್ ಆಗಿದ್ದಾರೆ. ಸತಿ ಸಹಗಮನ ಹಾಗೂ ಬಾಲ್ಯ ವಿವಾಹ ಹಾಗೂ ಕೇಶ ಮುಂಡನದಂತಹ ಅನಿಷ್ಟ ಪದ್ಧತಿಗಳನ್ನು ನಿರ್ಮೂಲನೆ ಮಾಡುವ ಸಲುವಾಗಿಯೂ ಶ್ರಮಿಸಿದರು.

ಹೆಣ್ಣು ಮಕ್ಕಳಿಗೆ ಶಿಕ್ಷಣ ಎಂಬುದು ಮರಿಚಿಕೆ ಆಗಿದ್ದ ಸಂಧರ್ಭದಲ್ಲಿ ಜ್ಯೋತಿ ಬಾಪುಲೆ ರವರು ತಮ್ಮ ಮಡದಿ ಸಾವಿತ್ರಿ ಗೆ ವಿದ್ಯೆ ಕಲಿಯಲು ಅವಕಾಶ ನೀಡಿ. ಆನಂತರ ಸಮಾಜದ ಎಲ್ಲರಿಗೂ ವಿದ್ಯೆ ಕಲಿಸಲು ಪ್ರಾರಂಭಿಸಿ ಮಡಿವಂತರ ಕೆಂಗಣ್ಣಿಗೆ ಕಾರಣವಾಯಿತು. ಇಷ್ಟೆಲ್ಲಾ ಕಷ್ಟಗಳ ನಡುವೆ ಸೆಗಣಿ ಎರಚಿ ಅಪಮಾನ ಮಾಡಿದರೂ ಕೂಡ ಧೃತಿಗೆಡದೆ ಶೈಕ್ಷಣಿಕ ಹಾಗೂ ಸಾಮಾಜಿಕ ಕ್ರಾಂತಿಗೆ ಮುನ್ನುಡಿ ಬರೆದಿದ್ದಾರೆ ಎಂದರು.

ಈ ಸಂಧರ್ಭದಲ್ಲಿ ಮುಖ್ಯ ಅತಿಥಿಯಾಗಿ ಮಾಜಿ ಅಧ್ಯಕ್ಷರು ಹಾಲಿ ಸದಸ್ಯರು ಆದ ಆರ್ ಡಿ ಉಲ್ಲಾಸ್ ಮಾತನಾಡಿ ಶಿಕ್ಷಕರ ಪಾತ್ರ ಮಕ್ಕಳ ಪ್ರಗತಿಯಲ್ಲಿ ಬಹಳ ಇದೆ. ಮಕ್ಕಳ ಉನ್ನತಿ ದೇಶದ ಅಭಿವೃದ್ಧಿಗೆ ಕಾರಣವಾಯಿತು. ಅಧ್ಯಕ್ಷತೆ ಯನ್ನು ಮುಖ್ಯ ಶಿಕ್ಷಕರಾದ ಯಶೋಧ ವಹಿಸಿ ಮಾತನಾಡಿದರು. ಸಹ ಶಿಕ್ಷಕರಾದ ರವಿ ರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಮಾನವ ಬಂಧುತ್ವ ವೇದಿಕೆ ತಾಲ್ಲೂಕು ಸಂಚಾಲಕರಾದ ಆರ್ ಸೋಮಣ್ಣ , ಎಸ್ ಡಿ ಎಂ ಸಿ ಅಧ್ಯಕ್ಷರಾದ ಮಹದೇವ ಸ್ವಾಮಿ. ಮುತ್ತಣ್ಣ ಹುಲಸಗುಂದಿ, ರಾಜು ಹೊಸಮನೆ , ಮಿಮಿಕ್ರಿ ರಾಜೀವ್ , ಅತಿಥಿ ಶಿಕ್ಷಕಿ ಚಂದ್ರಕಲಾ, ಕಾವ್ಯ ,ಮಮತ , ಗಿರಿಜಮ್ಮ ಭಾಗ್ಯ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಜ.10ರಂದು ರೈತ ಚಿಂತನ ಸಮಾವೇಶ



ಚಾಮರಾಜನಗರ, ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ನಗರದಲ್ಲಿ ಜ. ,10 ರಂದು ವಿಶ್ವರೈತ ದಿನಾಚರಣೆ ಹಾಗೂ ರಾಜ್ಯ ಮಟ್ಟದ ರೈತ ಚಿಂತನಾ ಸಮಾವೇಶವನ್ನು ಆಯೋಜಿಸಲಾಗಿದೆ ಎಂದು ರಾಜ್ಯ ಕಬ್ಬುಬೆಳೆಗಾರರ ಸಂಘದ ಅಧ್ಯಕ್ಷ ಹಳ್ಳಿಕೆರೆ ಹುಂಡಿ ಭಾಗದಯರಾಜ್ ಹೇಳಿದರು.

ಅಂದು ಬೆಳಗ್ಗೆ ಡಾ, ರಾಜ್ ಕುಮಾರ್ ಕಲಾ ಭವನದ ಸಭಾಂಗಣದಲ್ಲಿ ನಡೆಯಲಿರುವ ಸಮಾವೇಶದ ಸಾನ್ನಿಧ್ಯವನ್ನು ಸುತ್ತೂರು ದೇಶಿಕೇಂದ್ರ ಸ್ವಾಮೀಜಿ ವಹಿಸಲಿದ್ದು, ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಉದ್ಘಾಟನೆ ಮಾಡಲಿದ್ದಾರೆ ಎಂದು ತಿಳಿಸಿದರು. ಕರ್ನಾಟಕ ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಅಶೋಕ ದಳವಾಯಿ ಅನ್ನದಾತ ಗ್ರಂಥ ಬಿಡುಗಡೆ ಮಾಡಲಿದ್ದಾರೆ. ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆ ಹುಂಡಿ ಭಾಗ್ಯರಾಜ್ ಅಧ್ಯಕ್ಷತೆವಹಿಸಲಿದ್ದಾರೆ. ಜಿಲ್ಲೆಯ ಎಲ್ಲಾ ಶಾಸಕರು, ರೈತಮುಖಂಡರು ಹಾಗೂ ಸಂಘ ಸಂಸ್ಥೆಗಳ ಮುಖಂಡರು ಭಾಗವಹೊಸಲಿದ್ದಾರೆ ಎಂದು ತಿಳಿಸಿದರು. ಸಮಾವೇಶದಲ್ಲಿ ರೈತರ ಸಮಸ್ಯೆಗಳ ಬಗ್ಗೆ ಚರ್ಚಿಸಲಾಗುತ್ತದೆ ಹಾಗೂ ಹಕ್ಕೊತ್ತಾಯ ಗಳನ್ನು ಈಡೇರಿಸುವಂತೆ ಆಗ್ರಹಿಸಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಘದ ರಾಜ್ಯ ಸಂಚಾಲಕ ಹನುಮಯ್ಯ, ಜಿಲ್ಲಾಧ್ಯಕ್ಷ ಹಾಲಿನ ನಾಗರಾಜು, ಮುಖಂಡರಾದ ಮಹೇಂದ್ರ, ಸತೀಶ್, ಮಹೇಶ್, ರಾಮಣ್ಣ, ರಾಜು ಹಾಜರಿದ್ದರು.

# ಮಹದೇಶ್ವರ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಚೆಕ್ ವಿತರಣೆ



ಚಾಮರಾಜನಗರ, ತಾಲ್ಲೂಕಿನ ಸಾಗಡೆ ಗ್ರಾಮದ ಶ್ರೀ ಮಲೆ ಮಹದೇಶ್ವರ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಟ್ರಸ್ಟ್ ವತಿಯಿಂದ ಚೆಕ್ ವಿತರಿಸಲಾಯಿತು.

ಯೋಜನಾಧಿಕಾರಿ ಶಶಿಕುಮಾರ್ ಅವರು ಸಾಗಡೆ ಗ್ರಾಮ ಪಂಚಾಯತಿ ಅಧ್ಯಕ್ಷ ಶಿವಕುಮಾರ್, ಉಪಾಧ್ಯಕ್ಷೆ ಮಂಜುಳಾ, ಸದಸ್ಯಎಸ್.ಆರ್. ಗುರುಪ್ರಸಾದ್, ಕೃಷ್ಣಶೆಟ್ಟಿ ಅವರ ಸಮ್ಮುಖದಲ್ಲಿ 1.5 ಲಕ್ಷ ರೂಗಳ ಚೆಕ್ ಅನ್ನು ನೀಡಿದರು. ವಲಯದ ಮೇಲ್ವಿಚಾರಕ ಎಚ್.ಬಿ.ಹರೀಶ್, ಶಶಿಕುಮಾರ್, ಕೃಷಿ ಮೇಲ್ವಿಚಾರಕ ಮಂಜುನಾಥ್ ಹಾಗೂ ಸೇವಾ ಪ್ರತಿನಿಧಿ ನಾಗಮಣಿ, ಶ್ರೀ ಮಲೆ ಮಹದೇಶ್ವರ ದೇವಸ್ಥಾನ ಸಮಿತಿಯ ಅಧ್ಯಕ್ಷರು, ಊರಿನ ಯಜಮಾನರಾದ ಚನ್ನಶೆಟ್ಟಿ, ಚಿಕ್ಕಮಾದಶೆಟ್ಟಿ, ಮಾದಶೆಟ್ಟಿ, ಬಸವಶೆಟ್ಟಿ ಇತರರು ಹಾಜರಿದ್ದರು.

# ‘ಪ್ಲಾಸ್ಟಿಕ್ ಬದಲೂ ಪರ್ಯಾಯ ತರುವಂತೆ ಅರಿವು ಮೂಡಿಸಿ’

### ಮೈಸೂರಿನಿಂದ ಮಲೆಮಹದೇಶ್ವರ ಬೆಟ್ಟದವರಗೆ ಏಕಪ್ಲಾಸ್ಟಿಕ್ ಮುಕ್ತ ಅಭಿಯಾನ’



ಚಾಮರಾಜನಗರ: ಜಿಲ್ಲೆಯ ಪ್ರಸಿದ್ಧ ಯಾತ್ರಾಸ್ಥಳ ಮಲೆಮಹದೇಶ್ವರ ಬೆಟ್ಟವನ್ನು ಪ್ಲಾಸ್ಟಿಕ್ ಮುಕ್ತಗೊಳಿಸುವ ಸಂಬಂಧ ‘ಏಕಪ್ಲಾಸ್ಟಿಕ್ ಮುಕ್ತ ಅಭಿಯಾನ’ವನ್ನು ಮೈಸೂರಿನಿಂದ ಮಲೆಮಹದೇಶ್ವರ ಬೆಟ್ಟದವರಗೆ ಹಮ್ಮಿಕೊಳ್ಳಲಾಗಿದೆ ಎಂದು ಪರಿಸರಹೋರಾಟಗಾರ ಮೈಸೂರು ಈರಪ್ಪನಕೊಪ್ಪಲು ಪಿ.ಮಂಜುನಾಥ್ ತಿಳಿಸಿದರು.

ನಗರದ ಜಿಲ್ಲಾಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಚಾಮರಾಜನಗರಜಿಲ್ಲೆಯ ಪ್ರಸಿದ್ಧಯಾತ್ರಾಸ್ಥಳ ಮಲೆಮಹದೇಶ್ವರಬೆಟ್ಟಕ್ಕೆ ಕೇವಲವಿಶೇಷದಿನಗಳಲ್ಲಿ ಅಲ್ಲದೇ, ಪ್ರತಿತಿಂಗಳು ಲಕ್ಷಾಂತರ ಸಂಖ್ಯೆಯ ಭಕ್ತರು ಆಗಮಿಸುತ್ತಾರೆ. ಈಗಾಗಲೇ ಮಹದೇಶ್ವರಬೆಟ್ಟ ಪ್ಲಾಸ್ಟಿಕ್ ನಿಷೇಧಿತಪ್ರದೇಶವಾಗಿದೆ. ಆದರೆ ಕ್ಷೇತ್ರ ಪ್ಲಾಸ್ಟಿಕ್ ಮುಕ್ತವಾಗಿಲ್ಲದಿರುವುದು ವಿಪರ್ಯಾಸ ಎಂದರು.

ಪ್ಲಾಸ್ಟಿಕ್ ಬದಲೂ ಪರ್ಯಾಯವಾಗಿ ಬಾಳೆಎಲೆ, ಅಡಿಕೆಎಲೆ, ಸ್ಟೀಲ್‌ಲೋಟ, ತಟ್ಟೆ ತರುವಂತೆ ರಾಜ್ಯಸರ್ಕಾರ ಭಕ್ತಾದಿಗಳಿಗೆ ಅರಿವುಮೂಡಿಸಬೇಕು,ಜಿಲ್ಲಾ ಉಸ್ತುವಾರಿ ಸಚಿವರು ಪ್ರಾಧಿಕಾರದ ಸಭೆಯಲ್ಲಿ ಅಧಿಕಾರಿಗಳಿಗೆ ಸೂಚನೆ ನೀಡಬೇಕು ಎಲ್ಲೆಂದರಲ್ಲಿ ಪ್ಲಾಸ್ಟಿಕ್ ಬಿಸಾಡುವವರ ವಿರುದ್ಧ ದಂಡವಿಧಿಸುವುದರ ಮೂಲಕ ಸರ್ಕಾರ ಕಠಿಣ ಕಾನೂನು ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ಕೆಆರೆಸ್ ಪಕ್ಷದ ಜಿಲ್ಲಾಧ್ಯಕ್ಷ ಗಿರೀಶ್, ಉಪಾಧ್ಯಕ್ಷ ಸಯ್ಯದ ಸಮೀ, ಶಂಕರ್, ಹನೂರುಘಟಕದ ಕೃಷ್ಣಮೂರ್ತಿ, ಬೀರೇಶ್, ಚಿನ್ನಸ್ವಾಮಿ ಹಾಜರಿದ್ದರು.

**ಕೆ.ಎಂ.ಮುನಿಗೋಪಾಲ್ ರಾಜು ಹೇಳಿಕೆ**

# ಇಂಧನ ಸೋರಿಕೆ, ನಷ್ಟ ತಗ್ಗಿಸಲು ತಾಂತ್ರಿಕ ಪರಿಣತಿ ಅವಶ್ಯ



ಮೈಸೂರು: ಇಂಧನ ಸೋರಿಕೆ, ವಿದ್ಯುತ್ ಅಡಚಣೆ ಹಾಗೂ ಆರ್ಥಿಕ ಹೊರೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ತಾಂತ್ರಿಕ ನಿರ್ವಹಣೆ ಅವಶ್ಯಕವಾಗಿದ್ದು, ಅಧಿಕಾರಿಗಳು ಸಮರ್ಪಕವಾಗಿ ತಾಂತ್ರಿಕ ನಿರ್ವಹಣೆಗೆ ಮುಂದಾಗಬೇಕು ಎಂದು ಸೆಸ್ಕ್‌ನ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು ಹೇಳಿದರು.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ಅಧಿಕಾರಿಗಳಿಗೆ ಕೆಇಬಿಇಎ ಮೈಸೂರು ವಲಯ ಕೇಂದ್ರದ ವತಿಯಿಂದ ಕಡಕೊಳದಲ್ಲಿರುವ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಇಂಜಿನಿಯರುಗಳ ಸಂಘ(ಕೆಇಬಿಇಎ)ದ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ"ಇಂಧನ(ವಿದ್ಯುತ್) ಲೆಕ್ಕ ಪರಿಶೀಲನೆ ಮತ್ತು ಐಪಿ ಫೀಡರ್ ನಲ್ಲಿ ನಷ್ಟಗಳ ಕಡಿತ" ವಿಷಯದ ಕುರಿತ ಒಂದು ದಿನದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಇಂಧನ ಸೋರಿಕೆ ತಡೆಯುವಲ್ಲಿ ತಾಂತ್ರಿಕ ಪರಿಣತಿ ಮುಖ್ಯವಾಗಿದೆ. ಈ ಹಿಂದೆ ಸಕಲೇಶಪುರದ ಬಾಳುಪೇಟೆ ಫೀಡರ್‌ನಲ್ಲಿ ಎನರ್ಜಿ ಆಡಿಟಿಂಗ್ ನಡೆಸಿದ ಸಂದರ್ಭ ಶೇ.40 ರಿಂದ 43ಇಂಧನ ಸೋರಿಕೆ ಕಂಡುಬಂದಿತ್ತು. ಆನಂತರದಲ್ಲಿ ಸಮರ್ಪಕ ತಾಂತ್ರಿಕ ನಿರ್ವಹಣೆ ಮಾಡಿದ್ದರ ಪರಿಣಾಮವಾಗಿ ಇಂಧನ ಸೋರಿಕೆಯ ಶೇ.12ಕ್ಕೆ ಇಳಿಕೆ ಮಾಡುವಲ್ಲಿ ಯಶಸ್ವಿಯಾದೆವು. ಇದರಿಂದ ನಿಗಮಕ್ಕೆ ಆದಾಯ ಹೆಚ್ಚಿತು, ವಿದ್ಯುತ್ ಅಡಚಣೆ ಕಡಿಮೆಯಾಗಿ, ಫೀಡರ್‌ಗಳು, ಟ್ರ್ಯಾನ್ಸ್‌ಫಾರ್ಮರ್‌ಗಳು ಮತ್ತು ಮೀಟರ್‌ಗಳ ನಿರ್ವಹಣೆ ಸುಲಭಗೊಂಡಿತು ಎಂದರು.

ಪ್ರಸ್ತುತ ಇಂಧನ ಇಲಾಖೆ ಹೊಸತನಕ್ಕೆ ಆದ್ಯತೆ ನೀಡಿ, 5000 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸಲು ಕಾರ್ಯಯೋಜನೆ ರೂಪಿಸಿದ್ದು, ಮುಂದಿನ ಒಂದು ವರ್ಷದಲ್ಲಿ ಇದನ್ನು ಸಾಧಿಸುವ ಗುರಿ ಹೊಂದಲಾಗಿದೆ. ಇದರ ನಡುವೆ ಸೆಸ್ಕ್ ವ್ಯಾಪ್ತಿಯಲ್ಲಿ 90 ಸ್ಟೇಷನ್‌ಗಳನ್ನು ಪ್ರಸಕ್ತ ವರ್ಷದಲ್ಲಿ ಹಾಕಲು ಮುಂದಾಗಿದೆ. ಪ್ರಮುಖವಾಗಿ ನಿಗಮ ವ್ಯಾಪ್ತಿಯಲ್ಲಿ ವಿದ್ಯುತ್ ವಿತರಣೆಯನ್ನು ಬಲಪಡಿಸಿ, ಪ್ರಸಕ್ತ ವರ್ಷದ ಮಾರ್ಚ್ ವೇಳೆಗೆ ಹೊಸದಾಗಿ 100 ಫೀಡರ್‌ಗಳನ್ನು ಹೊಸದಾಗಿ ಗ್ರಿಡ್‌ಗಳಿಗೆ ಸೇರ್ಪಡೆ ಮಾಡಬೇಕಿದೆ ಎಂದು ತಿಳಿಸಿದರು.

ಈ ಹಿನ್ನೆಲೆಯಲ್ಲಿ ತರಬೇತಿಯಲ್ಲಿ ನೀಡುವ ಸಲಹೆಗಳನ್ನು ಪಡೆದು, ಅವುಗಳನ್ನು ಪ್ರಾಯೋಗಿಕವಾಗಿ ಕಾರ್ಯರೂಪಕ್ಕೆ ತರುವುದರೊಂದಿಗೆ ಯಾವ ಫೀಡರ್‌ಗಳಲ್ಲಿ ಇಂಧನ ಸೋರಿಕೆ ಇದೆ ಅಂತಹ ಫೀಡರ್‌ಗಳಲ್ಲಿ ತಾಂತ್ರಿಕ ಪರಿಣತಿಯನ್ನು ಅಳವಡಿಸಿ, ಇಂಧನ ಸೋರಿಕೆ ಪ್ರಮಾಣವನ್ನು ತಗ್ಗಿಸಬೇಕಾಗಿದೆ. ಇದರೊಂದಿಗೆ ನಮ್ಮಲ್ಲಿರುವ ಸವಲತ್ತುಗಳನ್ನು ಸಮರ್ಪಕವಾಗಿ ಬಳಸಿಕೊಂಡು, ನಿರ್ದಿಷ್ಟ ಗುರಿ ಸಾಧಿಸಲು ಕಾರ್ಯಯೋಜನೆ ರೂಪಿಸಬೇಕಿದೆ ಎಂದರು.

ನಂತರ ನಡೆದ ತಾಂತ್ರಿಕ ಕಾರ್ಯಾಗಾರದಲ್ಲಿ ನಿವೃತ್ತ ತಾಂತ್ರಿಕ ನಿರ್ದೇಶಕ ಎಸ್.ಮಹೇಶ್, ಇಂಧನ(ವಿದ್ಯುತ್) ಲೆಕ್ಕಪರಿಶೀಲನೆಯ ತಂತ್ರಗಳು, ಇಂಧನ ಸೋರಿಕೆ ಹಾಗೂ ಆರ್ಥಿಕ ನಷ್ಟವನ್ನು ಕಡಿತಗೊಳಿಸುವ ಪ್ರಾಯೋಗಿಕ ಅಂಶಗಳ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ಸಮರ್ಪಕ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಸೆಸ್ಕ್ ತಾಂತ್ರಿಕ ನಿರ್ದೇಶಕಡಿ. ಜೆ. ದಿವಾಕರ್, ಅಧೀಕ್ಷಕ ಇಂಜಿನಿಯರ್ ಸುನೀಲ್, ಮುಖ್ಯ ಇಂಜಿನಿಯರ್‌ಗಳಾದ ಮೃತ್ಯುಂಜಯ, ಸೋಮಶೇಖರ್, ಮುಖ್ಯ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ) ಶರಣಮ್ಮ ಎಸ್. ಜಂಗಿನ, ಕೆಇಬಿಇಎ ಉಪಾಧ್ಯಕ್ಷ ಪೂರ್ಣಚಂದ್ರ ತೇಜಸ್ವಿ, ರಾಜ್ಯ ಕಾರ್ಯದರ್ಶಿ ಆರ್.ಸುಧೀರ್ ಸೇರಿ ಇತರರು ಇದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಎಚ್.ಎಸ್.ಮಹದೇವಪ್ರಸಾದ್ 9ನೇ ವರ್ಷದ ಪುಣ್ಯಾರಾಧನೆ

ಗುಂಡ್ಲುಪೇಟೆ, ಜ.03–ಮಾಜಿ ಸಚಿವ ದಿ.ಎಚ್.ಎಸ್.ಮಹದೇವಪ್ರಸಾದ್ ಅವರ 9ನೇ ವರ್ಷದ ಪುಣ್ಯಾರಾಧನೆ ತಾಲೂಕಿನ ಸ್ವಗ್ರಾಮ ಹಾಲಹಳ್ಳಿಯ ತೋಟದ ಮನೆಯ ಸಮಾಧಿ ಬಳಿ ನಡೆಯಿತು. ತಾಲೂಕಿನ ವಿವಿಧ ಗ್ರಾಮಗಳಿಂದ ಸಾವಿರಾರು ಮಂದಿ ಅಭಿಮಾನಿಗಳು, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಆಗಮಿಸಿ ಮಹದೇವ ಪ್ರಸಾದ್ ಸಮಾಧಿಗೆ ನಮನ ಸಲ್ಲಿಸಿದರು.

ಹಾಲಹಳ್ಳಿ ಗ್ರಾಮದ ಹೊರ ವಲಯ ದಲ್ಲಿರುವ ಬೊಗ್ಗನಪುರ ಫಾರಂ ಹೌಸ್‌ನಲ್ಲಿ ದಿ. ಎಚ್.ಎಸ್.ಮಹದೇವಪ್ರಸಾದ್ ಸಮಾಧಿ ಸ್ಥಳಕ್ಕೆ ಮಾಜಿ ಸಚಿವೆ ಗೀತಾಮಹದೇವ ಪ್ರಸಾದ್, ಪುತ್ರ ಶಾಸಕ ಎಚ್.ಎಂ.ಗಣೇಶಪ್ರಸಾದ್, ಸೊಸೆ ಎ.ಪಿ.ವಿದ್ಯಾ ಗಣೇಶ್, ಪ್ರಸಾದ್ ಚಾಮುಲ್ ನಿರ್ದೇಶಕ ಎಚ್.ಎಸ್. ನಂಜುಂಡಪ್ರಸಾದ್, ರೂಪ ನಂಜುಂಡಪ್ರಸಾದ್, ಎಚ್.ಎಸ್.ಪ್ರೇಮ, ಡಾ.ಚಂದ್ರಚೂಡ



ಹಾಗೂ ಕುಟುಂಬದ ಸದಸ್ಯರು ಪೂಜೆ ಸಲ್ಲಿಸಿದರು. ದೇವನೂರು ಮಠದ ಮಹಾಂತೇಶ್ ಸ್ವಾಮಿ ಗಳು ಪೂಜಾ ಕೈಂಕಾರ್ಯದ ನೇತೃತ್ವ ವಹಿಸಿದರು

### ನಾಟಕ ಪ್ರದರ್ಶನ

ಮಾಜಿ ಸಚಿವ ದಿ. ಎಚ್.ಎಸ್.ಮಹದೇವ ಪ್ರಸಾದ್ ಅವರ ಪುಣ್ಯಸ್ಮರಣೆ ಪ್ರಯುಕ್ತ ಜನವರಿ 2ರ ಶುಕ್ರವಾರ ರಾತ್ರಿ ಹಾಲಹಳ್ಳಿ ಗ್ರಾಮದಲ್ಲಿ ಪ್ರಭುಲಿಂಗ ಲೀಲೆ ನಾಟಕ ಪ್ರದರ್ಶನ ನಡೆಯಿತು. ಶಾಸಕ ಗಣೇಶ್ ಪ್ರಸಾದ್ ಮಾಜಿ ಸಚಿವೆ ಗೀತಾ ಮಹದೇವಸ್ವಾಮಿ ಸೇರಿದಂತೆ ಹಲವು ಮಂದಿ ಕಾಂಗ್ರೆಸ್ ಮುಖಂಡರು ಹಾಗೂ ಕಲಾ ಪ್ರೇಕ್ಷಕರು ನಾಟಕ ವೀಕ್ಷಿಸಿದರು.

### ಪ್ರಸಾದ ವಿನಿಯೋಗ

ಎಚ್.ಎಸ್.ಮಹದೇವಪ್ರಸಾದ್ 9ನೇ ವರ್ಷದ ಪುಣ್ಯಾರಾಧನೆಗೆ ಆಗಮಿಸಿದ ಜಿಲ್ಲೆ ಹಾಗೂ ತಾಲೂಕಿನ ಸಾವಿರಾರು ಮಂದಿ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರಿಗೆ ಪ್ರಸಾದ ವಿನಿಯೋಗ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

### ಪ್ರಮುಖರು ಭಾಗಿ

ಮುಖಂಡರಾದ ಹಂಗಳ ನಂಜಪ್ಪ, ಮಾಜಿ ಲೋಕಸಭೆ ಸದಸ್ಯ ಏ ಸಿದ್ದರಾಜು ಜಿಪಂ ಮಾಜಿ ಉಪಾಧ್ಯಕ್ಷ ಕೆ.ಎಸ್.ಮಹೇಶ್, ಸದಸ್ಯರಾದ ಕೆರಹಳ್ಳಿ ನವೀನ್. ಪಿ ರಾಜಶೇಖರ್. ಹಿರಿಯ ಮುಖಂಡರು ಹಾಗೂ ಅಭಿಮಾನಿ ಬಳಗ ಸೇರಿದಂತೆ ಸಾವಿರಾರು ಮಂದಿ ಕಾರ್ಯಕರ್ತರು ದಿ. ಮಹದೇವಪ್ರಸಾದ್ ಸಮಾಧಿಗೆ ತೆರಳಿ ನಮನ ಸಲ್ಲಿಸಿದರು.

# ರೋಟರಿಯಿಂದ ಆರೋಗ್ಯ ತಪಾಸಣಾ ಶಿಬಿರ ಅನೀಮಿಯಾ ತಡೆಗಟ್ಟುವ ಕಾರ್ಯಕ್ರಮ



ಚಾಮರಾಜನಗರ: ರೋಟರಿ ಸಂಸ್ಥೆ, ಚೈತನ್ಯ ನಟ್ ವರ್ಕ್ ವತಿಯಿಂದ ಆರೋಗ್ಯ ತಪಾಸಣಾ ಶಿಬಿರ, ಅನೀಮಿಯಾ ತಡೆಗಟ್ಟುವ ಕಾರ್ಯ ಕ್ರಮ ನಡೆಯಿತು.

ನಗರದ ರೋಟರಿ ಭವನದಲ್ಲಿ ನಡೆದ ಕಾರ್ಯಕ್ರಮಕ್ಕೆ ರೋಟರಿ ಸಂಸ್ಥೆ ಅಧ್ಯಕ್ಷ ಕಾಗಲವಾಡಿ ಚಂದ್ರು ಅನೀಮಿಯಾ ಪರೀಕ್ಷೆ ಮಾಡಿಸಿಕೊಳ್ಳುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು ಬಳಿಕ ಮಾತನಾಡಿ, ರೋಟರಿ ಸಂಸ್ಥೆ, ಚೈತನ್ಯ ನಟ್ ವರ್ಕ್ ವತಿಯಿಂದ ಅನೀಮಿಯಾ ತಡೆಗಟ್ಟುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅನೀಮಿಯಾ ಇರುವವರಿಗೆ ಮಾತ್ರೆ, ಟಾನಿಕ್ ವಿತರಿಸಲಾಗುತ್ತದೆ. ಸಾರ್ವಜನಿಕರು ಇಂತಹ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು ರಕ್ತಹೀನತೆ ಮುಕ್ತ ಭಾರತಕ್ಕಾಗಿ ಎಲ್ಲರೂ ಪಣತೊಡಬೇಕು ಎಂದರು.ಈ ಸಂದರ್ಭದಲ್ಲಿ ರೋಟರಿ ಸಂಸ್ಥಾಪಕ ಸದಸ್ಯ ಜಿ.ಆರ್.ಅಶ್ವಥ್ ನಾರಾಯಣ, ಮಾಜಿ ಅಧ್ಯಕ್ಷ ನಾಗರಾಜು, ಚಂದ್ರಪ್ರಭ ಜೈನ್, ನಾರಾಯಣ್, ಜಿ.ಅಂಕಶೆಟ್ಟಿ ಇದ್ದರು.

# ಗುಣಮಟ್ಟದ ಹಾಲು ಶೇಖರಣೆಗೆ ಒತ್ತು ನೀಡಿ

ಚಾಮರಾಜನಗರ, ತಳ ಮಟ್ಟದಲ್ಲಿ ಹಾಲು ಸಂಗ್ರಹಿ ಸುವ ಸಂಘಗಳು ಗುಣಮಟ್ಟಕ್ಕೆ ಹೆಚ್ಚಿನ ಒತ್ತು ನೀಡುವ ಮೂಲಕ ರೈತರ ಸಂಸ್ಥೆಯಾಗಿರುವ ಚಾಮುಲ್ ಪ್ರಗತಿಗೆ ಶ್ರಮಿಸಬೇಕು ಎಂದು ಚಾಮುಲ್ ಹಿರಿಯ ನಿರ್ದೇಶಕ ಎಚ್.ಎಸ್. ಬಸವರಾಜು ತಿಳಿಸಿದರು.

ನಗರದ ರಾಮಸಮುದ್ರ ಬಳಿ ಯ ಚಾಮುಲ್ ಉಪ ಕೇಂದ್ರದಲ್ಲಿ ಜಿಲ್ಲಾ ಹಾಲು ಒಕ್ಕೂಟ ಹೊರ ತಂದಿರುವ 2026ರ ನೂತನ ದಿನದರ್ಶಿಕೆಯನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಜಿಲ್ಲೆಯ ಅಭಿವೃದ್ಧಿಯಲ್ಲಿ ತನ್ನದೇ ಅದ ಸೇವೆ ಸಲ್ಲಿಸುತ್ತಿರುವ ಹಾಲು ಒಕ್ಕೂಟವು ಜಿಲ್ಲೆಯ ಹಿರಿಮೆಂ ಬಾಗಿದೆ. ಚಾಮುಲ್ ಜಿಲ್ಲೆಯ ರೈತರ ಜೀವನಾಡಿ, ಕೃಷಿಯ ಜೊತೆಗೆ ಹೈನುಗಾರಿಕೆಯನ್ನು ಹೆಚ್ಚು ಅವಲಂ ಬಿಸಿದ್ದಾರೆ. ಇಂಥ ರೈತರ ಅರ್ಥಿಕ ಪ್ರಗತಿಯಲ್ಲಿ ನಮ್ಮ ಚಾಮುಲ್ ಸಹಕಾರ ನೀಡುತ್ತಿದೆ. ಹೀಗಾಗಿ ನಂದಿನಿ ಹಾಲು ಹಾಗೂ ನಂದಿನ ಉತ್ಪನ್ನಗಳನ್ನು ಬಳಸಬೇ ಕೆಂದು ಬಸವರಾಜು ತಿಳಿಸಿದರು.

ಮತ್ತೋವ ನಿರ್ದೇಶಕ ಸದಾಶಿವಮೂರ್ತಿ ಮಾತನಾಡಿ, ಸಹಕಾರ ಸಂಘದ ಅಭಿವೃದ್ಧಿಯಲ್ಲಿ ಡೇರಿಯ ನೌಕರರ ಪಾತ್ರ ಹೆಚ್ಚಿನದದ್ದಾಗಿದೆ. ಪ್ರತಿ ದಿನ ಬೆಳಗ್ಗೆ ಹಾಗು ಸಾಯಂಕಾಲ ಗುಣಮಟ್ಟದ ಹಾಲು ಸಂಗ್ರಹಿಸಿ ಘಟಕಕ್ಕೆ ಕಳುಹಿಸುವ ಮೂಲಕ ತಮ್ಮದೇ ಅದ ಕೊಡುಗೆಯನ್ನು ನೀಡುತ್ತಿದ್ದಾರೆ. ನೂತನ ವರ್ಷವು ತಮ್ಮೆಲ್ಲರಿಗೂ ಒಳ್ಳೆಯದನ್ನು ಮಾಡಲಿ. 2026ನೇ ವರ್ಷ ತಮ್ಮ ಬಾಳಿನಲ್ಲಿ ನವೋಲ್ಲಾಸವನ್ನು ತರಲಿ ಎಂದು ಆಶಿಸಿದರು. ಬಳಿಕ ಡೇರಿ ಎಲ್ಲಾ ನೌಕ ರರಿಗೂ ಚಾಮುಲ್‌ನ ನೂತನ ವರ್ಷದ ಕ್ಯಾಲೆಂಡರ್ ಅನ್ನು ವಿತರಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಚಾಮುಲ್ ಉಪ ವ್ಯವಸ್ಥಾಪಕ ಡಾ. ಅಮರ್, ಮಾರ್ಗ ವಿಸ್ತಾರಣಾಧಿಕಾರಿ ಶ್ಯಾಮಸುಂದರ್, ತಾಲೂ ಕಿನ ಮಾರ್ಗ ವಿಸ್ತಾರಣಾಧಿಕಾರಿಗಳು, ಉಪಸ್ಥಿತರಿದ್ದರು. ತಾಲೂಕಿನ ಹಾಲು ಉತ್ಪಾದರಕ ಸಹಕಾರ ಸಂಘಗಳ ನೌಕರರು ಇದ್ದರು.



ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಆದಿವಾಸಿಗಳ ಪ್ರತಿಭಟನೆಗೆ ಬ್ರೇಕ್

## ವಿವಿಧ ಬೇಡಿಕೆ ಈಡೇರಿಕೆಗಳಿಗೆ ಒತ್ತಾಯ । ಅಪರ ಜಿಲ್ಲಾಧಿಕಾರಿ ಶಿವರಾಜು ಭೇಟಿ

ಎಚ್.ಡಿ.ಕೋಟೆ: ಅರಣ್ಯ ಹಕ್ಕು ಕಾಯ್ದೆ 2006 ಪ್ರಕಾರ ಅರಣ್ಯ ಹಕ್ಕು ಪತ್ರ ಶೀಘ್ರ ವಿತರಣೆ, ಸಫಾರಿ ಶಾಶ್ವತವಾಗಿ ಬಂದ್ ಮಾಡುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗಳಿಗೆ ಒತ್ತಾಯಿಸಿ ನಾಗರಹೊಳೆ ಆದಿವಾಸಿ ಜಮ್ಮ ಪಾಳೆ ಹಕ್ಕು ಸ್ಥಾಪನಾ ಸಮಿತಿ ಹಾಗೂ ಗ್ರಾಮಸಭೆಗಳ ಒಕ್ಕೂಟದಿಂದ ಅರಣ್ಯವಾಸಿಗಳು ನಡೆಸುತ್ತಿದ್ದ ಪಾದಯಾತ್ರೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಅಪರ ಜಿಲ್ಲಾಧಿಕಾರಿ ಶಿವರಾಜ್ ಅವರು ಸ್ಥಳಕ್ಕೆ ಭೇಟಿ ನೀಡಿ ಬೇಡಿಕೆ ಈಡೇರಿಸುವ ಭರವಸೆ ನೀಡಿರುವ ಹಿನ್ನೆಲೆ ಒಂದು ವಾರ ಗಡುವು ಕೊಟ್ಟು ತಾಲೂಕಿನ ಉದ್ಬೂರು ಗೇಟ್ ಬಳಿ ನಡೆಸುತ್ತಿದ್ದ ಪ್ರತಿಭಟನೆಯನ್ನು ತಾತ್ಕಾಲಿಕವಾಗಿ ಹಿಂಪಡೆಯಲಾಗಿದೆ.

ದಿ.21 ರಂದು ಮಡಿಕೇರಿ ಜಿಲ್ಲೆಯ ತಿತಿಮತಿಯ ಆಯಿರಾಸುಳಿ ಹಾಡಿಯಿಂದ ಆರಂಭವಾದ ಪಾದಯಾತ್ರೆ ಶುಕ್ರವಾರ ತಾಲೂಕಿನ ಕೆರೆ ಹಾಡಿ ಸಮೀಪದ ಉದ್ಬೂರು ಗೇಟ್ ಸಮೀಪವಿರುವ ಹಳ್ಳಿಕೆರೆ ಹಾಡಿಗೆ ಬಂದು ತಲುಪಿತ್ತು. ಸಾವಿರಾರು ಜನರು ಜಮಾಯಿಸಿದರೂ ಅರಣ್ಯಾಧಿಕಾರಿಗಳು ಸ್ಥಳಕ್ಕೆ ಬರಲಿಲ್ಲ. ಇದರಿಂದ ಸಿಟ್ಟಿಗೆದ್ದ ಪ್ರತಿಭಟನಾಕಾರರು ಉದ್ಬೂರು ಗೇಟ್ ನಲ್ಲಿ ಪ್ರತಿಭಟನೆ ತೀವ್ರಗೊಳಿಸಿ, ಮೈಸೂರು ಮತ್ತು ಮಡಿಕೇರಿ ಜಿಲ್ಲಾಧಿಕಾರಿ ಹಾಗು ಸರ್ಕಾರದ ಮುಖ್ಯ ಕಾರ್ಯದರ್ಶಿ ಸ್ಥಳಕ್ಕೆ ಬರುವವರೆಗೂ ಇಲ್ಲಿಂದ ಕದಲುವುದಿಲ್ಲ ಎಂದು ಪಟ್ಟು ಹಿಡಿದು ಕುಳಿತರು.

ಇವರ ಪ್ರತಿಭಟನೆಗೆ ಭೂಮಿಪುತ್ರ ಚಂದನ್ ಗೌಡ ನೇತೃತ್ವದ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘ ಸಾಥ್ ನೀಡಿತ್ತು. ಪ್ರತಿಭಟನೆಯ ಗಂಭೀರತೆ ಅರಿತು ಸ್ಥಳಕ್ಕೆ ಬಂದ ಅಪರ ಜಿಲ್ಲಾಧಿಕಾರಿ ಶಿವರಾಜ್ ಆದಿವಾಸಿಗಳ ಮನವೊಲಿಕೆಗೆ ಮುಂದಾದರು. ಮೂರು ದಿನದಲ್ಲಿ ನಿಮ್ಮ 8 ಬೇಡಿಕೆಗಳನ್ನು ಈಡೇರಿಸುವುದಾಗಿ ಭರವಸೆ ನೀಡಿದರು. ಆದರೆ, ಲಿಖಿತ ಆದೇಶವರೆಗೂ ಪ್ರತಿಭಟನೆ ಹಿಂಪಡೆಯುವುದಿಲ್ಲ ಎಂದು ಪಟ್ಟು ಹಿಡಿದು ಕುಳಿತರು. ಬಳಿಕ ಭೂಮಿಪುತ್ರ ಚಂದನ್ ಗೌಡ ಅವರು, ಮೂರು ದಿನಗಳ ಕಾಲಾವಕಾಶ ಕೊಟ್ಟು ನೋಡೋಣ, ಅಷ್ಟರೊಳಗೆ ಬೇಡಿಕೆ ಈಡೇರಿಸಬೇಕು, ಇಲ್ಲವಾದಲ್ಲಿ ಸರ್ಕಾರವೇ ಹಾಡಿಗೆ ಬರುವಂತೆ ಉಗ್ರ ಹೋರಾಟ ಮಾಡೋಣ ಎಂದು ತಿಳಿಸಿದ ಬಳಿಕ ಪ್ರತಿಭಟನೆ ಹಿಂಪಡೆದರು. ಗ್ರಾಮಸಭೆ ಒಕ್ಕೂಟದ ಸದಸ್ಯ ಶಿವು ಮಾತನಾಡಿ, ಒಂದು ವಾರದೊಳಗೆ ನಮ್ಮ ಬೇಡಿಕೆ ಈಡೇರಿಸದಿದ್ದಲ್ಲಿ ಉದ್ಬೂರು ಚೆಕ್ ಪೋಸ್ಟ್ ಮತ್ತು ಬಾವಲಿ ಚೆಕ್ ಪೋಸ್ಟ್ ಬಂದ್ ಮಾಡಿ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದರು.

ನಾಗರಹೊಳೆ ಆದಿವಾಸಿ ಜಮ್ಮ ಪಾಳೆ ಹಕ್ಕು ಸ್ಥಾಪನ ಸಮಿತಿ ಗ್ರಾಮಸಭೆಗಳ ಒಕ್ಕೂಟದ ಮುಖ್ಯಸ್ಥ ತಿಮ್ಮ ಜೆ. ಕೆ, ಕಾಕನಕೋಟೆ ಕಾಡಿನ ಬಳ್ಳೆ ಹಾಡಿಯ ಮುಖಂಡರಾದ ರಮೇಶ್ ಬೊಮ್ಮಾಡು ಸೋಮಯ್ಯ, ಸಂಚಾಲಕರಾದ ರಾಮಕೃಷ್ಣ ಜೆ ಎಸ್, ಬುಡಕಟ್ಟು ಕೃಷಿಕರ ಸಂಘದ ಹಿರಿಯ ಮುಖಂಡ ಕೆಂಚಯ್ಯ, ಗ್ರಾಮಸಭೆ ಒಕ್ಕೂಟ ಕೊಡಗು ಜಿಲ್ಲೆಯ ಸಂಚಾಲಕ ಪಿ.ಸಿರಾಮು, ಬೊಂಬುಕಾಡು ಹಾಡಿಯ ರಮೇಶ್, ಜಂಗಾಲಾಡಿ ಮಾದ, ಕಾರೇಕಂಡಿ ಹಾಡಿ ರವಿ, ಮಜ್ಜಿಗೆಹಳ್ಳ ಫಾರಂ ಶಿವಪ್ಪ, ಮಜ್ಜಿಗೆ ಹಳ್ಳ ಹಾಡಿ ಶಾಂತಮ್ಮ, ತಟ್ಟೆಕೆರೆ ಹಾಡಿಯ ರಾಮು, ಗೋಣಿಗದ್ದೆ ಹಾಡಿಯ ಪ್ರತಾಪ್ ಬಾಳೆಕೋವು ಹಾಡಿಯ ರವಿ ಬಿ. ಕೆ, ರಾಕೇಶ್ ಜೆ. ಆರ್, ಬಾವಲಿ ಹಾಡಿಯ ಸುರೇಶ್, ಮೂಲೆಯೂರು ಹಾಡಿಯ ಜಯ, ಮಾನಿಮೂಲೆ ಹಾಡಿ ಯಜಮಾನರಾದ ರಾಜು, ಆನೆಮಾಳ ಹಾಡಿ ಕಾರ್ಯದರ್ಶಿ ರಾಮು , ಕರಿಯಪ್ಪ , ಗೋಳೂರು ಹಾಡಿಯ ಅಧ್ಯಕ್ಷರಾದ ಕಾಳ ಕಾರ್ಯದರ್ಶಿ ಸಿಂಧು, ಯಜಮಾನರಾದ ರಾಜು, ಮಾರ ಸೇರಿದಂತೆ ವಿವಿಧ ಹಾಡಿಗಳ ಜನರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



## ಅರಣ್ಯವಾಸಿಗಳ ಅಳಲು ಮತ್ತು ಬೇಡಿಕೆಗಳು

**ಪ್ರತಿಭಟನಾ ಸ್ಥಳಕ್ಕೆ ಬಂದ ಅಪರ ಜಿಲ್ಲಾಧಿಕಾರಿ ಶಿವರಾಜ್ ಗೆ ಅರಣ್ಯವಾಸಿಗಳು ಪ್ರಶ್ನೆಗಳ ಸುರಿಮಳೆಗೈದರು. ಜೊತೆಗೆ, ಅರಣ್ಯ ಸಂರಕ್ಷಣೆ ಹೆಸರಿನಲ್ಲಿ ತಮ್ಮ ಮೇಲೆ ಅರಣ್ಯಾಧಿಕಾರಿಗಳು ದೌರ್ಜನ್ಯ ನಡೆಸುತ್ತಿದ್ದಾರೆ ಎಂದು ಅಳಲು ತೋಡಿಕೊಂಡರು. ಅರಣ್ಯ ಹಕ್ಕು ಪತ್ರ ವಿತರಣೆ ಮಾಡಲು ಅವಕಾಶ ನೀಡುತ್ತಿಲ್ಲ. ನಮ್ಮ ಅರಣ್ಯ ಹಕ್ಕುಗಳನ್ನು ಏಕಪಕ್ಷೀಯವಾಗಿ ತಿರಸ್ಕರಿಸಲಾಗುತ್ತಿದೆ, ಪುನರ್ ವಸತಿಗಾಗಿ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಪ್ಯಾಕೇಜ್ ಒಪ್ಪಿಕೊಳ್ಳುವಂತೆ ಬಲವಂತ ಮಾಡಲಾಗುತ್ತಿದೆ. ಪ್ರವಾಸೋದ್ಯಮದ ಹೆಸರಿನಲ್ಲಿ ಸಫಾರಿ ನಡೆಸಲು ನಮ್ಮ ಸಮುದಾಯದ ಗಡಿಗಳನ್ನು ಅಕ್ರಮವಾಗಿ ಬಳಸಿಕೊಳ್ಳಲಾಗುತ್ತಿದೆ , ಹುಲಿ ಸಂರಕ್ಷಿತ ಅರಣ್ಯ ಪ್ರದೇಶವೆಂದು ಘೋಷಿಸಿದಾಗಲೂ, ರಾಷ್ಟ್ರೀಯ ಉದ್ಯಾನವನ ಎಂದು ಘೋಷಿಸಿದಾಗಲೂ ನಮ್ಮ ಒಪ್ಪಿಗೆ ಪಡೆದಿಲ್ಲ. ಆದಿವಾಸಿ ಗಿರಿಜನರ ಅರಣ್ಯ ಭೂಮಿ ಹಕ್ಕು, ಸಾಮೂಹಿಕ ಅರಣ್ಯ ಹಕ್ಕು, ನೆಲಸುಗಳ ಮೇಲಿನ ಹಕ್ಕುಗಳನ್ನು ಮಾನ್ಯ ಮಾಡಿ ಹಕ್ಕುಪತ್ರ ನೀಡಬೇಕು ಎಂದು ಒತ್ತಾಯಿಸಿದರು.**

## ನಾಗರಹೊಳೆಯಲ್ಲಿ ಕದ್ದುಮುಚ್ಚಿ ಸಫಾರಿ

**ಹುಲಿ ಉಪಟಳ ಬಳಿಕ ಸಫಾರಿಯನ್ನು ಬಂದ್ ಮಾಡಲಾಗಿದೆ. ಆದರೆ ನಾಗರಹೊಳೆಯಲ್ಲಿ ಈಗಲೂ ಸಫಾರಿ ನಡೆಯುತ್ತಿದೆ. ಅರಣ್ಯ ಅಧಿಕಾರಿಗಳೇ ಪ್ರವಾಸಿಗರನ್ನು ಸಫಾರಿ ವಾಹನದಲ್ಲಿ ಕೂರಿಸಿ ಕೊಂಡು, ಅರಣ್ಯ ಪ್ರದೇಶಕ್ಕೆ ಕರೆದೊಯ್ದು ವನ್ಯಜೀವಿಗಳ ದರ್ಶನ ಮಾಡಿಸುತ್ತಿದ್ದಾರೆ. ನಾವು ಕಣ್ಣಾರೆ ನೋಡಿದ್ದೇವೆ, ನಮ್ಮ ಬಳಿ ವಿಡಿಯೋ ಕೂಡ ಇದೆ ಎಂದು ಅಪರ ಜಿಲ್ಲಾಧಿಕಾರಿ ಶಿವರಾಜ್ ಗಮನಕ್ಕೆ ತಂದರು. ಆದಿವಾಸಿಗಳ ಸಮಸ್ಯೆ ಮತ್ತು ಬೇಡಿಕೆಗಳನ್ನು ಸಮಾಧಾನವಾಗಿ ಆಲಿಸಿದ ಶಿವರಾಜ್ , ಜಿಲ್ಲಾಧಿಕಾರಿ ಬಳಿ ಚರ್ಚಿಸಿ, ಇನ್ನು ಮೂರು ದಿನದಲ್ಲಿ ಬೇಡಿಕೆ ಈಡೇರಿಸುವುದಾಗಿ ಭರವಸೆ ನೀಡಿದರು.**



# ಪ್ರಜ್ಞಾವಂತಿಕೆ ಬಿತ್ತದ್ದಕ್ಕೆ ಮಾರ್ಯಾದೆ ಹತ್ಯೆ ಮುಂದುವರಿಕೆ: ಎಂ.ಶಿವಪ್ರಸಾದ್



ಮೈಸೂರು: ಪ್ರಜ್ಞಾವಂತರು ತಮ್ಮ ಪ್ರಜ್ಞಾವಂತಿಕೆಯನ್ನು ಸಮಾಜದಲ್ಲಿ ಬೀತ್ತದೆ ಇರುವುದರಿಂದ ಸಮಾಜದಲ್ಲಿ ಜಾತಿ ನಿಂದನೆ, ಮರ್ಯಾದೆ ಹತ್ಯೆಯಂತಹ ಅನಿಷ್ಟ ಪದ್ಧತಿಗಳು ಮುಂದುವರೆದುಕೊಂಡು ಬಂದಿದೆ ಎಂದು ದೇವರತ್ನ ಫೌಂಡೇಷನ್ ಸಂಸ್ಥಾಪಕ ಹಾಗೂ ವಕೀಲರೂ ಆದ ಎಂ.ಶಿವಪ್ರಸಾದ್ ಹೇಳಿದರು.

ನಗರದ ಮಾನಸ ಗಂಗೋತ್ರಿಯ ಡಾ.ಬಾಬೂ ಜಗಜೀವನರಾಮ್ ಅಧ್ಯಯನ ಸಂಶೋಧನ ಮತ್ತು ವಿಸ್ತರಣ ಕೇಂದ್ರದ ವತಿಯಿಂದ ಸಂಸ್ಥೆಯ ಸಭಾಂಗಣದಲ್ಲಿ ಶನಿವಾರ ನಡೆದ ಭಾರತದ ಸಂವಿಧಾನ ಮತ್ತು ಸಾಮಾಜಿಕ ನ್ಯಾಯ ಎಂಬ ವಿಷಯ ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು. ವಿದ್ಯಾವಂತರುಗಳೇ ಜಾತಿ ವ್ಯವಸ್ಥೆಯಲ್ಲಿ ನೇರವಾಗಿ ತೊಡಗಿಸಿಕೊಳ್ಳುವುದರಿಂದಲೂ ಇಂತಹ ತಲೆ ತಗ್ಗಿಸುವ ಘಟನೆಗಳು ನಡೆಯಲು ಕಾರಣ. ಪ್ರಬುದ್ಧ ಚಿಂತಕರು, ಬರಹಗಾರರು, ಹೋರಾಟಗಾರರು ಇಂತಹ ಘಟನೆಗಳ ವಿರುದ್ಧ ಪದ್ಧತಿಗಳ ವಿರುದ್ಧ ಗಮನಹರಿಸದೇ ಇರುವುದು ಇದಕ್ಕೆ ಬಹುಮುಖ್ಯ ಕಾರಣ ಎಂದರು.

ಸಾಮಾಜಿಕ ನ್ಯಾಯ ಎಂದರೆ ಹೊರಗಿನ ಪ್ರಪಂಚದ ವಿಷಯವಲ್ಲ. ನಮ್ಮ ಅಂತರ್ಯದಲ್ಲಿರುವ ಸಮಾನತೆಯ ಮನಸ್ಥಿತಿ. ಈ ಮನಸ್ಥಿತಿಯನ್ನು ಅರ್ಥ ಮಾಡಿಕೊಳ್ಳದೆ ಹೋದರೆ ಹಾಗೂ ಈ ಮನಸ್ಥಿತಿಯನ್ನು ಸಮಾಜದಲ್ಲಿ ಜಾರಿ ಮಾಡದೇ ಹೋದರೆ ಸಾಮಾಜಿಕ ನ್ಯಾಯದ ಅನುಷ್ಠಾನದ ತೊಡಕಿನಲ್ಲಿ ನಾವು ನೇರವಾಗಿ ಹೊಣೆಗಾರರಾಗುತ್ತೇವೆ ಎಂದು ತಿಳಿಸಿದರು.

12ನೇ ಶತಮಾನದಲ್ಲಿ ಅನುಭವ ಮಂಟಪದಲ್ಲಿ ಸಮಾಜಿಕ ನ್ಯಾಯವನ್ನುನೀಡುತ್ತಿದ್ದರು. ತಮ್ಮ ಅನುಭವ ಮಂಟಪದಲ್ಲಿ ತಳ ಸಮುದಾಯವರಿಗೆಲ್ಲಾ ಅವಕಾಶ ನೀಡುತ್ತಿದ್ದರು. ಸಾಮಾಜಿಕ ನ್ಯಾಯದ ಅನುಭವ ಮಂಟಪದಲ್ಲಿ ಹುಟ್ಟಿದ ಈ ನಾಡು ಇಂದು ಜಾತಿ ಹೆಸರಿನಲ್ಲಿ ಕೊಲೆ, ಹಲ್ಲೆ, ನಡೆಯುತ್ತಿದೆ ಎಂದು ವಿಷಾಧಿಸಿದರು.

ಪ್ರಸ್ತುತ ದಿನದಲ್ಲಿ ಸಂವಿಧಾನ ಮತ್ತು ಸಾಮಾಜಿಕ ನ್ಯಾಯದ ಅರಿವು ಮೂಡಿಸಲು ಇಂತಹ ಅನೇಕ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಮಾಡಬೇಕು. ಆಗ ಮಾತ್ರ ಸಮಾಜದಲ್ಲಿ ಶ್ರೇಯೋಭಿವೃದ್ಧಿಯನ್ನು ಮತ್ತು ಸಾಮಾಜಿಕ ನ್ಯಾಯವನ್ನು ಕಾಣಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ನಾವು ಸಂವಿಧಾನವನ್ನು ಓದಿಕೊಳ್ಳಲಿಲ್ಲವೆಂದರೆ ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡಲು ಅರ್ಹತೆ ಮತ್ತು ಯೋಗ್ಯತೆ ಇರುವುದಿಲ್ಲ. ಭಾರತ ಸಂವಿಧಾನದ 14 ರಿಂದ 18ನೇ ವಿಧಿಗಳು ಸಾಮಾಜಿಕ ನ್ಯಾಯದ ಸ್ಪಷ್ಟತೆಯನ್ನು ನೀಡುತ್ತದೆ.

ಕಾರ್ಯಕ್ರಮದಲ್ಲಿ ದೇವರತ್ನ ಫೌಂಡೇಶನ್ ಸಂಸ್ಥಾಪಕ ಹಾಗೂ ವಕೀಲರೂ ಆದ ಎಂ.ಶಿವ ಪ್ರಸಾದ್, ಅಲಹಬಾದ್ ವಿಶ್ವವಿದ್ಯಾಲಯದ ಜಿ.ಬಿ.ಪಂತ್ ಸಮಾಜ ವಿಜ್ಞಾನ ಸಂಸ್ಥೆಯ ಡಾ. ಚಂದ್ರಯ್ಯ ಗೋಪಾನಿ, ಬಾಬೂ ಜಗಜೀವನರಾಮ್ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಕೆ.ಸದಾಶಿವ, ಸ್ಕೂಲ್ ಆಫ್ ಲಾ ಉಪನ್ಯಾಸಕಿ ಎ.ಅನನ್ಯ, ಜೆ.ಎಸ್‌ಎಸ್ ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ.ಎ.ಟಿ.ಜಗದೀಶ್, ಎಸ್.ನರೇಂದ್ರ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಎಸ್.ಎಸ್.ಜಾಹ್ನವಿ ಹಾಜರಿದ್ದರು.

# ಅಹಿಂದ ಮತಬ್ಯಾಂಕ್ ಅಲ್ಲವೆಂದು ಜಾಗೃತಗೊಳಿಸೋಣ

ಮೈಸೂರು: ಅಹಿಂದ ಎಂದರೆ ಆತ್ಮಸಾಕ್ಷಿ. ಇವತ್ತು ಅಹಿಂದ ಇದ್ದರೆ ಮತ ಬ್ಯಾಂಕ್ ಅಲ್ಲ ಇದು ಆದರ್ಶ ತತ್ವವಾಗಿದ್ದು ಇವೆಲ್ಲವನ್ನು ಜಾಗೃತಗೊಳಿಸಬೇಕು ಎಂದು ಕಾಮ್ರೆಡ್ ಶಿವಸುಂದರ್ ಹೇಳಿದರು

ನಗರದ ಜೆ ಎಲ್ ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಅಹಿಂದ ಚಳುವಳಿ ವತಿಯಿಂದ ಶನಿವಾರ ಅಯೋಜಿಸಿದ್ದ ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು ಮತ್ತು ದಲಿತ ಸಮುದಾಯದ ಜಾಗೃತಿ ಸಭೆ ಕಾರ್ಯಕ್ರಮದಲ್ಲಿ ಪುಷ್ಪಾರ್ಚನೆ ಮಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು ನಂತರ ಮಾತನಾಡಿದ ಅವರು ಎಸ್ ಐ ಆರ್ ಎಂದರೆ ಕೇವಲ ಮತಪಟ್ಟಿಯ ತೀವ್ರ ಪರಿಷ್ಕರಣೆ ಮಾತ್ರವಲ್ಲ ಅಷ್ಟೆ ಆಗಿದ್ದರೆ ಇದಕ್ಕೆ ಯಾರ ವಿರೋಧವೂ ಇರುತ್ತಿರಲಿಲ್ಲ. ಸರ್ಕಾರವೇ ಯಾರು ಮತ ಹಾಕಬೇಕು ಎನ್ನುವುದನ್ನ ಆಯ್ಕೆ ಮಾಡುವ ವಿಕೃತ ಪ್ಯಾಸಿಸ್ಟ್ ಪ್ರತಿಕ್ರಿಯೆ ಇದೆ ಎಂದರು

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಹೇಳಿದಂತೆ ದೇಶ ಆಳುವ ರಾಜ ಮತಪೆಟ್ಟಿಗೆಯಲ್ಲಿ ಹುಟ್ಟಬೇಕು ಎನ್ನುವುದು ಅವರ ಆಶಯವಾಗಿತ್ತು. ಅದಕ್ಕಾಗಿ ಎಲ್ಲ ನಾಗರೀಕರಿಗೆ ಸಂವಿಧಾನವು ಮತದಾರರಿಗೆ ಮತ



ಹಾಕುವ ಹಕ್ಕನ್ನು ನೀಡಿರುವುದನ್ನು ನಾವೆಲ್ಲ ಅರಿಯಬೇಕು. ಆರ್ಟಿಕಲ್ 3 ರಿಂದ 12 ರವರೆಗೆ ಹೇಳುವಂತೆ ಈ ದೇಶದಲ್ಲಿ ಹುಟ್ಟಿದ ಎಲ್ಲರೂ ನಾಗರೀಕರು.ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ನಿರ್ಲಕ್ಷ್ಯ ಒಳಪಟ್ಟ ಜನರಿಗೆ ಸಂವಿಧಾನದಲ್ಲಿ ಮತ ಹಾಕುವುದಕ್ಕೆ ಯಾವ ವಿರೋಧವು ಇಲ್ಲವೆಂಬಂತೆ ದಾಖಲಿಸಲಾಗಿದೆ ಎಂದು ಹೇಳಿದರು. ವಿಧಾನ ಸಭೆ ಮಾಜಿ ಕಾರ್ಯದರ್ಶಿ ಎಸ್ ಮೂರ್ತಿ ಮಾತನಾಡಿ, ದೇಶ ಮತ್ತು ರಾಜ್ಯದಲ್ಲಿ ಅಲ್ಪಸಂಖ್ಯಾತ, ಹಿಂದುಳಿದ, ಮತ್ತು ದಲಿತ ಸಮುದಾಯಗಳು ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದಿಲ್ಲ. ಈ ವರ್ಗಗಳಲ್ಲಿನ ಬಹುತೇಕರು ಬಡತನ ರೇಖೆಗಿಂತ ಕೆಳಗೆ ಶೋಷಿತ ಸಮುದಾಯವಾಗಿಯೇ ಉಳಿದಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ಸಭೆಯಲ್ಲಿ ಮಾಜಿ ಸಚಿವ ಕೋಟೆ ಎಂ.ಶಿವಣ್ಣ, ವಿಜಯ್ ಕುಮಾರಿ ಅರಸ್, ರಾಜ್ಯ ಜಂಟಿ ಕಾರ್ಯದರ್ಶಿ ವೆಂಕಟೇಶ್ ಗೌಡ, ಬಿ ಶಿವಣ್ಣ, ಎಸ್ ಪ್ರತಿಮಾ,ಮುನಿರಾಜ್, ದೇವರಾಜ್ ಪಾಳೇಗಾರ್, ಸುರೇಂದ್ರ,ತಾಜ್ ಪಾಷ ಇನ್ನಿತರರು ಉಪಸ್ಥಿತರಿದ್ದರು.

## ರಾಜ್ಯಪಾಲರಿಗೆ ಮನವಿ : ಭಂತೇ ಅಮರಜ್ಯೋತಿ

# ಜ.6 ರಂದು ಬಿಟಿ ಆಕ್ಟ್ 1949 ರದ್ದುಗೊಳಿಸಿ

ಚಾಮರಾಜನಗರ, ವಿಶ್ವಶಾಂತಿ, ಬೌದ್ಧರ ಪವಿತ್ರ ಸ್ಥಳವಾದ ಬೋಧಗಯಾ ಮಹಾಬೋಧಿ ಮಹಾವಿಹಾರ ಬಿ.ಟಿ.ಆಕ್ಟ್ 1949 ರದ್ದುಗೊಳಿಸಿ,ಮಹಾವಿಹಾರದ ಆಡಳಿತ ಸಂಪೂರ್ಣ ಬೌದ್ಧರಿಗೆ ನೀಡುವಂತೆ ಒತ್ತಾಯಿಸಿ ಫೆ.12 ರಂದು ದೆಹಲಿ ಚಲೋ,ಮೆಷನ್ಸ್ ಮಹಾ ಬೋಧಿ ಮಹಾವಿಹಾರ ಮುಕ್ತಿ ಆಂದೋಲನ ಹಮ್ಮಿಕೊಳ್ಳಲಾಗಿದೆ ಎಂದು ಭಂತೇ ಅಮರಜ್ಯೋತಿ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ನಮ್ಮ ಹೋರಾಟಕ್ಕೆ ಶ್ರೀಲಂಕಾದಿಂದ ತಂದಿರುವ ಭಗವಾನ ಬುದ್ಧರ ಪವಿತ್ರ ಅಸ್ತಿಯ ದರ್ಶನವನ್ನು ಮಾಡಿ ಬುದ್ಧವಂದನೆ ಸಲ್ಲಿಸುವ ಮುಖಾಂತರ ಮಹಾಬೋಧಿ ಮಹಾ ವಿಹಾರ ಮುಕ್ತಿ ಆಂದೋಲನಕ್ಕೆ ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಜ.6 ರಂದು ದಕ್ಷಿಣ ಭಾರತದ ಕರ್ನಾಟಕದಿಂದ ಚಾಲನೆ ನೀಡಲಾಗುವುದು. ನಂತರ ಕರ್ನಾಟಕ ರಾಜ್ಯಪಾಲರಿಗೆ ಮನವಿ ಸಲ್ಲಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಈ ಕಾರ್ಯಕ್ರಮಕ್ಕೆ ಜಿಲ್ಲೆಯಿಂದ ಬೌದ್ಧರು ಅಂಬೇಡ್ಕರ್ ಅನುಯಾಯಿಗಳು



ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶ್ವಸಿಗೊಳಿಸಿ ಕೊಡಬೇಕು ಮನವಿ ಮಾಡಿದರು.

### ನಾಳೆ ಭೀಮಾ ಕೋರೆಗಾಂವ್ ವಿಜಯೋತ್ಸವ

ಜ.4 ರಂದು 10 :30ಕ್ಕೆ ನಗರದ ಯಡಬೆಟ್ಟದಲ್ಲಿರುವ ನಳಂದ ವಿಶ್ವವಿದ್ಯಾಲ ಯದಲ್ಲಿ ಭೀಮಾ ಕೋರೆಗಾಂವ್ ವಿಜಯೋತ್ಸವ ಹಾಗೂ ಅಕ್ಷರದವ್ವ ಸಾವಿತ್ರಿ ಬಾಯಿ ಫುಲೆ ಅವರ ಜನ್ಮದಿನಾಚರಣೆ ಕಾರ್ಯಕ್ರಮ ಅಯೋಜಿಲಾಗಿದ್ದು ಈ ಕಾರ್ಯಕ್ರಮಕ್ಕೆ ಬುದ್ಧಗಯಾ ಮುಕ್ತಿ ಆಂದೋಲನ ಯೋಧನಾಗಿ ಭಂತೆ ವಿನಯಚಾರ್ಯ ಆಗಮಿಸಲಿ ದ್ದಾರೆ. ಈ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬೌದ್ಧರು,ಅಂಬೇಡ್ಕರ್ ಅನುಯಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿ ಗೊಳಿಸಿ, ಅವರ ಹೋರಾಟ ಬೆಂಬಲ ನೀಡುವಂತೆ ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಭಾರತೀಯ ಬೌದ್ಧ ಮಹಾಸಭಾದ ಜಿಲ್ಲಾಧ್ಯಕ್ಷ ಆರ್.ಬಸವರಾಜು, ತಾಲೂಕು ಅಧ್ಯಕ್ಷ ಕೃಷ್ಣಯ್ಯ, ಮಹಿಳಾ ಘಟಕ ಜಿಲ್ಲಾಧ್ಯಕ್ಷೆ ನಾಗಶಿಲ್ಪ, ಮುಖಂಡ ಸಿ.ಎಂ.ಕೃಷ್ಣಮೂರ್ತಿ, ರಮಾಬಾಯಿ ಫೌಂಡೇಶನ್ ಜಿಲ್ಲಾಧ್ಯಕ್ಷೆ ಪುಷ್ಪಾಮರಿಸ್ವಾಮಿ, ಉಪಾಸಕ ಎಂ. ಸಿದ್ದರಾಜು ಸೋಮವಾರಪೇಟೆ ಹಾಜರಿದ್ದರು.

# ಬಾಲಕಾರ್ಮಿಕ ಪದ್ಧತಿ ಒಂದು ಸಾಮಾಜಿಕ ಪಿಡುಗು: ಡಾ.ಕುಮಾರ



**ಮಂಡ್ಯ:** ಬಾಲಕಾರ್ಮಿಕ ಪದ್ಧತಿಯನ್ನು ಹೋಗಲಾಡಿಸುವುದು ಪ್ರತಿಯೊಬ್ಬ ನಾಗರೀಕರ ಜವಾಬ್ದಾರಿ ಮತ್ತು ಹೊಣೆಗಾರಿಕೆ. ಎನ್ ಫೋರ್ಸ್ ಅಧಿಕಾರಿಗಳು ತಾವು ದಿನನಿತ್ಯ ಓಡಾಡುವ ಜಾಗಗಳಲ್ಲಿ ಸೂಕ್ಷ್ಮವಾಗಿ ಪರಿಶೀಲನೆ ನಡೆಸಿ ಬಾಲಕಾರ್ಮಿಕರನ್ನು ಪತ್ತೆ ಹಚ್ಚಬೇಕು ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಅವರು ಹೇಳಿದರು.

ಶನಿವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಂ) ಕಾಯ್ದೆ.1986, ನಿಯಮಗಳು 2017 (ಕೇಂದ್ರ/ರಾಜ್ಯ)ಗಳ ಕುರಿತು ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ(ನಿಷೇಧ ಮತ್ತು ನಿಯಂತ್ರಂ) ಕಾಯ್ದೆ, 1986,ರ ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬಾಲಕಾರ್ಮಿಕ ಪದ್ಧತಿಯನ್ನು ಕೇವಲ ಅನಿಷ್ಟ ಪದ್ಧತಿ ಎಂದು ಪರಿಗಣಿಸಿದರೆ ಸಾಲದು ಸದರಿ ಪದ್ಧತಿಯನ್ನು ಹೋಗಲಾಡಿಸಲು ಸೂಕ್ತ ಕ್ರಮವನ್ನು ವಹಿಸಬೇಕು. ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡುವಲ್ಲಿ ಅಧಿಕಾರಿಗಳಷ್ಟೇ ಹೊಣೆಗಾರಿಕೆ ಸಾರ್ವಜನಿಕರದ್ದು ಆಗಿರುತ್ತದೆ. ಅಧಿಕಾರಿಗಳು ಮತ್ತು ಸಾರ್ವಜನಿಕರು ಬದ್ಧತೆ ಮತ್ತು ಪರಿಪಕ್ವತೆಯಿಂದ ಕಾರ್ಯನಿರ್ವಹಿಸಿದರೆ ಬಾಲ ಕಾರ್ಮಿಕ ಪದ್ಧತಿಯನ್ನು ಹೋಗಲಾಡಿಸಬಹುದು ಎಂದು ಹೇಳಿದರು.

ಸದರಿ ವರ್ಷ (2025) ಜಿಲ್ಲೆಯಲ್ಲಿ 35ಕ್ಕೂ ಹೆಚ್ಚು ಬಾಲ ಕಾರ್ಮಿಕರನ್ನು ರಕ್ಷಿಸಲಾಗಿದೆ ಹಾಗೂ ಎಂಟು ಪ್ರಕರಣಗಳಲ್ಲಿ ಎಫ್ ಐ ಆರ್ ದಾಖಲಿಸಲಾಗಿದೆ. ಬಾಲಕಾರ್ಮಿಕರ ಪ್ರಕರಣಗಳ ಸಂಖ್ಯೆ ಕಡಿಮೆ ಇದ್ದರೆ ಅಂತಹ ಜಿಲ್ಲೆಗಳಲ್ಲಿ ಬಾಲಕಾರ್ಮಿಕರು ಕಮ್ಮಿ ಇದ್ದಾರೆ ಎಂದು ಅರ್ಥವಲ್ಲ. ಅಧಿಕಾರಿಗಳು ಕೈಗಾರಿಕೆ ಹೋಟೆಲ್ ಹಾಗೂ ಕ್ರಷರ್ ಗಳಲ್ಲಿ ಬಾಲಕಾರ್ಮಿಕರು ಇರುವುದನ್ನು ಪರಿಶೀಲನೆ ನಡೆಸಬೇಕು ಎಂದು ಸೂಚಿಸಿದರು.

ಬಾಲಕಾರ್ಮಿಕ ಪದ್ಧತಿಯನ್ನು ಪತ್ತೆಹಚ್ಚಿಯಲ್ಲಿ ಶಿಕ್ಷಣ ಇಲಾಖೆಯ ಪಾತ್ರ ಮಹತ್ವದ್ದು

ಬಾಲಕಾರ್ಮಿಕ ಪದ್ಧತಿಯನ್ನು ಪತ್ತೆ ಹಚ್ಚುವಲ್ಲಿ ಶಿಕ್ಷಣ ಇಲಾಖೆ ಮಹತ್ವದ ಪಾತ್ರ ವಹಿಸುತ್ತದೆ ಶಾಲೆಯ ಹೆಡ್ ಮಾಸ್ಟರ್ ಗಳು ಶಾಲೆಗೆ ನಿರಂತರ ರಜೆ ಹಾಕಿರುವ ವಿದ್ಯಾರ್ಥಿಗಳು ಹಾಗೂ ಅರ್ಧಕ್ಕೆ ಶಾಲೆ ಬಿಟ್ಟ ವಿದ್ಯಾರ್ಥಿಗಳ ಪಟ್ಟಿ ತೆಗೆದುಕೊಂಡು ಅವರ ಹಿನ್ನೆಲೆಯನ್ನು ಪರಿಶೀಲನೆ ನಡೆಸಿ ಸದರಿ ಮಕ್ಕಳು ಪ್ರಸ್ತುತ ಏನು ಮಾಡುತ್ತಿದ್ದಾರೆ ಎಂದು ತಿಳಿದುಕೊಳ್ಳಬೇಕು.

ಶಾಲೆಗಳಲ್ಲಿ ಮಕ್ಕಳ ಕುರಿತಾಗಿ ಹೆಚ್ಚು ಗಮನಹರಿಸಿದರೆ ಬಾಲಕಾರ್ಮಿಕ ಪದ್ಧತಿಯನ್ನು ಸಾಧ್ಯವಾದಷ್ಟು ತಡೆಯಬಹುದು. ಅಧಿಕಾರಿಗಳು ದಾಳಿಗೆ ಹೋಗುವ ಸಂದರ್ಭದಲ್ಲಿ ಯಾರಿಗೂ ಮಾಹಿತಿ ನೀಡದೆ ಸರ್ಪ್ರೈಸ್ ವಿಸಿಟ್ ಮಾಡಬೇಕು. ಬಾಲಕಾರ್ಮಿಕ ಪದ್ಧತಿಗೆ ಒಳಗಾದ ಹಾಗೂ ಶಿಕ್ಷಣದಿಂದ ವಂಚಿತರಾದ ಮಕ್ಕಳು ಸಮಾಜಕ್ಕೆ ಮಾರಕವಾಗುವ ಸಾಧ್ಯತೆ ಇರುತ್ತದೆ ಇದರಿಂದ ಅಧಿಕಾರಿಗಳು ವಿಶೇಷ ನಿಗವಹಿಸಿ ಬಾಲಕಾರ್ಮಿಕ ಪದ್ಧತಿಯಿಂದ ಮಕ್ಕಳನ್ನು ರಕ್ಷಿಸಬೇಕು ಎಂದು ಹೇಳಿದರು.

ಬಚ್ಚನ್ ಬಚಾವೋ ಆಂದೋಲನ ಸಂಸ್ಥೆಯ ರಾಜ್ಯ ಸಂಯೋಜಕರಾದ ವೇಣು ವರ್ಗಿಸ್ ಅವರು ಮಾತನಾಡಿ ಅಧಿಕಾರಿಗಳು ಬಾಲಕಾರ್ಮಿಕರನ್ನು ಪತ್ತೆಹಚ್ಚಲು ಹೋಗುವ ಸಂದರ್ಭದಲ್ಲಿ ಇಎಸ್ಐ ವೈದ್ಯರನ್ನು ರೈಡ್ ನಲ್ಲಿ ಭಾಗಿಯಾಗಿಸಿಕೊಳ್ಳಬೇಕು. ಮಗುವನ್ನು ರಕ್ಷಣೆ ಮಾಡಿದ ನಂತರ ಬುದ್ಧಿವಾದ ಹೇಳಿ ಮಗುವನ್ನು ಅಲ್ಲೇ ಬಿಟ್ಟು ಬರುವಂತಿಲ್ಲ. ಮಗುವನ್ನು ಮಕ್ಕಳ ಆಪ್ತ ಸಲಹಾ ಸಮಿತಿಗೆ ನೀಡಬೇಕು ಎಂದರು.

ಬಾಲಕಾರ್ಮಿಕ ಪದ್ಧತಿಗೆ ಒಳಗಾದ ಯಾವುದೇ ಮಗುವಿಗೆ ಗಾಯಗಳು ಆಗಿದ್ದ ಸಂದರ್ಭದಲ್ಲಿ ಸದರಿ ಮಕ್ಕಳಿಗೆ 3 ಲಕ್ಷದ ವರೆಗೂ ಪರಿಹಾರವನ್ನು ನೀಡಬಹುದು. ಬಾಲ ಕಾರ್ಮಿಕರನ್ನು ಪತ್ತೆಹಚ್ಚಲು ವಿವಿಧ ಇಲಾಖೆಗಳು ಸಹಕಾರ ನೀಡಬೇಕು. ಬಾಲ ಕಾರ್ಮಿಕರನ್ನು ಪತ್ತೆಹಚ್ಚಲು ಹೋಗುವಾಗ ಸದರಿ ಅಧಿಕಾರಿಗಳಿಗೆ ವಾಹನದ ವ್ಯವಸ್ಥೆ ಕಲ್ಪಿಸಬೇಕು ಎಂದು ತಿಳಿಸಿದರು.

ಎಲ್ಲಾ ಅಧಿಕಾರಿಗಳು ಸಮನ್ವಯ ಸಾಧಿಸಿ ಕಾರ್ಯನಿರ್ವಹಿಸಿದರೆ ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಬಹುದಾಗಿದೆ. ಅಧಿಕಾರಿಗಳು ಪಣತೊಟ್ಟು ಕನಿಷ್ಠ ಒಂದು ತಾಲೂಕನ್ನಾದರೂ ಬಾಲ ಕಾರ್ಮಿಕ ಪದ್ಧತಿ ಮುಕ್ತ ತಾಲೂಕನ್ನಾಗಿಸಲು ಶ್ರಮ ವಹಿಸಬೇಕು. ಮುಂದಿನ ದಿನಗಳಲ್ಲಿ ಬಾಲ ಕಾರ್ಮಿಕ ಪದ್ಧತಿಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಅಧಿಕಾರಿಗಳು ವಹಿಸಬೇಕಾದ ಕ್ರಮಗಳ ಕುರಿತು ತರಬೇತಿ ಕಾರ್ಯಕ್ರಮವನ್ನು ದೊಡ್ಡದಾಗಿ ಮಾಡಬೇಕು ಎಂದು ಹೇಳಿದರು.

ಸಭೆಯಲ್ಲಿ ಕಾರ್ಮಿಕ ಇಲಾಖೆಯ ಉಪ ನಿರ್ದೇಶಕಿ ಸವಿತಾ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಸಿ ಚಲುವಯ್ಯ, ನಗರಸಭೆ ಪೌರಾಯುಕ್ತ ಪಂಪಶ್ರೀ, ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕ ನಿರ್ದೇಶಕ ಶ್ರೀನಿವಾಸ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಂಜುಳಾ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

## ನಿನ್ನಲ್ಲಿರುವ ಶಕ್ತಿಯನ್ನು ನೀನೆ ಗುರುತಿಸಿಕೊ : ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜೀ ಅಭಿಮತ

**ಚಾಮರಾಜನಗರ:** ಮಾತೆಯರಿಲ್ಲದೆ ಅಭಿವೃದ್ಧಿ ಸಾಧ್ಯವಿಲ್ಲ. ಮಾತೆಯರು ತಮ್ಮಲ್ಲಿರುವ ಶಕ್ತಿಯನ್ನು ಗುರುತಿಸಿಕೊಳ್ಳುವುದೇ ನಿಜವಾದ ಹೋರಾಟ ಎಂದು ಮನೋಬಲ ತರಬೇತುದಾರೆ ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜೀ ಅಭಿಪ್ರಾಯಪಟ್ಟರು. ಅವರು ಭಾರತೀಯ ಬೌದ್ಧ ಮಹಾಸಭಾ ಸಾರನಾಥ ಬುದ್ಧ ವಿಹಾರದ ವತಿಯಿಂದ ಜಿಲ್ಲಾಡಳಿತದ ಮುಂಭಾಗದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡುತ್ತಾ ಎಲ್ಲಾ ಕ್ಷೇತ್ರಗಳಲ್ಲೂ ಮಾತೆಯರೇ ಮುಂದೆ ಹೋಗುತ್ತಿದ್ದಾರೆ. ಮಾತೆಯರು ಅಭಿವೃದ್ಧಿಯ ಸಂಕೇತ. ಮಾತೆಯರು ಸಶಕ್ತ ದೃಢರಾಗದ ಹೊರತು ಸಮಾಜ ಸದೃಢವಾಗಲು ಸಾಧ್ಯವಿಲ್ಲ. ಮಾತೆಯರು ಸದೃಢರಾಗಲು ಹೋರಾಟ ಮಾಡಬೇಕು. ಹೋರಾಟ ಎಂದರೆ ಸ್ವಾವಲಂಬಿಯಾಗುವುದು. ತನ್ನಲ್ಲಿರುವ ಶಕ್ತಿಯನ್ನು ಗುರುತಿಸಿಕೊಳ್ಳುವುದು.ಆತ್ಮ ಗೌರವದಲ್ಲಿರುವುದು. ಸುಶಿಕ್ಷಿತರಾಗುವುದು. ಅವರ ಶಬ್ದದಲ್ಲಿದೆ ವುಮೆನ್. ಮೆನ್ ಅಂದ್ರೆ ಪ್ರಬಲವಾದ ಶಕ್ತಿಯುಳ್ಳವರು ಅದಕ್ಕಾಗಿಯೇ ತೊಟ್ಟಿಲು ಹಿಡಿಯುವ ಕೈ ಜಗತ್ತನ್ನೇ ತೂಗಬಲ್ಲದು. ಇಲ್ಲಿ ಅನೇಕ ಮಾತೆಯರ ಭಾವಚಿತ್ರ ಹಾಕಿದ್ದಾರೆ.ಇವರೆಲ್ಲ ಜಗತ್ತನ್ನ ತೂಗಿದ್ದಾರೆ. ಅಂಬೇಡ್ಕರ್ ಸಹ ಅದನ್ನೇ ಹೇಳಿದ್ದು ನಿನ್ನ ಶಕ್ತಿಯನ್ನು ನೀನೆ ಗುರುತಿಸಿಕೊ ಅದೇ ನಿಜವಾದ ಸ್ವಾವಲಂಬಿತನವಾಗಿದೆ ಎಂದರು. ಮಹಿಳಾ ಜಿಲ್ಲಾಧ್ಯಕ್ಷರಾದ ಶಿಲ್ಪನಾಗ್ ಉಮೇಶ್ ಕುದರ್ ಮಾತನಾಡಿ ಇಂದು ಜಗತ್ತಿನಲ್ಲಿ ಎಲ್ಲಾ ಮಹಿಳೆಯರು ಮಂಚೂಣಿಯಲ್ಲಿ ಇದ್ದಾರೆ. ರಾಷ್ಟ್ರಪತಿಯವರು ಸಹ ಮಹಿಳೆಯಾಗಿದ್ದಾರೆ. ಜಿಲ್ಲಾಡಳಿತ ನಡೆಸುವವರು ಮಹಿಳೆಯರಾಗಿದ್ದಾರೆ. ಇದಕ್ಕೆಲ್ಲ ಮೂಲ ಕಾರಣ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ನಮಗೆ ನೀಡಿದ ಸಂವಿಧಾನವೇ ಆಗಿದೆ ಎಂದರು. ಹಳೆಯ ಕಂದಾಚಾರಗಳಿಂದ ಮುಕ್ತಿ ಹೊಂದಿದ ಈ ದಿನವನ್ನು ಜಿಲ್ಲಾಡಳಿತದ ಮುಂಭಾಗದಲ್ಲಿ ಆಚರಿಸುತ್ತಿರುವುದು ನಮಗೆ ಸಂತಸ ತಂದಿದೆ. ನಂತರ ಕೇಕ್ ಕಟ್ ಮಾಡಿ ಸಂಭ್ರಮ ಆಚರಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷರಾದ ಬಸವರಾಜ್, ಪುಷ್ಪ ಮರಿಸ್ವಾಮಿ, ರೇಣುಕಾದೇವಿ, ಚಿನ್ನಮ್ಮ, ಕೃಷ್ಣಪ್ಪ ಉಮೇಶ್ ಕುದಾರ್, ಕಲಾವತಿ ಶಾಂತಲಕ್ಷ್ಮಿ, ಮಂಗಳ ನಾಗೇಂದ್ರ ನಂಜುಂಡಯ್ಯ, ಕೃಷ್ಣಯ್ಯ, ಯಲಕರು ಮಲ್ಲಿಕಾರ್ಜುನ್, ಬಿಕೆ ಆರಾಧ್ಯ, ಪುಷ್ಪ, ಶಿವಕಮಲ, ಉಪಾಸಕ,ಉಪಾಸಕಿಯರು, ಭೀಮ ಬಂಧುಗಳು, ಹಾಜರಿದ್ದರು.




## ಶಿಶುಗಳಲ್ಲಿ ಥಯಮಿನ್ ಕೊರತೆಯಿಂದ ಉಂಟಾಗುವ ಸಾವುಗಳನ್ನು ತಡೆಗಟ್ಟಲು ಸಲಹೆ: ಜಿ.ಪಂ. ಸಿಇಓ



**ಮಂಡ್ಯ:** ಪ್ರಸವೋತ್ತರ ತಾಯಂದಿರು ಹಾಗೂ ಶಿಶುಗಳಿಗೆ ನಿಯಮಿತವಾಗಿ ಥಯಮಿನ್ ಪೂರಕಗಳನ್ನು ನೀಡುವುದು, ಥಯಮಿನ್ ಸಮೃದ್ಧ ಆಹಾರಗಳ ಬಳಕೆಯ ಕುರಿತು ಜಾಗೃತಿ ಅಭಿಯಾನ ನಡೆಸುವುದು ಮತ್ತು ಥಯಮಿನ್ ಕೊರತೆಯನ್ನು ಆರಂಭಿಕ ಹಂತದಲ್ಲೇ ಗುರುತಿಸಿ ಚಿಕಿತ್ಸೆ ನೀಡುವ ಕುರಿತು ಅಗತ್ಯ ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕೆಂದು ಜಿ.ಪಂ. ಸಿಇಓ ನಂದಿನಿ ಕೆ.ಆರ್. ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಸಲಹೆ ನೀಡಿದರು.

ಶುಕ್ರವಾರ ಮಂಡ್ಯ ನಗರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯಲ್ಲಿ ನಡೆದ ಜಿಲ್ಲಾ ಆರೋಗ್ಯ ಸಂಘದ ಸಭೆಯಲ್ಲಿ ಮಾತನಾಡಿದ ಅವರು ಶಿಶುಗಳಲ್ಲಿ ಥಯಮಿನ್ (ವಿಟಮಿನ್ ಃ?) ಕೊರತೆಯಿಂದ ಉಂಟಾಗುವ ಸಾವುಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ತಿಳಿಸಿದರು.

**SAM & MAM** ಮಕ್ಕಳನ್ನು ಗುರುತಿಸಿ ವರ್ಗೀಕರಿಸಲು ಸೂಚನೆ: ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ತಮ್ಮ ವ್ಯಾಪ್ತಿಯಲ್ಲಿನ ಅಪೌಷ್ಠಿಕ ಮಕ್ಕಳನ್ನು ಗುರುತಿಸಲು ಒಟ್ಟಾಗಿ ಕಾರ್ಯನಿರ್ವಹಿಸಿ, 0–6 ವರ್ಷದೊಳಗಿನ ಎಲ್ಲಾ ಮಕ್ಕಳನ್ನು ಆಗಿಂದಾಗ್ಗೆ ತಪಾಸಣೆಗೆ ಒಳಪಡಿಸಿ, ಖಂಓ & ಓಂಓ ಎಂದು ವರ್ಗೀಕರಿಸಿ ಮಾಹಿತಿಯನ್ನು ಸಿದ್ಧಪಡಿಸಿಕೊಳ್ಳಬೇಕು ಎಂದು ಸೂಚಿಸಿದರು.

ವೈದ್ಯಕೀಯ ಕಾರಣ ಅಥವಾ ವೈದ್ಯಕೀಯವಲ್ಲದ ಕಾರಣ ಇರುವಂತ ಎಲ್ಲಾ ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳನ್ನು ಜಿಲ್ಲಾ ಡಿ.ಇ.ಐ.ಸಿ ಕೇಂದ್ರ, ಮಂಡ್ಯ ಮುಖಾಂತರ ಕಡ್ಡಾಯವಾಗಿ ಎನ್ ಆರ್ ಸಿ ಗೆ ದಾಖಲಾತಿ ಮಾಡಿಸಲು ಕ್ರಮವಹಿಸಬೇಕು ಹಾಗೂ ತೀವ್ರ ಅಪೌಷ್ಟಿಕತೆ **(MAM)** ಮಕ್ಕಳಲ್ಲಿ ಅಥವಾ ಮಧ್ಯಮ ಅಪೌಷ್ಟಿಕತೆ **(Moderate)** ಹೊಂದಿರುವ ಮಕ್ಕಳನ್ನು ಕಡ್ಡಾಯವಾಗಿ ಎನ್ ಆರ್ ಸಿ ಗೆ ದಾಖಲಾತಿ ಮಾಡಿಸಬೇಕು ಎಂದು ತಿಳಿಸಿದರು.

ನಿರಂತರವಾಗಿ ತೂಕ ಮತ್ತು ಎತ್ತರವನ್ನು ಪರಿಶೀಲನೆ ಮಾಡುವುದು, ಪೂರಕ ಪೌಷ್ಠಿಕ ಆಹಾರವನ್ನು ಒದಗಿಸುವುದು, ಸಾಂಕ್ರಾಮಿಕ ಖಾಯಿಲೆಗಳಿಗೆ ತುತ್ತಾಗದಂತೆ ಎಚ್ಚರಿಕೆ ವಹಿಸುವುದು, ನಿಗಧಿತ ಸಮಯಕ್ಕೆ ಸರಿಯಾಗಿ ಲಸಿಕೆಗಳನ್ನು ಒದಗಿಸುವುದು, ಆಹಾರದಲ್ಲಿ ನಿಯಮಿತವಾಗಿ ವಿಟಮಿನ್, ಐರನ್, ಜಿಂಕ್ ಮತ್ತು ಅಗತ್ಯ ಪೋಷಕಾಂಶಗಳು ಲಭ್ಯವಿರುವಂತೆ ಮಾಡುವುದರಿಂದ ಮಧ್ಯಮ ಮಟ್ಟದ ಅಪೌಷ್ಠಿಕತೆ **(MAM)** ಯಿಂದ ತೀವ್ರ ಅಪೌಷ್ಠಿಕತೆ **(SAM)** ಯೆಡೆಗೆ ಹೋಗುವುದನ್ನು ತಪ್ಪಿಸಬಹುದಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಡಿಹೆಚ್ಓ ಮೋಹನ್, ಜಿಲ್ಲಾ ಕುಷ್ಠ ರೋಗ ನಿಯಂತ್ರಣಾಧಿಕಾರಿ ಡಾ. ಸೋಮಶೇಖರ್, ಆರ್.ಸಿ.ಹೆಚ್. ಡಾ. ಅಶ್ವಥ್, ಟಿಹೆಚ್ಓ ಡಾ. ನಾರಾಯಣ್, ತಾಲ್ಲೂಕು ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಆದಿತ್ಯ, ಹಾಗೂ ಸಿಡಿಪಿಓ ಕೃಷ್ಣಮೂರ್ತಿ ಸೇರಿದಂತೆ ಇತರರು ಹಾಜರಿದ್ದರು.



**ತುಮಕೂರು : ನಗರದ ಅಂಬೇಡ್ಕರ್ ಭವನದಲ್ಲಿ ಅಂಬೇಡ್ಕರ್ ಸೇನೆ ತುಮಕೂರು ಜಿಲ್ಲಾ ಮಹಿಳಾ ಘಟಕದ ವತಿಯಿಂದ ಅಕ್ಷರದ ಅವ್ವ ಸಾವಿತ್ರಿಭಾಯಿ ಫುಲೆರವರ ಜನ್ಮದಿನೋತ್ಸವವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಅಂಬೇಡ್ಕರ್ ಸೇನೆ ಮಹಿಳಾ ಘಟಕದ ಜಿಲ್ಲಾಧ್ಯಕ್ಷರಾದ ಕೆ.ಸುಮಾರವರು ಸಾವಿತ್ರಿಭಾಯಿ ಫುಲೆರವರ ಕುರಿತು ಹಾಗೂ ಅವರು ದಲಿತ ಕುಟುಂಬದಲ್ಲಿ ಹುಟ್ಟಿದ ಹೆಣ್ಣು ಮಗಳಾಗಿದ್ದು ಹತ್ತಾರು ಜನರಿಗೆ ವಿದ್ಯೆಯನ್ನು ಕಲಿಸುವುದರ ಮೂಲಕ ಅನಕ್ಷರತೆಯನ್ನು ಹೋಗಲಾಡಿಸುವುದರಿಂದ ಮಾತ್ರವೇ ನಮ್ಮ ದೇಶವು ಸುಭೀಕ್ಷವಾಗುತ್ತದೆಂಬ ಸಂದೇಶವನ್ನು ರವಾನಿಸಿದ ಮಹಾತಾಯಿ ಆ ಜಗನ್ಮಾತೆಯ ಜನ್ಮದಿನಾಚರಣೆಯನ್ನು ಇಂದು ನಾವುಗಳು ಆಚರಿಸುತ್ತಿರುವುದಕ್ಕೆ ತುಂಬಾ ಸಂತೋಷಕರವಾಗಿದೆಂದು ತಿಳಿಸಿದರು.**

# ಕನ್ನಡಿಗರು ಕನ್ನಡದ ಪರಿಚಲಕರಾಗಿ ಕಾರ್ಯನಿರ್ವಹಿಸಿ: ಡಾ.ಕುಮಾರ



**ಮಂಡ್ಯ:** ಈಗಾಗಲೇ ಜಿಲ್ಲೆಯಲ್ಲಿ ಕನ್ನಡದ ಕಂಪನ್ನು ಹರಡಲು ಸಾಕಷ್ಟು ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ. ಇತ್ತೀಚಿಗಷ್ಟೇ ಜಿಲ್ಲೆಯಲ್ಲಿ ನಡೆದ 87 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅದ್ದೂರಿಯಾಗಿ ಮಾಡಲಾಗಿದೆ. ಪ್ರತಿಯೊಬ್ಬ ಕನ್ನಡಿಗರು ಕನ್ನಡದ ಪರಿಚಲಕರಾಗಿ ಕಾರ್ಯ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ ಕುಮಾರ ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಶನಿವಾರ ನಡೆದ ಜಿಲ್ಲಾ ಮಟ್ಟದ ಕನ್ನಡ ಜಾಗೃತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಕನ್ನಡ ಭಾಷಾ ಕಲಿಕಾ ಅಧಿನಿಯಮದ ಪ್ರಕಾರ ಶಾಲೆಗಳಲ್ಲಿ ಕಡ್ಡಾಯವಾಗಿ ಕನ್ನಡ ಮೊದಲ ಭಾಷೆ ಇರಬೇಕು. ಉರ್ದು ಶಾಲೆಗಳಲ್ಲೂ ಸಹ ಕನ್ನಡ ಭಾಷೆಯ ವಿಷಯವನ್ನು ಇಡಬೇಕು ಎಂದು ಹೇಳಿದರು.

ಪೋಷಕರಲ್ಲಿ ಕನ್ನಡಪರ ಮನಸ್ಥಿತಿ ಇದ್ದಾಗ ಮಾತ್ರ ಕನ್ನಡ ಕಲಿಯುವವರ ಸಂಖ್ಯೆ ಹೆಚ್ಚಾಗುತ್ತದೆ. ಮಕ್ಕಳು ಪ್ರಾರಂಭಿಕ ಹಂತದಲ್ಲಿಯೇ ಕನ್ನಡ ಕಲಿಯಲು ಸಹಕಾರವಾಗುತ್ತದೆ. ಕೈಗಾರಿಕೆ ವಾಣಿಜ್ಯ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಶೇ 60 ರಷ್ಟು ಕನ್ನಡ ನಾಮಫಲಕಗಳನ್ನು ಅಳವಡಿಸಿರಬೇಕು. ಇಲ್ಲವಾದಲ್ಲಿ ಸದರಿ ಅಂಗಡಿ ಮತ್ತು ಕೈಗಾರಿಕೆಗಳಿಗೆ ದಂಡ ವಿಧಿಸು ಪರವಾನಿಗೆಯನ್ನು ರದ್ದು ಮಾಡಿ ಎಂದು ಸೂಚಿಸಿದರು.

ನಗರ ಸಭೆ ಅಧಿಕಾರಿಗಳು ಇಲ್ಲಿಯವರೆಗೂ ಜಿಲ್ಲೆಯಲ್ಲಿ ಶೇ 60 ರಷ್ಟು ಕನ್ನಡ ನಾಮಪಾಲಕಗಳ ಅಳವಡಿಕೆಯ ನಿಯಮವನ್ನು ಉಲ್ಲಂಘಿಸಿದವರು ಸಂಖ್ಯೆ ಹಾಗೂ ಇಲ್ಲಿಯವರೆಗೂ ವಿಧಿಸಲಾದ ದಂಡದ ಕುರಿತು ಮಾಹಿತಿ ನೀಡಿ. ಜಿಲ್ಲೆಯಲ್ಲಿರುವ ಅನಕ್ಷರಸ್ಥರ ಪಟ್ಟಿಯನ್ನು ಪಡೆದು ಅಂತಹ ಅನಕ್ಷರಸ್ಥರಿಗೆ ಗ್ರಾಮ ಮಟ್ಟದಲ್ಲಿ ಕನ್ನಡ ಕಲಿಸುವ ಹಾಗೂ ಸಹಿ ಹಾಕಿಸುವ ಅಭಿಯಾನ ಮಾಡಿ ಎಂದು ಹೇಳಿದರು.

ವಿಪರ್ಯಾಸವೆಂದರೆ ಅತಿ ಹೆಚ್ಚು ಕನ್ನಡ ಮಾತನಾಡುವ ಜಿಲ್ಲೆಯಾದ ಮಂಡ್ಯದಲ್ಲಿಯೇ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ 3500 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅನುತ್ತೀರ್ಣಗೊಂಡಿದ್ದಾರೆ ಇದರ ಕುರಿತಾಗಿ ನಮ್ಮನ್ನು ನಾವೇ ಅವಲೋಕಿಸಿಕೊಳ್ಳಬೇಕು. ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕು ಎಂದು ತಿಳಿಸಿದರು.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮಂಡ್ಯದಲ್ಲಿ ಯಶಸ್ವಿಯಾಗಿ ನಡೆದ ಗುರುತಿಗಾಗಿ ಈಗಾಗಲೇ "ಕನ್ನಡ ಭವನ" ನಿರ್ಮಾಣಕ್ಕೆ ಸಕಲ ಸಿದ್ಧತೆಗಳನ್ನು ಜಿಲ್ಲಾಡಳಿತ ಮಾಡಿಕೊಂಡಿದೆ. ಜಿಲ್ಲೆಯ ಬ್ಯಾಂಕುಗಳ ಅಧಿಕಾರಿಗಳಿಗೆ ಕನ್ನಡ ಬಾರದೆ ಸಾರ್ವಜನಿಕರಿಗೆ ಸಮಸ್ಯೆ ಉಂಟಾಗುತ್ತಿದೆ ಇದರ ಕುರಿತು ಈಗಾಗಲೇ ಸಭೆ ನಡೆಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಬ್ಯಾಂಕಿನ ಸಂಬಂಧಿತ ಎಲ್ಲಾ ಚಟುವಟಿಕೆಗಳು, ಕಡತಗಳು ಮತ್ತು ಸಿಬ್ಬಂಧಿಗಳ ಗುರುತಿನ ಚೀಟಿಯೂ ಕನ್ನಡದಲ್ಲಿಯೇ ಎಂದು ಸೂಚನೆ ನೀಡಿದ್ದೇನೆ ಎಂದು ಹೇಳಿದರು.

ಹೊರ ರಾಜ್ಯಗಳಿಂದ ಜಿಲ್ಲೆಗೆ ಬಂದ ಬ್ಯಾಂಕ್ ಸಿಬ್ಬಂದಿಗಳಿಗೆ ಕನ್ನಡವನ್ನು ಕಲಿಸುವ ಕಾರ್ಯವಾಗಬೇಕು. ಈಗಾಗಲೇ ಆನ್ಲೈನ್ ಮೂಲಕ ಕನ್ನಡ ಕಲಿಸುವ ಕಾರ್ಯ ನಡೆಯುತ್ತಿದೆ. ಆರೋಗ್ಯ ಇಲಾಖೆಯಿಂದ ನೀಡುತ್ತಿರುವ ಜನನ ಪ್ರಮಾಣ ಪತ್ರವು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಮುದ್ರಿಸಲಾಗುತ್ತಿದೆ ಎಂಬ ಮಾಹಿತಿ ಇದೆ ಕಡ್ಡಾಯವಾಗಿ ಕನ್ನಡದಲ್ಲಿ ನೀಡಬೇಕು. ವಿವಿಧ ಇಲಾಖೆಗಳ ಅಧಿಕಾರಿಗಳು ತಮ್ಮ ಕಚೇರಿಯ ಕಡತಗಳನ್ನು ಕಡ್ಡಾಯವಾಗಿ ಕನ್ನಡದಲ್ಲಿಯೇ ನಿರ್ವಹಣೆ ಮಾಡಬೇಕು ಆ ಮೂಲಕ ಕನ್ನಡವನ್ನು ಉಳಿಸೋಣ. ರಾಷ್ಟ್ರಕವಿ ಕುವೆಂಪು ಅವರು ರಚಿಸಿರುವ ನಾಡಗೀತೆಗೆ 100 ವರ್ಷ ಪೂರೈಸಿದ ಹಿನ್ನೆಲೆ ಈಗಾಗಲೇ ಜಿಲ್ಲೆಯಲ್ಲಿ ಸಹಸ್ರಕಂಠಗಳಿಂದ ಗೀತ ಗಾಯನವನ್ನು ಮಾಡಲಾಗಿದೆ ಎಂದು ಹೇಳಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾದ ತಿಮ್ಮೇಶ್ ಅವರು ಮಾತನಾಡಿ ಆಡಳಿತದಲ್ಲಿ ಕನ್ನಡವನ್ನು ಬಳಸುವ ಅಧಿಕಾರಿಗಳನ್ನು ಗುರುತಿಸಿ ಸನ್ಮಾನಿಸುವ ಕೆಲಸಗಳು ಜಿಲ್ಲಾಮಟ್ಟದಲ್ಲಿ ಆಗಬೇಕು. ಕನ್ನಡವನ್ನು ಉಳಿಸುವ ಕಾರ್ಯವನ್ನು ಎಲ್ಲರೂ ಒಗ್ಗಟ್ಟಾಗಿ ನಿರ್ವಹಿಸಬೇಕಾಗಿದೆ. ರಾಜ್ಯದ ಮುಖ್ಯಮಂತ್ರಿಗಳು ಸಹ ಕನ್ನಡದಲ್ಲಿಯೇ ಆಡಳಿತ ಕಡತಗಳನ್ನು ನಿರ್ವಹಣೆ ಮಾಡುತ್ತಾರೆ ಹಾಗೂ ಸಹಿಯನ್ನು ಕನ್ನಡದಲ್ಲಿಯೇ ಮಾಡುತ್ತಾರೆ ಎಂದು ಹೇಳಿದರು.

ವಾಣಿಜ್ಯ ಮಳಿಗೆಗಳು ಕೈಗಾರಿಕೆಗಳು ಹಾಗೂ ಅಂಗಡಿಗಳಲ್ಲಿ ಶೇಕಡ 60 ರಷ್ಟು ನಾಮಫಲಕಗಳು ಕನ್ನಡದಲ್ಲಿ ಇಲ್ಲದಿವಾದಲ್ಲಿ 15 ದಿನದೊಳಗಾಗಿ ಗಡುವು ನೀಡಿ ನಂತರವೂ ಪರಿಪಡಿಸದಿದಲ್ಲಿ ರೂ 5000 ದಂಡ ವಿಧಿಸಲಾಗುವುದು ನಂತರವೂ ಬದಲಾಯಿಸದಿದ್ದರೆ 10,000 ದಂಡ ವಿಧಿಸಲಾಗುವುದು. ಕನ್ನಡವನ್ನು ಭೀತಿಯಿಂದಲ್ಲ ಪ್ರೀತಿಯಿಂದ ಇತರರಿಗೆ ಕಲಿಸಬೇಕು. ನೆರೆ ರಾಜ್ಯಗಳಿಂದ ಬಂದ ವ್ಯಾಪಾರಿಗಳು ಕನ್ನಡ ಕಲಿಯುವಂತೆ ನಾವು ಅವರೊಡನೆ ಕನ್ನಡದಲ್ಲಿ ವ್ಯವಹರಿಸಬೇಕು ಎಂದು ಹೇಳಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರ ವಿವಿಧ ಇಲಾಖೆಗಳಲ್ಲಿ ಬಳಸಲಾಗುವ ಸಾಮಾನ್ಯ ಆಂಗ್ಲ ಭಾಷೆಯ ಪದಗಳನ್ನು ಹುಡುಕಿ ಅದಕ್ಕೆ ಪರ್ಯಾಯವಾಗಿ ಬಳಸುವ ಕನ್ನಡ ಪದಗಳ ಕೈಪಿಡಿಯನ್ನು ಸಿದ್ಧಪಡಿಸಿದೆ ಅಧಿಕಾರಿಗಳು ಅದನ್ನು ಓದಿ ಕನ್ನಡದಲ್ಲಿ ವ್ಯವಹರಿಸಬೇಕು. ಕೈಗಾರಿಕೆಗಳು ಖಾಸಗಿ ಸಂಸ್ಥೆಗಳು ಸ್ಥಳೀಯರಿಗೆ ಉದ್ಯೋಗವಕಾಶ ನೀಡಬೇಕು ಎಂದು ಹೇಳಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕನ್ನಡ ಬಾರದವರಿಗೆ ಕನಿಷ್ಠ 30 ಜನರಿಗೆ ಮೂರು ತಿಂಗಳ ಕಾಲ ಕನ್ನಡವನ್ನು ಕಲಿಸಿ ಕನ್ನಡವನ್ನು ಕಲಿತಿರುವ ಪ್ರಮಾಣ ಪತ್ರವನ್ನು ನೀಡುತ್ತದೆ. ಹಾಗಾಗಿ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಕನ್ನಡ ಬಾರದ ಹೊರ ರಾಜ್ಯದವರಿಗೆ ಇದರ ಕುರಿತು ಮಾಹಿತಿ ನೀಡಬೇಕು ಎಂದು ಹೇಳಿದರು.

ವಿಧಾನಸೌಧ ಮತ್ತು ವಿಕಾಸ ಸೌಧಗಳಲ್ಲಿ ಕನ್ನಡ ಕವಿಗಳ ಘೋಷವಾಕ್ಯಗಳನ್ನು ಅಳವಡಿಸುವ ನೂತನ ಕಾರ್ಯಕ್ಕೆ ಕನ್ನಡ ಪ್ರಾಧಿಕಾರ ಮುಂದಾಗಿದೆ. ವಿಧಾನಸೌಧಕ್ಕೆ ಕನ್ನಡ ಕವಿಗಳು ರಚಿಸಿರುವ 112 ಘೋಷ ವಾಕ್ಯಗಳ ಫಲಕಗಳನ್ನು ಅಳವಡಿಸಲು ಯೋಜನೆ ರೂಪಿಸಲಾಗಿದ್ದು ಶೀಘ್ರವಾಗಿ ಮುಖ್ಯಮಂತ್ರಿಗಳಿಂದ ಉದ್ಘಾಟಿಸಲಾಗುತ್ತದೆ. ಜಿಲ್ಲಾ ಮಟ್ಟದಲ್ಲೂ ಸಹ ಈ ರೀತಿಯ ಕಾರ್ಯಗಳು ನಡೆಯಬೇಕು ಎಂದು ಹೇಳಿದರು.

ರಾಷ್ಟ್ರಕವಿ ಕುವೆಂಪು ಅವರು ರಚಿಸಿರುವ ನಾಡಗೀತೆಗೆ 100 ವರ್ಷ ಸಂಭವಿಸಿದೆ. ಅದರ ಪ್ರಯುಕ್ತ ಜಿಲ್ಲೆಯ ಸಾವಿರ ವಿದ್ಯಾರ್ಥಿಗಳಿಂದ ಸಹಸ್ರಗಂಟಗಳ ನಾಡ ಗೀತೆ ಗಾಯನ ಮಾಡಬೇಕು. ನಾಡಗೀತೆಯನ್ನು ಶಾಲಾ–ಕಾಲೇಜುಗಳಲ್ಲಿ ಕಡ್ಡಾಯವಾಗಿ ಮತ್ತು ಕ್ರಮಬದ್ಧವಾಗಿ ಹಾಡಬೇಕು. ಇತ್ತೀಚಿನ ದಿನಗಳಲ್ಲಿ ಸ್ಥಳಗಳ ನಾಮಪದನಗಳನ್ನು ಚಿಕ್ಕದಾಗಿ ಹೇಳುವ ಸಂಸ್ಕೃತಿ ಬೆಳೆದಿದೆ. ಅದನ್ನು ನಿರ್ಮೂಲನೆ ಮಾಡಿ ಸ್ಥಳಗಳ ನಾಮಪದಗಳನ್ನು ಉಳಿಸುವ ಕೆಲಸ ಮಾಡಬೇಕು. ಸರ್ಕಾರಿ ಶಾಲೆಗಳಲ್ಲಿ ಗ್ರಂಥಾಲಯಗಳನ್ನು ರೂಪಿಸುವ ಯೋಜನೆಯನ್ನು ಕೈಗೊಳ್ಳಬೇಕು ಎಂದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ನಂದೀಶ್, ಕನ್ನಡ ಜಾಗೃತಿ ರಕ್ಷಣಾ ವೇದಿಕೆಯ ಅಧಿಕಾರೇತರ ಸದಸ್ಯರುಗಳಾದ ಉಷಾರಾಣಿ, ಕಿಲಾರ ಕೃಷ್ಣೆಗೌಡ, ಚಾಮರಾಜು, ಪಣ್ಣೆದೊಡ್ಡಿ ಹರ್ಷ, ಮಂಜು ಪ್ರತಿಭಾಂಜಲಿ, ಡೇವಿಡ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಚಿ.ನಾ.ಹಳ್ಳಿ ತಾಲೂಕಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ ಆರಂಭದ ಚಿಂತನೆ

**ಹುಳಿಯಾರು:** ಎಸ್‌ಡಿಸಿ, ಎಫ್‌ಡಿಸಿ, ಪೊಲೀಸ್, ಬ್ಯಾಂಕ್ ಹೀಗೆ ವಿವಿಧ ಕ್ಷೇತ್ರದಲ್ಲಿ ಚಿಕ್ಕನಾಯಕನಹಳ್ಳಿ ತಾಲೂಕಿನವರು ಉದ್ಯೋಗ ಪಡೆದುಕೊಳ್ಳಲು ನೆರವಾಗುವ ನಿಟ್ಟಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ ಆರಂಭಸಿವ ಚಿಂತನೆ ಮಾಡಲಾಗಿದೆ ಎಂದು ಶಾಸಕರಾದ ಸಿ.ಬಿ.ಸುರೇಶ್‌ಬಾಬು ತಿಳಿಸಿದರು.

ಹುಳಿಯಾರಿನ ಕೆಪಿಎಸ್ ಶಾಲೆಯಲ್ಲಿ ಶನಿವಾರ ಆಯೋಜಿಸಿದ್ದ ವಾರ್ಷಿಕೋತ್ಸವದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಚಿಕ್ಕನಾಯಕನಹಳ್ಳಿ ತಾಲೂಕು ಈ ವರ್ಷ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಫಲಿತಾಂಶ ಪಡೆಯುವ ನಿಟ್ಟಿನಲ್ಲಿ ತಾಲೂಕಿನ ಶಿಕ್ಷಕರಲ್ಲಿನ ಪ್ರತಿಭೆ, ಸಾಮರ್ಥ್ಯವನ್ನು ಪಠ್ಯವಾರು ಗುರುತಿಸಿ ಅವರನ್ನೇ ಸಂಪನ್ಮೂಲ ವ್ಯಕ್ತಿಯನ್ನಾಗಿ ಮಾಡಿ ಮಕ್ಕಳಿಗೆ ವಿಶೇಷ ಬೋದನಾ ವ್ಯವಸ್ಥೆ ಮಾಡಲಾಗಿದೆ. ಸರ್ಕಾರಿ ಮತ್ತು ಖಾಸಗಿ ಎಂಬ ಬೇದಬಾವ ಮಾಡದೆ ಎಲ್ಲಾ ಶಾಲೆಯ ಟಾಪರ್ಸ್ ಮಕ್ಕಳಿಗೆ ಪ್ರೇರಣಾ ಶಿಬಿರವನ್ನೂ, ಫೇಲಾಗುವವರನ್ನೂ ರಾಜಮಾರ್ಗದಲ್ಲಿ ಪಾಸಾಗಿಸಲು, ಅದೂ ಶೇ.50 ಅಂಕಗಳೊಂದಿಗೆ ಪಾಸಾಗುವಂತೆ ಮಾಡಲು ತಾಲೂಕಿನ 10 ಕಡೆ ಸಂಜೀವಿನಿ ಶಿಬಿರ ಮಾಡಲಾಗುತ್ತಿದೆ ಎಂದು ತಿಳಿಸಿದರು.




ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಹಂತದಲ್ಲಿ ಮನಸ್ಸು ಚಂಚಲವಾಗುವುದು ಸಹಜ. ಅದೂ ಅಗ್ಗದಲ್ಲಿ ಇಂಟರ್ ನೆಟ್ ಸಿಕ್ಕಿರುವುದು ಹುಚ್ಚು ಕೋಡಿ ಮನಸು ಆಗುತ್ತದೆ. ಈ ಹಂತದಲ್ಲಿ ಮನಸನ್ನು ಹತೋಟಿಗೆ ತಂದುಕೊಂಡು ಕಲಿಕೆಯಲ್ಲಷ್ಟೆ ಆಸಕ್ತಿ ವಹಿಸಿದರೆ ಸಾಧನೆ ಸುಲಭಸಾಧ್ಯವಾಗುತ್ತದೆ. ಇದಕ್ಕಾಗಿ ಸೋಷಿಯಲ್ ಮೀಡಿಯಾವನ್ನು ಶಿಕ್ಷಣದ ಪ್ರಗತಿಗೆ ಬಳಸಿಕೊಳ್ಳುವ, ಪಠ್ಯೇತರ ಚಟುವಟಿಕೆಗಳಾದ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ತೊಡಗಿಕೊಳ್ಳುವ, ತಪ್ಪು ಮಾಡೋದು ಸಹಜ ತಿದ್ದಿ ನಡೆಯೋನು ಮನುಜ ಎನ್ನುವಂತೆ ತಿದ್ದಿ ನಡೆಯುವ ಗುಣ ಬಳಸಿಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಕಾಂತರಾಜು ಅವರು ಮಾತನಾಡಿ ಈ ವರ್ಷ ಯಾವ ಸಂದರ್ಭದಲ್ಲೂ ಶಿಕ್ಷಣ ಇಲಾಖೆಯಲ್ಲಿ ಆಗದ ನಿರ್ಣಯವನ್ನು ಈ ವರ್ಷ ಸರ್ಕಾರ ತೆಗೆದುಕೊಂಡಿದೆ. ಅದೇನೆಂದರೆ ರಾಜ್ಯದ ಎಲ್ಲಾ ಮಕ್ಕಳೂ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾಗಬೇಕೆಂದು ಇತರೆ ರಾಜ್ಯಗಳಲ್ಲಿ ಅಧ್ಯಾಯನ ಮಾಡಿ ಈಗಾಗಲೇ ನಾಲ್ಕು ಪ್ರಶ್ನೆಪತ್ರಿಕೆಗಳನ್ನು ಬಿಟ್ಟಿದ್ದಾರೆ. ಮುಂದಿನ ದಿನಗಳಲ್ಲಿ 3 ಪ್ರಶ್ನೆಪತ್ರಿಕೆಗಳನ್ನು ಬಿಡುವವರಿದ್ದಾರೆ. ಈ 7 ಪ್ರಶ್ನೆಪತ್ರಿಕೆಗಳಿಗೆ ಉತ್ತರಿಸುವಷ್ಟು ಸಿದ್ದರಾದರೆ ಎಲ್ಲರೂ ಖಂಡಿತ ಪಾಸಾಗಬಹುದು. ಅದೂ ಶೇ.50 ಕ್ಕಿಂತ ಹೆಚ್ಚು ಅಂಕಗಳೊಂದಿಗೆ ಪಾಸಾಗಬಹುದಾಗಿದೆ ಎಂದರಲ್ಲದೆ ಅರ್ಧವಾರ್ಷಿಕ ಪರೀಕ್ಷೆಯಲ್ಲಿ ತಾಲೂಕಿನಲ್ಲಿ 1000 ವಿದ್ಯಾರ್ಥಿಗಳು ಫೇಲಾಗಿದ್ದರು. ಇವರಿಗೆ ನಿತ್ಯ ಸಂತೆ ವಿಶೇಷ ಕ್ಲಾಸ್ ನೀಡಿದ ಪರಿಣಾಮ ಈಗ ಈ ಸಂಖ್ಯೆ ಇಳಿದಿದ್ದು ವಾರ್ಷಿಕ ಪರೀಕ್ಷೆಯಲ್ಲಿ ಯಾರೊಬ್ಬರೂ ಫೇಲಾಗದಂತೆ ಮಾಡುವ ಗುರಿ ಇಟ್ಟುಕೊಂಡು ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ ಎಂದರು.

ಜ್ಞಾನಜ್ಯೋತಿ ರಾಷ್ಟ್ರೀಯ ವಿದ್ಯಾಲಯದ ಪ್ರಾಚಾರ್ಯರಾದ ಸಿವಿಎನ್ ಮೂರ್ತಿ, ಪ್ರಾಚಾರ್ಯ ಎನ್.ಜಿ.ಕೃಷ್ಣಮೂರ್ತಿ, ಉಪಪ್ರಾಚಾರ್ಯ ಗವೀರಂಗಯ್ಯ, ಪಪಂ ಅಧ್ಯಕ್ಷೆ ಪ್ರೀತಿರಾಘವೇಂದ್ರ, ಸದಸ್ಯರುಗಳಾದ ದಸ್ತುಗಿರಿಸಾಬ್, ಬೀಬೀಫಾತೀಮಾ, ಎಸ್‌ಡಿಎಂಸಿ ಉಪಾಧ್ಯಕ್ಷ ಪ್ರದೀಪ್, ಸದಸ್ಯರುಗಳಾದ ಚನ್ನಕೇಶವ, ಸರವಣ್, ಶೇಖರ್, ಗವೀರಂಗಪ್ಪ, ರವಿ, ರೂಪಾ, ಲತಾ, ಲಲಿತಾ, ಕಮಲಾ, ಬಾಲಾಜಿಸಿಂಗ್, ಪ್ರಸನ್ನ, ಶೈಲಾ, ಹೇಮಾ, ಕರವೇ ಅಧ್ಯಕ್ಷ ಗೌಡಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ನಿರ್ಭೀತ ಶರಣ ಅಂಬಿಗರ ಚೌಡಯ್ಯ

ಉಪೇಕ್ಷಿತ ವಚನಕಾರರು



ಅದೊಂದು ಸೋಮವಾರದ ದಿನ ಮಂತ್ರಿಮಂಡಲಕ್ಕೆ ರಜೆ. ಅಣ್ಣ ಬಸವಣ್ಣನವರು ತಮ್ಮ ಇಬ್ಬರು ಪತ್ನಿಯರನ್ನು ಕರೆದು ಇಂದು ಹೊಳೆಯ ಆಚೆಗಿನ ಶಿವ ದೇವಾಲಯಕ್ಕೆ ಹೋಗಿ ಬರೋಣ ಎಂದು ಹೇಳಿದರು. ಸಪತ್ರಿಕರಾಗಿ ಶಿವ ದೇವಾಲಯಕ್ಕೆ ಹೊರಟ ಬಸವಣ್ಣನವರು ಹೊಳೆಯ ಈಚೆ ಬದಿಯಲ್ಲಿ ಬಿಜ್ಜಳ ಮಹಾರಾಜನು ಕಟ್ಟಿಸುತ್ತಿದ್ದ ಅರಮನೆಯನ್ನು ವೀಕ್ಷಿಸಿದರು. ನಂತರ ಹೊಳೆಯ ಬಳಿ ಸಾಗಿ ತೆಪ್ಪ ನಡೆಸುವ ಅಂಬಿಗನನ್ನು ಹೊಳೆಯಾಚೆಗಿನ ಶಿವ ದೇವಾಲಯಕ್ಕೆ ಬರುವಿರಾ ಎಂದು ಕೇಳಿದಾಗ ಆತ ಅತ್ಯಂತ ಅದ್ಭುತವಾಗಿ ಈ ಹೊಳೆಯನ್ನು ನಾನು ದಾಟಿಸಬಲ್ಲೆ ಭವದ ಹೊಳೆಯಲ್ಲ ಎಂದು ಹೇಳಿದನು. ಆತನ ಮಾತಿನಿಂದ ಚಕಿತರಾದ ಬಸವಣ್ಣನವರು ಆತನ ನಿರ್ಭಿಡೆಯ ವ್ಯಕ್ತಿತ್ವ, ಬಿರುಸಾದ ಮಾತುಗಳು ಒಂದು ಕ್ಷಣ ಅವನನ್ನೇ ದಿಟ್ಟಿಸಿ ನೋಡುವಂತೆ ಮಾಡಿದವು. ಮುಂದೆ ಲೋಕಾಭಿರಾಮದ ಮಾತುಗಳನ್ನಾಡುತ್ತಾ ಆಚೆ ದಡ ಸೇರಿದ ಬಸವಣ್ಣನವರು ಬನ್ನಿ ದೇವರ ದರ್ಶನ ಮಾಡಿ ಬರೋಣ ಎಂದು ಅಂಬಿಗನನ್ನು ಕರೆದರು.... ಮತ್ತೊಮ್ಮೆ ಚಾಟಿ ಏಟಿನಂತೆ ನಮ್ಮಂತ ಹೀನ ಜಾತಿಯವರಿಗೆ ಯಾವ ದೇವರು ಇಲ್ಲ ದಿಂಡರು ಇಲ್ಲ ಎಂದು ಉತ್ತರಿಸಿದನು ಆ ಅಂಬಿಗ. ಈಗ ಬಸವಣ್ಣನವರಿಗೆ ನಿಚ್ಚಳವಾಯಿತು. ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಬಹಿಷ್ಕೃತರೆನಿಸಿಕೊಂಡ ದೇವರ ಪೂಜೆಗೆ ಅನರ್ಹರೆನಿಸಿಕೊಂಡ ಹಿಂದುಳಿದ ವರ್ಗದ ಜನರ ಮನದಾಳದ ನೋವು ಈ ರೀತಿ ವ್ಯಕ್ತಗೊಳ್ಳುತ್ತಿದೆ ಎಂದು. ಆ ಅಂಬಿಗರ ವ್ಯಕ್ತಿಯೇ ನೇರ ನಿಷ್ಠುರವಾದಿಯಾದ ಅಂಬಿಗರ ಚೌಡಯ್ಯ. ಬಸವಾದಿ ಶರಣರ ಜೊತೆಯಲ್ಲಿಯೇ ಕಲ್ಯಾಣದ ವಚನಕಾರರ ಪಂಕ್ತಿಯಲ್ಲಿ ಕಾಣಿಸಿಕೊಂಡಾತ.

ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲೂಕಿನ ಅಂದಿನ ಶಿವಪುರ ಇಂದಿನ ಚೌಡದಾನಪುರ ಎಂಬ ಊರಿನಲ್ಲಿ ಜನಿಸಿದವರು ಅಂಬಿಗರ ಚೌಡಯ್ಯ. ಇವರ ಗುರುಗಳು ಉದ್ದಾಲಕರು.ಪೂರ್ವ ಪಶ್ಚಿಮವಾಹಿನಿಯಾಗಿ ಹರಿಯುತ್ತಿರುವ ತುಂಗಭದ್ರಾನದಿಯಲ್ಲಿ ದೋಣಿ ಮೂಲಕ ನದಿ ದಾಟಿಸುವ ಕಾಯಕ ಮಾಡುತ್ತ ವಚನಗಳನ್ನು ರಚಿಸಿದ್ದಾರೆ. ಗುರುವಿನ ಘನಕೃಪೆಗೆ ಪಾತ್ರರಾಗಿ ಅವರ ಮೂಲಕ ಲಿಂಗಾಂಗ ಸಾಮರಸ್ಯವನ್ನರಿತು ಅಪಾರ ಪಾಂಡಿತ್ಯವನ್ನು ಗಳಿಸಿದರು. ಕಲ್ಯಾಣದ ಕೀರ್ತಿಯನ್ನು ಕೇಳಿ ಅನುಭವಮಂಟಪಕ್ಕೆ ಬಂದ ಈ ಶರಣದಂಪತಿಯನ್ನು ಶರಣ ಪ್ರಮಥರೆಲ್ಲ ಆದರದಿಂದ ಬರಮಾಡಿಕೊಂಡರು.

**ಬಸವಣ್ಣನೇ ಭಕ್ತ ಪ್ರಭುದೇವರೇ ಜಂಗಮರು**
**ಇಂತೆಂಬ ಭೇದವಿಲ್ಲಯ್ಯ, ಅರಿವೇ ಗುರು,**
**ಗುರುವೇ ಪರಶಿವನು ಇದು ತಿಳಿದವನೇ**
**ಪರಂಜ್ಯೋತಿಯೆಂದ ಅಂಬಿಗರ ಚೌಡಯ್ಯ**

ಎಂಬ ವಚನದ ಮೂಲಕ ಬಸವಣ್ಣ ಮತ್ತು ಪ್ರಭುದೇವರನ್ನು ಚೌಡಯ್ಯನವರು ಮನಸಾರೆ ಹೊಗಳಿದ್ದಾರೆ. ಶಿವಶರಣರ ಸಂಗದಲ್ಲಿ ಕಾಲಕಳೆದು ಪರಿಪಕ್ವರಾದ ಇವರು ರಚಿಸಿದ ವಚನಗಳು ಹಸಿಗೋಡೆಯಲ್ಲಿ ಹರಳು ಎಸೆದಂತಿವೆ. ಇವರ ವಚನಗಳನ್ನು ಕೂಲಂಕುಶವಾಗಿ ಅಧ್ಯಯನಗೈದ ಕವಿ ಕಾವ್ಯಾನಂದರು

ನಿಜದ ನಗಾರಿ ನಿರ್ಭಯತೆಯ ಭೇರಿ
ಈ ಅಂಬಿಗರ ಚೌಡಯ್ಯ ಎಂದಿದ್ದಾರೆ.

ಮುಪ್ಪಿನ ಷಡಕ್ಷರಿಯವರು ತಮ್ಮ ಸುಬೋಧ ಸಾಗರದಲ್ಲಿ ಅಂಬಿಗರ ಚೌಡಯ್ಯನ ಮುಂಬಾಗಿಲನ್ನು ಕಾಯುವ ನಂಬಿಗೆಯ ಸೇವಕರು ಕುಂಭಿನಿಯೊಳಗಿನ್ನು ಸರಿಯದಾರು ಎಂದು ಹಾಡಿ ಹರಸಿದ್ದಾರೆ.

ಘನಲಿಂಗದೇವನು (1480) ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯ, ಅಂಬಿಗರ ಚೌಡಯ್ಯಯಿಂತಿಪ್ಪ ಶಿವಶರಣರ ಮನೆ ಬಾಗಿಲನಿಕ್ಕುವ ಸೊಣಗನ ಮಾಡಿ ಎನ್ನಿರಿಸಯ್ಯ ಎಂದು ತಮ್ಮ ವಚನವೊಂದರಲ್ಲಿ ಹೇಳಿರುವುದೇ ಇದಕ್ಕೆ ನಿದರ್ಶನವಾಗಿದೆ. ಮಹಾಕವಿ ಷಡಕ್ಷರಿಯವರು ತಮ್ಮ ಬಸವರಾಜ ವಿಜಯ ದಲ್ಲಿ ನಿಡುಗುಡಿಮಾರನಂಬಿಗರ ಚೌಡಯ್ಯ ಎಂದು ಸ್ಮರಿಸಿದ್ದರೆ, ಮಹಾಲಿಂಗ ವಿರಚಿತ ಗುರುಬೋಧಾಮೃತದ ಕುಂಬಾರ ಗುಂಡಯ್ಯ

* ಅಂಬಿಗರ ಚೌಡಯ್ಯ, ಕೆಂಭಾವಿಯೊಳಗೆ ಮೆರೆವ ಬೋಗಣ್ಣನಿಗೆ ಸಂಭ್ರಮದೊಳೆರಗಿ ನಮಿಸುವೆ*ಎಂಬ ಪದಗಳು ಅಂಬಿಗರ ಚೌಡಯ್ಯನವರ ಮೇರು ವ್ಯಕ್ತಿತ್ವವನ್ನು ಪರಿಚಯಿಸುತ್ತವೆ.

ಚೌಡಯ್ಯನವರ ಪಾರಮಾರ್ಥ ಸಾಧನೆಯನ್ನು ಕಂಡು ಮಾರುಹೋದ ಗುತ್ತಲ ಪ್ರಾಂತ್ಯದ ಅರಸನು ಅವರಿಗೆ ದಾಸೋಹಕ್ಕೆಂದು ಶಿವಪುರಕ್ಕೆ ಹೊಂದಿಕೊಂಡಿರುವ ಭೂಮಿಯನ್ನು ಕಾಣಿಕೆಯಾಗಿ ನೀಡಿದನು. ತಮಗೆ ನೀಡಿದ ಈ ಭೂಮಿಯನ್ನು ಚೌಡಯ್ಯನವರು ತಮ್ಮ ಮಗ ಪುರವಂತ ಹಾಗೂ ಶಿವದೇವರಿಗೆ ದಾನವಾಗಿ ನೀಡಿದರು. ಅದೇ ಕಾರಣಕ್ಕಾಗಿ ಶಿವಪುರಕ್ಕೆ ಚೌಡಯ್ಯ ದಾನಪುರ ಎಂಬ ಹೆಸರು ಬಂದಿತೆಂದು ಹೇಳಲಾಗುತ್ತಿದ್ದು, ಅದೇ ಇಂದು ಚೌಡದಾನಪುರವಾಗಿದೆ. ಬಸವಣ್ಣನವರ ಗರಡಿಯಲ್ಲಿ ಪಳಗಿದ ಇವರ ಅನುಭವವು ಅಮೃತಧಾರೆಯಾಗಿ ವಚನಗಳ ರೂಪದಲ್ಲಿ ಹರಿದುಬಂದಿವೆ. ನಿಜವಾದ ಭಕ್ತನಾರು ಎಂಬುದನ್ನು ಕುರಿತು ತಮ್ಮ ವಚನದಲ್ಲಿ

ಓಡುವಾತ ಲೆಂಕನಲ್ಲ ಬೇಡುವಾತ ಭಕ್ತನಲ್ಲ
ಓಡಲಾಗದು ಲೆಂಕನು, ಬೇಡಲಾಗದು ಭಕ್ತನು
ಓಡೆನಯ್ಯ, ಬೇಡೆನಯ್ಯ ಎಂದ ಅಂಬಿಗರ ಚೌಡಯ್ಯ
ಎಂದು ಸಾರಿದ್ದು ಅಮೋಘವಾಗಿದೆ.
ಪರಮಾತ್ಮನ ನಿಜಸ್ವರೂಪವನ್ನು ಕುರಿತು
ಅಸುರ ಮಾಲೆಗಳಿಲ್ಲ, ತ್ರಿಶೂಲ ಡಮರುಗವಿಲ್ಲ
ಬ್ರಹ್ಮಕಪಾಲವಿಲ್ಲ ಭಸ್ಮಭೂಷಣನಲ್ಲ
ವೃಷಭ ವಾಹನನಲ್ಲ, ಋಷಿಯ
ಮಗಳೊಡನಿರ್ದಾತನಲ್ಲ
ಎಸಗುವ ಸಂಸಾರದ ಕುರುಹಿಲ್ಲದಾತಂಗೆ
ಹೆಸರಾವುದೆಂದಾತ ಅಂಬಿಗರ ಚೌಡಯ್ಯ





| ವೀಣಾ ಹೇಮಂತ್‌ಗೌಡ ಪಾಟೀಲ್

ಎಂದಿದ್ದಾರೆ. ಸಾವಿರಾರು ವರ್ಷಗಳಿಂದ ಧರ್ಮ–ದೇವರುಗಳ ಬಗೆಗೆ ಜನ ಸಮೂಹದಲ್ಲಿದ್ದ ಮೂಢನಂಬಿಕೆಗಳನ್ನೆಲ್ಲ ಬಸವಣ್ಣ ಮತ್ತಿತರೆ ಶಿವಶರಣರೊಂದಿಗೆ ಅಂಬಿಗರ ಚೌಡಯ್ಯ ಹೊಡೆದೋಡಿಸುತ್ತಲೇ ವಿಚಾರ ಪರವಾದ ವಾಸ್ತವ ಅಂಶಗಳನ್ನು ಜನಮನದಲ್ಲಿ ಮೂಡಿಸಿದರು. ಧರ್ಮ–ದೇವರು ಕೇವಲ ಶ್ರೀಮಂತರ ಸೊತ್ತಾಗಿದ್ದ ಅಂದಿನ ಸಂದರ್ಭದಲ್ಲಿ ಪೂಜೆ ಪುರಸ್ಕಾರಗಳು ಕೇವಲ ನೇಮವಂತರ, ಬ್ರಾಹ್ಮಣರ ಗುತ್ತಿಗೆಯಾಗಿದ್ದ ಸಮಯದಲ್ಲಿ ಭಾಷ್ಯಕಾರರು ಹೇಳಿದ್ದೇ ಸರಿಯೆನ್ನುವ ವ್ಯವಸ್ಥೆಯಲ್ಲಿ ಚೌಡಯ್ಯ ಈ ಮೂವರನ್ನು ಕ್ರೂರ ಕರ್ಮಿಗಳೆಂದು, ಸಂದೇಹಿಗಳೆಂದು ಕಟುವಾಗಿ ಟೀಕಿಸುವುದರ ಮೂಲಕ ಇವರು ಹೋದ ದಾರಿಯಲ್ಲಿ ಯಾರೂ ಹೋಗ ಬಾರದೆಂದು ಸ್ಪಷ್ಟಪಡಿಸುತ್ತಾನೆ. ಇವರ ವಚನಗಳು ತುಂಬಾ ಖಾರವಾಗಿರುವುದು ಅವರ ಆತ್ಮ ಬಲವನ್ನು ಹಾಗೂ ಸತ್ಯವನ್ನು ಪ್ರತಿಪಾದಿಸುವಲ್ಲಿ ಹೊಂದಿದ್ದ ಧೈರ್ಯವನ್ನು ತೋರಿಸುತ್ತವೆ.

ಹನ್ನೆರಡನೇ ಶತಮಾನದಲ್ಲಿ ಕಲ್ಯಾಣದ ಶಿವಶರಣರ ಮಧ್ಯದಲ್ಲಿ ಪ್ರಜ್ವಲವಾಗಿ ಬೆಳಗಿದ ಶರಣನೆಂದರೆ ಅಂಬಿಗರ ಚೌಡಯ್ಯ. ಮಾತು ಕಟುವಾದರೂ ದಿಟವನ್ನೆ ನುಡಿದ ದಿಟ್ಟನೀತ ನುಡಿದಂತೆ ನಡೆದವನು, ನಡೆದಂತೆ ನುಡಿದವನು ಅಂಬಿಗರ ಚೌಡಯ್ಯ. ನಿಜಾರ್ಥದಲ್ಲಿ ಒಬ್ಬ ಬಂಡುಕೋರ, ಕ್ರಾಂತಿಕಾರಿ ಶರಣ, ನಿಷ್ಠೂರ ಮನುಷ್ಯ. ಎಲ್ಲಾ ಶರಣರಂತೆ ಈತ ಕಾಯಕಯೋಗಿ. ದೋಣಿ ನಡೆಸುವುದು ಅವನ ಕಾಯಕ ಅಂಬಿಗ ವೃತ್ತಿ.

ಸ್ಥಿತಪ್ರಜ್ಞರಾದ ಅವರು ಕೊನೆಯಲ್ಲಿ ಚೌಡದಾನಪುರದ ನದಿಯ ದಡದಲ್ಲಿ ಸಮಾಧಿಸ್ಥರಾದರೆಂದು ತಿಳಿದುಬರುತ್ತದೆ. ಆದ್ದರಿಂದ ಈ ನದಿದಡದಲ್ಲಿರುವ ದಿಬ್ಬದ ಮೇಲಿರುವ ಸಮಾಧಿಯನ್ನು ಅಂಬಿಗರ ಚೌಡಯ್ಯನವರ ಸಮಾಧಿ ಎಂದು ಗುರುತಿಸಲಾಗಿದೆ. ಪ್ರತಿವರ್ಷ ಅಂಬಿಗರ ಚೌಡಯ್ಯನವರ ಜಯಂತಿಯ ನಿಮಿತ್ಯ ಸಂಕ್ರಮಣದ ಪರ್ವ ಕಾಲದಲ್ಲಿ ಬಹು ಸಡಗರ ಸಂಭ್ರಮದಿಂದ ಇಲ್ಲಿ ಜಾತ್ರಾಮಹೋತ್ಸವವು ಜರಗುತ್ತಲಿತ್ತು. ಈಗ ಪ್ರತಿವರ್ಷ ಜನವರಿ 21ರಂದು ಅಂಬಿಗರ ಚೌಡಯ್ಯನವರ ಜಯಂತಿಯನ್ನು ನಮ್ಮ ಕರ್ನಾಟಕ ಸರಕಾರದಲ್ಲಿ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ನಿಜಶರಣ ಅಂಬಿಗರ ಚೌಡಯ್ಯನವರ ದಿವ್ಯ ವ್ಯಕ್ತಿತ್ವಕ್ಕೆ ಶಿರಬಾಗಿ ನಮಿಸುತ್ತಾ ಅವರು ತೋರಿದ ದಾರಿಯಲಿ ನಾವೆಲ್ಲರೂ ನಡೆದು ಸಾಗುವ...

# ಆರ್ಗ್ಯಾನಿಕ್ ಟ್ರೆಂಡ್!

ಸ್ನೇಹ ಲೋಕ



ಪ್ರತಿಯೊಂದನ್ನು ಆರ್ಗ್ಯಾನಿಕ್ ಅಂತ ಹುಡುಕಿ ಅದನ್ನು ಸೇವಿಸುವದರೊಳಗೆ ಅರ್ಥವಿದೆಯೇ!

"ಆರ್ಗ್ಯಾನಿಕ್ " ಎನ್ನುವ ಹೆಸರಿಗೆ ಮಾತ್ರ ನಾವು ದುಡ್ಡು ಕೊಡುತ್ತಿರುವೆವೋ ಗೊತ್ತಿಲ್ಲ! ಇಲ್ಲಿ ತಪ್ಪು,ಸರಿ, ಎನ್ನುವದಕ್ಕಿಂತ ಮನದಲ್ಲಿ ಈ ನಡುವೆ ಹೊಕ್ಕ ಭೀತಿಯೆಂದರೆ

ನೈಜವಲ್ಲದ ಗೊಬ್ಬರವನ್ನು ಬಳಸಿ ಬೆಳೆ ಬೆಳೆಯುವ ಬಗ್ಗೆ ಪ್ರತಿಯೊಬ್ಬರೂ ಯೋಚಿಸುವಂತೆ ಆಗಿದೆ!

ಹೀಗಾಗಿ ನಂಬಿಕೆ ಎನ್ನುವ ಪದಕ್ಕೆ ಪೆಟ್ಟು ಬಿದ್ದಿದೆ, ಅದರಿಂದ ಜನರು ಎರಡರಷ್ಟು ದುಡ್ಡು ಕೊಟ್ಟು ಆಹಾರ ಪದಾರ್ಥಗಳನ್ನು ಖರೀದಿಸುತ್ತಿರುವುದಂತೂ ಸತ್ಯ!

ದುಡ್ಡು ಜಾಸ್ತಿ ಇದ್ದಷ್ಟು ಅದನ್ನು ಖರ್ಚು ಮಾಡಲು ನಮಗಿರುವ ಒಂದು ಸಾಧನ ಅಷ್ಟೇ ಎಂದು ಎಂದೊಮ್ಮೆ ಅನಿಸುವುದೂ ಕೂಡ ಸುಳ್ಳಲ್ಲ! ಇದರ ಬಗ್ಗೆ ನನಗೆ ಜಾಸ್ತಿ ಮಾಹಿತಿ ಇಲ್ಲ, ಆದರೆ ಜನರಿಗೆ ದುಡ್ಡು ಜಾಸ್ತಿ ಆದಷ್ಟು ಈ ರೀತಿಯ ವಸ್ತುಗಳನ್ನು ಖರೀದಿಸುವ ಹುಚ್ಚು ಖಂಡಿತಾ ಜಾಸ್ತಿ ಆಗಿದೆ ಎನ್ನುವುದಂತೂ ಸತ್ಯ!

ಈ ನಡುವೆ ಹೆಚ್ಚಿನ ಜನರಿಗೆ ಆರೋಗ್ಯದ ಭೀತಿ ಬೆನ್ನೆತ್ತಿದೆ, ಹೋಟೆಲ್ ಊಟ ಜಾಸ್ತಿ ಮಾಡಿದರೂ ಕೂಡ ಮನೆಯಲ್ಲಿ ಆರ್ಗ್ಯಾನಿಕ್ ಎಣ್ಣೆ, ಹಿಟ್ಟು,ಕಾಳು, ತರಕಾರಿ ಹೀಗೆ ನೂರೆಂಟು ದಿನಸಿಗಳನ್ನು ಅದರ ದರದ ಎರಡು ಪಟ್ಟು ಜಾಸ್ತಿ ಕೊಟ್ಟು ತರುವುದು ಅಭ್ಯಾಸವಾಗಿ ಹೋಗಿದೆ!

ಉಪ್ಪು ಕೆಂಪಗಿದ್ದರೆ ಆರ್ಗಾನಿಕ್, ಹೀಗೆ ಬಣ್ಣದ ಮೇಲೆ ಅರ್ಥ, ಇನ್ನರ್ಥ ಕವರ್ ಮೇಲೆ ಬರೆದಿರುವ ಹೆಸರಿನಿಂದ ಆಕರ್ಷಿತವಾಗಿ ನಾವು ತರುವುದೇ ಜಾಸ್ತಿ!

ಮೊದಲೆಲ್ಲ ಊಟ ಮಾಡಿದಷ್ಟು ಮೈಗೆ ಶ್ರಮದ ಕೆಲಸ ಕೊಡುತ್ತಿದ್ದರು! ನೀರು ತರುವುದು, ರುಬ್ಬುವುದು, ಕುಟ್ಟುವುದು ಹೀಗೆ! ಆದರೆ ಈಗ ಎಲ್ಲದಕ್ಕೂ ಒಂದೊಂದು ಸುಲಭ ಸಾಧನಗಳು ಸಿಕ್ಕಿವೆ, ಹೀಗಾಗಿ ಅಡುಗೆ ಮಾಡಲು ಅತಿ ಸುಲಭವಾಗಿ ರುಚಿಯಾದ ತರಾವರಿ ಅಡುಗೆಗಳು ಮಾಡುತ್ತಾರೆ, ಹೋಟೆಲ್ ಜಾಸ್ತಿ ಆಗಿವೆ, ಜನರಿಗೆ ತರಾವರಿ ಆಹಾರಗಳು ಪರಿಚಯವಾಗಿ ನಾಲಿಗೆಯಲ್ಲಿ ನೀರೂರಿಸುವ ಆಹಾರಗಳಿಂದ ಸ್ಥೂಲಕಾಯ ಜಾಸ್ತಿ ಆಗಿದೆ!



| ಸ್ನೇಹಾ ಆನಂದ್

ಶುಭ ಸಮಾರಂಭದಲ್ಲಂತೂ ಹತ್ತಾರು ಸಿಹಿಗಳು, ಎಣ್ಣೆಯಲ್ಲಿ ಕರೆದು ತಿನ್ನುವ ಪದಾರ್ಥಗಳು ಹೀಗೆ ಹತ್ತಿಪ್ಪತ್ತು ತಿಂಡಿ, ಊಟಗಳು ಮನಸ್ಸನ್ನು ತೃಪ್ತಿ ಪಡಿಸಿದರೇ ಇತ್ತ ಅದರಿಂದ ದಿನದಿಂದ ದಿನಕ್ಕೆ ಮೈ ಉಬ್ಬುವದಂತೂ ಖಂಡಿತಾ! ಹೀಗಾಗಿ ಇದ್ದುದರಲ್ಲಿಯೇ ಸಮಾಧಾನ ತೆಗೆದು ಕೊಂಡು ಮುಂದಿನ ದಿನಗಳಲ್ಲಿ ನಮ್ಮ ಆರೋಗ್ಯಕ್ಕೆ ಹಾನಿಯಾಗಬಾರದು ಎಂಬ ಭಯದಿಂದಲೇ "ಆರ್ಗ್ಯಾನಿಕ್ " ವಸ್ತುಗಳಿಗೆ ಮೊರೆ ಹೋಗಿದ್ದೇವೆ ಅನಿಸುತ್ತದೆ! ರೈತರಿಂದ ನೇರವಾಗಿ ಸಿಗುವ ಪದಾರ್ಥಗಳು ನಮಗೆ ಮುಖ್ಯ , ಅದರ ಮೇಲೆ ಹಾಕಿದ ಬೆಲೆ ಮುಖ್ಯವಲ್ಲ, ಮಧ್ಯವರ್ತಿಗಳಿಗೆ ಇದರ ಲಾಭ ಜಾಸ್ತಿ, ಬೆಳೆ ಬೆಳೆದ ರೈತರು ತುಂಬಾ ಕಡಿಮೆ ಬೆಲೆಗೆ ಮಧ್ಯವರ್ತಿಗಳಿಗೆ ಮಾರುತ್ತಾರೆ!

ಮಧ್ಯವರ್ತಿಗಳಿಗೆ ಮಾರಾಟ ಮಾಡುವಾಗ ಕಸ್ಟಮರ್ ಸ್ವಭಾವವನ್ನು ಗಮನದಲ್ಲಿಟ್ಟು ಅದರ ಪ್ರಕಾರ ಬೆಲೆ ಹಾಗೂ ಪ್ಯಾಕಿಂಗ್ ಮಾಡುವ ರೀತಿಯಲ್ಲಿ ಆಕರ್ಷಕವಾಗಿ ತಯಾರಿಸಿ ರೈತರಿಗಿಂತ ಅಧಿಕ ಬೆಲೆ ಗಿಟ್ಟಿಸಿಕೊಳ್ಳುವವರು ಈ ಮಧ್ಯೆವರ್ತಿಗಳು!

ಇದರಿಂದ ಕಷ್ಟಪಟ್ಟು ಬೆಳೆ ಬೆಳೆದ ರೈತರಿಗಿಂತ ಮಧ್ಯೆವರ್ತಿಗಳೇ ಸಾಹುಕಾರರು! ಅವರು ಬಂಗಲೆಯಲ್ಲಿದ್ದರೆ ರೈತರು ಗುಡಿಸಲಲ್ಲೇ ಇರುತ್ತಾರೆ, ಇದೊಂದು ವಿಪರ್ಯಾಸವೇ ಸರಿ!

ಹತ್ತು ವರ್ಷಗಳ ತನಕ ಬೆಳೆ ಸರಿಯಾಗಿ ಬರದಿದ್ದರೂ ಮಧ್ಯೆವರ್ತಿಗಳು ಸುಖವಾಗಿ ಜೀವಿಸುತ್ತಾರೆ ಆದರೆ ರೈತರು ವರ್ಷ ಮಳೆ, ಬೆಳೆ ಸರಿಯಾಗಿ ಸಿಗದಿದ್ದರೆ ಬಡತನದ ಬೇಗೆಗೆ ಸಿಕ್ಕು ಬಳಲುತ್ತಾರೆ!

ನಿಜ ಹೇಳಬೇಕೆಂದರೆ ಆರೋಗ್ಯಕರ ಹಾಗು ರುಚಿಕರ ಆಹಾರ ಪದ್ಧತಿ ನಮ್ಮ ಭಾರತದಲ್ಲೇ ಇರುವುದು! ಆದರೆ ನಮ್ಮ ಹಿರಿಯರು ತಯಾರಿಸುವ ಹಾಗೆ ನಾವು ಆಹಾರ ತಯಾರಿಸದೇ ಇರುವುದರಿಂದ ನಾವು ಸ್ಥೂಲಕಾಯರಾಗಿದ್ದೇವೆ ಅಷ್ಟೇ!

ಈ ನಡುವೆ ಆಂಗ್ಲ ದೇಶದ ಆಹಾರ ಪದ್ಧತಿಗೆ ಆಕರ್ಷಿತರಾಗಿ ಬ್ರೆಡ್,ಬನ್,ಪಿಜ್ಜಾ, ಬರ್ಗರ್ , ಜಂಕ್ ಫುಡ್, ಚೈನಿಸ್ ಐಟಮ್ ಹೀಗೆ ನೂರೆಂಟು ಆಹಾರಗಳು ನಮ್ಮ ದೇಹಕ್ಕೆ ಬೇಕಾದಷ್ಟು ಹಾನಿ ಮಾಡುತ್ತಿರುವುದು ಖಂಡಿತಾ!

ಈ ನಿಟ್ಟಿನಲ್ಲಿ ಯೋಚನೆ ಮಾಡಿದರೆ ದಿನದಿಂದ ದಿನಕ್ಕೆ ಈ ರೀತಿಯ ಆಹಾರಗಳು ಜಾಸ್ತಿಯಾಗುತ್ತಾ ಹೋಗುತ್ತಿವೆ, ಮನದಲ್ಲಿ ಮುಂದಿನ ಪೀಳಿಗೆಯ ಬಗ್ಗೆ ಆತಂಕ ಮನೆ ಮಾಡುತ್ತದೆ! ಆಹಾರದಲ್ಲಿ ಯಾವುದೇ ಸತ್ವವಿಲ್ಲದೇ ಇರುವ ಆಹಾರ ಪದಾರ್ಥಗಳ ಕಡೆಗೆ ಈಗೀನ ಮಕ್ಕಳು ವಾಲಿದ್ದರಿಂದ ಪೀಳಿಗೆಯಿಂದ ಪೀಳಿಗೆಗೆ ಆಯಸ್ಸು ಕ್ಷೀಣಿಸುತ್ತಾ ಬರುತ್ತಿದೆ! ಊಟದ ಪದ್ಧತಿ ಹಾಗು ಕಾರ್ಯಾಚರಣೆಯ ರೀತಿ ಎರಡೂ ದೇಹದ ಬೊಜ್ಜಿಗೆ ಕಾರಣವಾಗಿದೆ, ಹೀಗಾಗಿ ಈಗೀನ ಮಕ್ಕಳು ಆಹಾರ ಹಾಗು ತಮ್ಮ ದಿನ ನಿತ್ಯದ ಕೆಲಸದ ಬಗ್ಗೆ ಯೋಚಿಸುವುದು ಜೀವನದ ಮುಂದಿನ ಭವಿಷ್ಯಕ್ಕೆ ಒಳ್ಳೆಯದು! ಆಹಾರ ಆರ್ಗ್ಯಾನಿಕ್ ಅಂತ ಮನೆಗೆ ತೆಗೆದು ಕೊಂಡು ಬಂದು ಅಡಿಗೆ ಮನೆ ಕಡೆಗೆ ತಲೆ ಹಾಕದೆ, ದಿನ ನಿತ್ಯದ ಊಟ ಹೊರಗೆ ಜಾಸ್ತಿ ಸೇವಿಸಿದರೆ ಅಲ್ಲಿರುವ ನಾನಾ ವಿಧದ ಆಹಾರದಿಂದ ಆಕರ್ಷಿತರಾಗಿ ನಾಲಿಗೆ ಬರೀ ರುಚಿಯನ್ನು ಮಾತ್ರ ಕೇಳುತ್ತದೆ! ಪ್ರತಿಯೊಂದಕ್ಕೂ ಎರಡು ಪಟ್ಟು ದುಡ್ಡು ಖರ್ಚು ಮಾಡಿ ತಂದ ಮನೆಯ ದಿನಸಿಗಳು ಮನೆಯಲ್ಲಿ ಕೊಳೆಯುತ್ತಾ ಹೋಗುವುದಕ್ಕಿಂತ ಮನೆಯಲ್ಲಿಯೇ ರುಚಿಯಾದ ಆಹಾರ ತಯಾರಿಸುವುದು ಒಳ್ಳೆಯದು! ಒಟ್ಟಿನಲ್ಲಿ ಆರ್ಗ್ಯಾನಿಕ್ ಟ್ರೆಂಡ್ ಭಾರತದಲ್ಲಿ ಕ್ರಾಂತಿ ಮೂಡಿಸಿದೆ!

# ವಾಟ್ಸಪ್ ಯುನಿವರ್ಸಿಟಿಯ ವಿಜ್ಞಾನಿಗಳ

ಮನದ ಮಾತು



ಈ ಐದು ವಸ್ತುಗಳು ನಿಮ್ಮ ಮನೆಯಲ್ಲಿ ಇವೆಯಾ ಹಾಗಿದ್ದರೆ ನಿಮಗೆ ಖಂಡಿತ ಕ್ಯಾನ್ಸರ್. ಪೈನ್ಯಾಪಲ್ ನೀರಿನಲ್ಲಿ ಕುದಿಸಿ ಅದರ ರಸ ಕುಡಿಸುವದರಿಂದ ಕ್ಯಾನ್ಸರ ಗುಣಪಡಿಸಬಹುದು. ನಿಮಗೆ ಇಂತಹ ಲಕ್ಷಣಗಳಿವೆಯಾ ಹಿಗಿದ್ದರೆ ಹುಷಾರ!! ನಿಮ್ಮ ಸಕ್ಕರೆ ಕಾಯಿಲೆ ವಾಸಿ ಮಾಡಬೇಕಾ ಹೀಗೆ ಮಾಡಿ.

ದಿನಾಲೂ ಅನ್ನ ಊಟ ಮಾಡುತಿದಿರಾ ಬಹುದಿನ ಬದುಕಿರುತ್ತೀರಾ....

ಈ ರೀತಿಯ ಹಲವು ರೀಲ್ಸ ಫೇಸ್ಬುಕ್ ಮತ್ತು ವಾಟ್ಸಪ್ಗಳ ಮೂಲಕ ಹರಿದಾಡುತ್ತವೆ. ಅವುಗಳನ್ನು ನೋಡಿದರೆ ನಾವು ಒಂದು ಹೆಜ್ಜೆ ಇಟ್ಟರು ತಪ್ಪು, ಕುಳಿತರು ತಪ್ಪು, ಎದ್ದರೂ ತಪ್ಪು. ದಿನಾ ಊಟಕ್ಕೆ ಗೋಧಿ ಬಳಿಸಬಾರದು. ಮನೆಯಲ್ಲಿ ಪ್ಲಾಸ್ಟಿಕ್ ಡಬ್ಬಗಳು ಇರಲೇಬಾರದು. ಹೀಗೆ ಇವರು ಹಲವಾರು ಸುದ್ದಿಗಳನ್ನು ಹಬ್ಬಿಸುತ್ತಲೇ ಇರುತ್ತಾರೆ . ಜನರು ಅವುಗಳನ್ನು ನಂಬಿ ಒಬ್ಬರಿಂದ ಇನ್ನೊಬ್ಬರಿಗೆ ಸಂದೇಶಗಳನ್ನು ಮುಂದೂಡುತ್ತಲೇ ಇರುತ್ತಾರೆ. ಅದನ್ನು ಕೇಳಿದ ಕೂಡಲೇ ನಮಗೆ ಅನಿಸುವುದು ಅಡುಗೆಮನಿಂದ ಕೂಡಲೇ ಪ್ಲಾಸ್ಟಿಕ್ ಡಬ್ಬಗಳನ್ನೆಲ್ಲವನ್ನು ತೆಗೆದು ಹಾಕಿ ಬಿಡಬೇಕು ಸ್ಟೀಲ್ ಮತ್ತು ಗಾಜಿನ ಡಬ್ಬಗಳ ಇಡಬೇಕು. ಅದನ್ನು ತಿನ್ನಬಾರದು ಇದನ್ನು ತಿನ್ನಬಾರದು. ಫ್ರಿಡ್ಜ್ ನಲ್ಲಿ ಇಟ್ಟ ಆಹಾರಗಳನ್ನು ತಿನ್ನಬಾರದು ಮೈಕ್ರೋವೇವ್ ಮಾಡಿದ ಆಹಾರ ತಿನ್ನಬಾರದು, ಇತ್ತೀಚಿಗಂತೂ ಕುಕ್ಕರ್ ನಲ್ಲಿ ಮಾಡಿದ ಅಡುಗೆ ಕೂಡ ಆರೋಗ್ಯಕ್ಕೆ ಒಳ್ಳೆಯದಲ್ಲ ಎಂಬ ವದಂತಿ. ಆದರೆ ಇದರಲ್ಲಿ ಸತ್ಯಾಸತ್ಯ ತಥಾಂಶಗಳು ಎಷ್ಟು ಇರುತ್ತವೆ , ಅಲ್ಯುಮಿನಿಯಂ ಪಾತ್ರೆಗಳಲ್ಲಿ ಅಡುಗೆ ಮಾಡಬಾರದು . ಅದರಲ್ಲಿ ಊಟ ಮಾಡುವುದರಿಂದ ಕ್ಯಾನ್ಸರ್ ಬರುತ್ತದೆ. ಬ್ರೆಡ್ ತಿನ್ನುವುದರಿಂದ ಕ್ಯಾನ್ಸರ್ ಬರುತ್ತದೆ. ಬಿಸ್ಕೆಟ್ ಗಳನ್ನು ತಿನ್ನುವುದರಿಂದ ಕ್ಯಾನ್ಸರ್ ಬರುತ್ತದೆ. ಮೊನ್ನೆ ಯಾರೋ ಒಬ್ಬರು ಹೇಳಿದರು ಅವರು ಕೂಡ ರೀಲ್ಸ ಮೂಲಕ ಪ್ರಸಿದ್ಧಿ ಪಡೆದವರು ತಲೆದಿಂಬನ್ನು ಬಹುಕಾಲದಿಂದ ಬದಲಾಯಿಸದಿದ್ದರೆ ಕ್ಯಾನ್ಸರ್ ಬರುತ್ತದೆ ಎಂದು. ಇದು ಕೇವಲ ಒಂದೇ ರೋಗದ ವಿಷಯವಲ್ಲ ಇನ್ನೂ ಬಹು ವಿಷಯಗಳನ್ನು ಹಂಚಿಕೊಳ್ಳುತ್ತಾರೆ. ಒಣ ಹಣ್ಣುಗಳನ್ನು ನೀರಿನಲ್ಲಿ ನೆನೆಸಿ ತಿನ್ನುವುದರ ಮೂಲಕ ತುಂಬಾ ಶಕ್ತಿ ಬರುತ್ತದೆ ಎಂತಲೂ, ವ್ಯಾಸಲಿನ್ ಮತ್ತು ಕೆಲವು ಪದಾರ್ಥಗಳನ್ನು ಹಂಚಿಕೊಳ್ಳುವುದರಿಂದ ನಿಮ್ಮ ಮುಖವು ತರುಣರಂತೆ ನವಕಾಂತಿಯಿಂದ ಕಾಣುವದು.

ಈ ಮ್ಯಾಜಿಕ್ ಟ್ರಿಕ್ ನಿಂದ ನೀವು ನಿಮಗಿಂತ 20 ವರ್ಷ ಸಣ್ಣವರಾಗಿ ಕಾಣುತ್ತೀರಾ ಎಂಬ ಊಹಾಪೋಹಗಳನ್ನು ಹುಟ್ಟು ಹಾಕುತ್ತಾರೆ. ಇದರೊಟ್ಟಿಗೆ ಇನ್ನೊಂದಷ್ಟು ವಿಶೇಷ ನಿಮಗೆ ಯಾರಾದರೂ ದುಡ್ಡು ವಾಪಸ್ ಕೊಟ್ಟಿಲ್ಲವೇ ನಿಮ್ಮ ದುಡ್ಡು ಬಂದಿಲ್ಲವೇ ಕೈ ಮೇಲೆ ಈ ನಂಬರ್ ಬರೆದುಕೊಳ್ಳಿ ಆ ವ್ಯಕ್ತಿ ಹುಡುಕಿಕೊಂಡು ಬಂದು ನಿಮ್ಮ ದುಡ್ಡು ವಾಪಸ್ ಕೊಡುತ್ತಾನೆ. ಇನ್ನು ಕೆಲವರು ವಾಟ್ಸಪ್ ಮೂಲಕ ಭವಿಷ್ಯ ಶಾಸ್ತವನ್ನು ಹೇಳ ಬಯಸುತ್ತಾರೆ. ವಿಜ್ಞಾನ ಮತ್ತು ಪುರಾಣದ ಇದೊಂದು ರೀತಿಯ ವಿಶೇಷ ಫ್ಯೂಷನ್ ಫುಡ್, ಸಾಸ್ ಮತ್ತು ಉಪ್ಪಿನಕಾಯಿ ಮಿಶ್ರಣ ತರಹ. ಹಾಗೆ ಕೇಳಿದಾಗ ನಮ್ಮ ಮಾನಸಿಕ ಸ್ಥಿತಿ ಹದಗೆಟ್ಟು ಹೋಗುತ್ತದೆ. ನಿಜವಾಗಿಯೂ ಪ್ಲಾಸ್ಟಿಕ್ ಅಷ್ಟು ಕೆಟ್ಟದಾಗಿದ್ದರೆ ರೋಗಿಗಳು ತೆಗೆದುಕೊಳ್ಳುವ ಮಾತ್ರೆಗಳು, ಚುಚ್ಚುಮದ್ದು ಚುಚ್ಚುವಲಸಿಕೆಯ ಟ್ಯೂಬ್ ಗಳು ಸಲೈನ್ ಬಾಟಲಿಗಳು ಎಲ್ಲವೂ ಏಕೆ ಪ್ಲಾಸ್ಟಿಕ್ ಆಗಿ ಇರುತ್ತವೆ . ನಾವು ಕುಡಿಯುವ ನೀರು ಕೂಡ ಪ್ಲಾಸ್ಟಿಕ್ ಪೈಪಿನ ಮೂಲಕವೇ ಬರುತ್ತದೆ.ಎಲ್ಲರ ಮನೆಯಲ್ಲೇ ಮೇಲಿರುವ ಓವರ್ ಟ್ಯಾಂಕ್ಗಳು ಪ್ಲಾಸ್ಟಿಕ್ ದೇ ಆಗಿರುತ್ತದೆ. ಆದ್ದರಿಂದ ಇವರು ಹೇಳುವ ಎಲ್ಲ ಮಾಹಿತಿ ಸರಿ ಅಂತ ಅಲ್ಲವೇ ಅಲ್ಲ. ಆದರೆ ನಾವು ಯಾವ ಗುಣಮಟ್ಟದ ಪ್ಲಾಸ್ಟಿಕ್ ಬಳಸುತ್ತೇವೆ ಎಂಬುದು ಮುಖ್ಯ. ಇನ್ನು ಒಣ ಹಣ್ಣುಗಳು ನೀರಿನಲ್ಲಿ ನೆನೆಸಿ ತಿಂದರೆ ಅಗಾಧ ಶಕ್ತಿ ಬರುತ್ತದೆ ಎನ್ನುವುದು ಮೂರ್ಖತನದ ಪರಮಾವಧಿ. ಹಣ್ಣುಗಳು ಬಹುಕಾಲ ಕೆಡದಂತೆ ಅವುಗಳ ತೇವಾಂಶವನ್ನು ತೆಗೆದು ಸೂರ್ಯನ ಬಿಸಿಲು ಅಥವಾ ಕೃತಕ ಶಾಖದಿಂದ ನಿರ್ಜಲೀಕರಣ ಮಾಡಲಾಗಿರುತ್ತದೆ.ಪುನಃ ನೀರಿನ ಸಂಪರ್ಕಕ್ಕೆ ಬಂದಾಗ ಅವು ತೇವವಾಗುತ್ತವೆ.ಇದರಲ್ಲಿ ಯಾವ ರಾಕೆಟ್ ವಿಜ್ಞಾನ ಕೂಡ ಇಲ್ಲ.ಯಾವುದೇ ರೀತಿಯ ವೈಜ್ಞಾನಿಕ ರಾಸಾಯನಿಕ ಪ್ರಯೋಗವು ಆಗಿಲ್ಲ. ಮತ್ತೆ ಏಕೆ ಅಗಾಧ ಶಕ್ತಿ ಎಲ್ಲಿಂದ ಮತ್ತು ಹೇಗೆ ಬರುತ್ತದೆ. ಶಕ್ತಿಯನ್ನು ಹುಟ್ಟು ಹಾಕಲು ಮತ್ತು ನಾಶ ಮಾಡಲು ಎರಡು ಸಾಧ್ಯವಿಲ್ಲ.ಇವೆಲ್ಲವೂ ಒಂದು ರೀತಿ ಸುಳ್ಳು ವದಂತಿಗಳನ್ನು ಹಬ್ಬಿಸುವುದು.

ಆದ್ದರಿಂದ ಇಂತಹ ವಿಷಯಗಳನ್ನು ನಂಬಬೇಕಾದರೆ ಮೊದಲು ಇದನ್ನು ಹೇಳುತ್ತಿರುವರು ಯಾರು ಅವರೇನಾದರೂ ವಿಜ್ಞಾನಿಯಿ ಸಂಶೋಧನಾಕಾರರೇ ಎಂಬುದನ್ನ ದೃಢಪಡಿಸಿಕೊಳ್ಳಬೇಕು.

ಪ್ಲಾಸ್ಟಿಕ್ ಗಳ ಬಳಕೆ ಉಪ್ಪು ಎಣ್ಣೆ ಮತ್ತು ಬಿಸಿ ಪದಾರ್ಥಗಳ ಬಳಕೆಗೆ ಸಲ್ಲದು ಅದನ್ನು ಹೊರತುಪಡಿಸಿ ಫುಡ್ ಗ್ರೇಡ್ ಬಿಪಿಎ ಫ್ರೀ ಪ್ಲಾಸ್ಟಿಕ್ ಗಳನ್ನು ಒಣ ಪದಾರ್ಥಗಳ ಸಂಗ್ರಹಣೆಗೆ ಬಳಸುವದರಿಂದ ಯಾವುದೇ ತೊಂದರೆ ಇಲ್ಲ. ಬಿಸಿ ಅಥವಾ ರಾಸಾಯನಿಕ ಪದಾರ್ಥಗಳ ಸಂಪರ್ಕಕ್ಕೆ ಬಂದಾಗ ಮಾತ್ರ ಪ್ಲಾಸ್ಟಿಕ್ ಪ್ರತಿಕ್ರಿಯೆಸುತ್ತದೆ. ಹೀಗಾಗಿ ಯಾವ ಗುಣಮಟ್ಟದ ಪ್ಲಾಸ್ಟಿಕ್ ಅನ್ನು ಬಳಸಬೇಕು ಎಂಬುವುದನ್ನು ನಿಖರವಾದ ಮಾಹಿತಿಯನ್ನು ನಿಖರವಾದ ಮತ್ತು ನಿಶ್ಚಿತರೂಪದ ಮೂಲದಿಂದ ತಿಳಿದುಕೊಳ್ಳಬೇಕು.



| ಸಾಕ್ಷಿ

ಇನ್ನು ಆರೋಗ್ಯ ಮಾಹಿತಿ ಸಂಬಂಧಿಸಿದಂತೆ...ಎಲ್ಲರ ಮನೆಯೂ ಬೇರೆ ಬೇರೆ... ಎಲ್ಲರ ಮನೆಯ ವಿನ್ಯಾಸಗಳು, ಆಹಾರ ವಿಧಾನ,ತಂತ್ರಜ್ಞಾನಗಳು ಬೇರೆ ಬೇರೆ.... ಹಾಗೆ ಎಲ್ಲರ ದೇಹ ಗುಣಲಕ್ಷಣಗಳು ಕೂಡ ಬೇರೆ ಬೇರೆ ಆಗಿರುತ್ತದೆ.ಹಲವು ರೋಗಗಳಿಗೆ ಬೇರೆಬೇರೆಯಾದ ಮತ್ತು ಏಕ ಸ್ವರೂಪದ ಗುಣಲಕ್ಷಣಗಳು ಇರುವದು. ಆರೋಗ್ಯ ಮಾಹಿತಿಗಳನ್ನು ಜಾಲಾಡಿ ಗೂಗಲ್ ವೈದ್ಯರಾಗಲು ಪ್ರಯತ್ನಿಸಿದರೆ ಮಾನಸಿಕ ಒತ್ತಡ ಹೆಚ್ಚಾಗುತ್ತದೆ ವಿನಹ ಬೇರೆ ಏನೂ ಸಾಧ್ಯವಿಲ್ಲ.

"ಮೂಢನಿಗೆ ಕೇಡಿಲ್ಲ" ಎಂಬಂತೆ ಅತಿಯಾದ ಜ್ಞಾನ ಮತ್ತು ನಿಖರವಾಗಿ ನಿರ್ದಿಷ್ಟವಾಗಿ ಇರದೇ ಇರುವ ಮಾಹಿತಿ ಸಂಗ್ರಹಣೆಯಿಂದ ನಮ್ಮ ಮಾನಸಿಕ ಸಂತುಲನ ತಪ್ಪುತ್ತದೆ ಹೊರತು ನಮ್ಮ ಸಮಸ್ಯೆಗೆ ಪರಿಹಾರ ದೊರೆಯುವುದಿಲ್ಲ. ಹೀಗೆ ಗೂಗಲ್ ಮಾಡಿ ನಮ್ಮ ರೋಗಗಳನ್ನು ಪತ್ತೆ ಹಚ್ಚಿ ವೈದ್ಯರಾಗುವುದು ಸಾಧ್ಯವಾಗಿದ್ದರೆ ವೈದ್ಯಕೀಯ ಶಿಕ್ಷಣಕ್ಕಾಗಿ ಯಾರು 5_8 ವರ್ಷಗಳನ್ನು ವ್ಯಯಿಸುತ್ತಿರಲಿಲ್ಲ.

ಇನ್ನು ವಿಜ್ಞಾನಿಗಳಾಗಲಿ ಸಂಶೋಧನಾ ಕಾರರಾಗಲಿ ರೀಲ್ಸ್ ಗಳನ್ನು ಮಾಡಿ ಮಾಹಿತಿಗಳನ್ನ ಹಂಚುವದಿಲ್ಲ. ಅವರಿಗೆ ಅಷ್ಟು ಸಮಯವೂ ಇರುವುದಿಲ್ಲ.

ಆರೋಗ್ಯ ಆಹಾರಗಳಲ್ಲಿ ಕೆಲವು ವಿಷಯಗಳನ್ನ ಪಾಲಿಸಬೇಕು. ಯಾವ ಆಹಾರ ದೀರ್ಘಕಾಲದವರ ಕೆಡದೆ ಇರುತ್ತದೆ ಅದು ಆರೋಗ್ಯಕ್ಕೆ ಒಳ್ಳೆಯದಲ್ಲ.ಉದಾಹರಣೆ ಬಿಸ್ಕೆಟ್ ಸಂಸ್ಕರಿಸಿದ ಆಹಾರಗಳು ಇವುಗಳು ಕೆಡದಂತೆ ಇವುಗಳಲ್ಲಿ ಸಂಸ್ಕರಣಾ ರಾಸಾಯನಿಕ ಪ್ರಿಸರ್ವೇಟಿವ್ಸ್ ಗಳನ್ನ ಹಾಕಿರುತ್ತಾರೆ ಆದ್ದರಿಂದ ಇವು ದೇಹಕ್ಕೆ ಅಷ್ಟು ಒಳ್ಳೆಯದಲ್ಲ.

ಯಾವ ಆಹಾರಗಳ ಜಾಹೀರಾತನ್ನು ತೋರಿಸುತ್ತಾರೆ ಅವು ಆರೋಗ್ಯಕ್ಕೆ ಅಷ್ಟಕಷ್ಟೇ ಇರುತ್ತವೆ. ಯಾವ ಜಾಹೀರಾತಿನಲ್ಲೂ ಕೂಡ ಪಪ್ಪಾಯ ತಿನ್ನಿ ಎಂದು ಹೇಳುವುದಿಲ್ಲ.ಪ್ರತಿ ಐದು ಮಹಿಳೆಯರಲ್ಲಿ ಇಬ್ಬರಿಗೆ ಭಾರತ ದೇಶದಲ್ಲಿ ಐರನ್ ಕೊರತೆ ಇದೆ , ಖರ್ಜುರ ಸಪೋಟ ಮತ್ತು ದಾಳಿಂಬೆ ಹಣ್ಣುಗಳನ್ನು ತಿನ್ನಿ ಎಂದು ಯಾವ ಜಾಹಿರಾತು ಹೇಳುವುದಿಲ್ಲ.ಮಲ್ಟಿ ವಿಟಮಿನ್ ಮಾತ್ರೆಗಳು ಮತ್ತು ದೇಹ ಸಂವರ್ದಕ ಪುಡಿಗಳ ಜಾಹೀರಾತು ಮಾಡುತ್ತಾರೆ ಅವುಗಳ ಅಗತ್ಯ ಇರುವುದಿಲ್ಲ.

ಆದ್ದರಿಂದ ಈ ಗೂಗಲ್ಲ, ವಾಟ್ಸಪ್, ಫೇಸಬುಕ್ ಗಳಿಂದ ಸಿಗುವ ಎಲ್ಲ ಮಾಹಿತಿಗಳು ಖಚಿತವಲ್ಲ. ಅವುಗಳ ನಿರ್ದಿಷ್ಟ ಮಾನದಂಡ ಇರದೇ ನಂಬುವದು ಮತ್ತು ಪಾಲಿಸುವದು ಮೂರ್ಖತನ. ಅವರು ಹೇಳಿದಂತೆ ಮಾಡಿದರೆ ಹೃದಯಾಘಾತ ಬರುವದಿಲ್ಲ, ಇಂತಹ ಆಹಾರ ಸೇವನೆಯಿಂದ ಹೃದಯಾಘಾತ ಸಣ್ಣ ವಯಸ್ಸಿನಲ್ಲಿ ಇತ್ತೀಚಿಗೆ ಬರುವದು ಎಂಬದೆಲ್ಲ ಸುಳ್ಳು.... ಹಾಗಿದ್ದರೆ ಮಾಹಿತಿ ಇರುವ ವೈದ್ಯರು ಸಾಯುತ್ತಲೇ ಇರಲಿಲ್ಲ. ಹಾಗೇ ನೋಡಿದರೆ ಇತ್ತೀಚಿಗೆ ಸಾವಿನ ಗಣತಿ ಸಂಖ್ಯಾವಾರು ಕಡಿಮೆ ಆಗಿದೆ. ನಮಗಿಂತ ಮುಂಚಿನ ಪೀಳಿಗೆ ಯನ್ನು ಕೇಳಿದಾಗ ನನಗೊಬ್ಬ ಬಾಲ್ಯದಲ್ಲಿ ತಮ್ಮನಿದ್ದ ಅಕ್ಕನಿದ್ದ ಅಣ್ಣನಿಂದ ಕಾರಣಾಂತರಗಳಿಂದ ತೀರಿಕೊಂಡು ಹೋದ ಎಂದು ಹೇಳುತ್ತಾರೆ. ಈಗ ಸಾಮಾಜಿಕ ಜಾಲತಾಣಗಳು ಪ್ರಚುರವಾಗಿರುವುದರಿಂದ ಸಾವಿನ ಸುದ್ದಿಗಳು ಬೇಗ ಹರಡುತ್ತವೆ . ಹೀಗಾಗಿ ಎಲ್ಲರಿಗೂ ಬೇಗ ಗೊತ್ತಾಗುತ್ತದೆ.

ಈ ಆಕಸ್ಮಿಕ ಸಾವುಗಳು ಎಲ್ಲಾ ಕಾಲದಲ್ಲಿಯೂ ಇದ್ದವು. ಎಷ್ಟೇ ಆರೋಗ್ಯ ಸೂತ್ರಗಳನು ಪಾಲಿಸಿದರು ಆ ದ?ವನಿಯಾಮಕ ಸಾವು ನೋವು ಬರುವ ಕಾಲಕ್ಕೆ ಬಂದಾವು. ಹಾಗೆಂದು ಅಸಡ್ಡೆ ಮಾಡಲಾದೀತೆ? ಹಿತವಾದ ಆಹಾರ, ಮಿತವಾದ ವ್ಯಾಯಾಮ ಮಾನಿಸಿಕ ನೆಮ್ಮದಿ ಉತ್ತಮ ಆರೋಗ್ಯಕೆ ಸೋಪಾನಗಳು. ಇನ್ನು ರೀಲ್ಸ ನೋಡಿ ಪೂಜಾ ಪದ್ದತಿ ಆಚರಣೆಗಳನ್ನು ಮಾಡುವುದು ಎಷ್ಟೊಂದು ಸೂಕ್ತ. ದೈವ ಭಕ್ತಿ ಆರಾಧನೆಯ ಕೇಂದ್ರ ಬಿಂದು ಆಗಿರಬೇಕು ಹೊರತು ಆಚರಣೆಗಳಿಂದ ಅಲ್ಲ. ಇನ್ನು ಈ ಸೌಂದರ್ಯ ಪ್ರಚೋದಿತ ವಿಡಿಯೋಗಳಾಗಲಿ ಕೂದಲನ್ನು ಕಪ್ಪು ಮಾಡುವ, ಮುಖದ ಕಲೆಗಳನ್ನು ಹೋಗಲಾಡಿಸುವ ಮನೆ ಉಪಾಯಗಳು ಅವುಗಳಲ್ಲಿಯೂ ಕೂಡ ಅರ್ಧಕ್ಕಿಂತ ಮಿಗಿಲಾಗಿ ಸುಳ್ಳೇ ಆಗಿರುತ್ತವೆ. ಮುಪ್ಪು ಸಹಜ ಪ್ರಕ್ರಿಯೆ ಅದನ್ನು ಒಪ್ಪಿಕೊಂಡು ಅಪ್ಪಿಕೊಂಡು ಬದುಕುವುದೇ ಜೀವನ. ಆದ್ದರಿಂದ ಸಾಧ್ಯವಾದಷ್ಟು ಈ ವಾಟ್ಸಪ್, ಫೇಸ್ಬುಕ್ ಸಂಶೋಧನಾಚಾರ್ಯ ವಿಜ್ಞಾನಿಗಳು ಮತ್ತು ವೈದ್ಯರಿಂದ ದೂರ ಇರಬೇಕು. ಇವು ಮಾಹಿತಿ ಕೊಡುವುದಕ್ಕಿಂತ ಭೀತಿ ಮೂಡಿಸುವುದೇ ಹೆಚ್ಚು . ಇದರಲ್ಲಿ ಬರುವ ಭವಿಷ್ಯವಾಣಿಗಳಾಗಲಿ ಅಥವಾ ಯಾವುದೇ ಮಾಟ ಮಂತ್ರಗಳಾಗಲಿ , ಸೂಕ್ತಸಿದ್ಧಿ ಇರದು. ಈ ಈ ಹಬ್ಬ ಈ ಸಾರಿ ಹೀಗೆ ಬಂದಿದೆ, ಈ ರಾಶಿ ನಕ್ಷತ್ರ ಸರಿ ಇಲ್ಲ. ಅದು ದಾನ ಮಾಡಬೇಕು ಇದು ದಾನ ಮಾಡಬೇಕು ಎಂಬ ಸುದ್ದಿಗಳು ಯಾವುದೇ ನಿಖರವಾದ ಪೌರಾಣಿಕ ಆಧ್ಯಾತ್ಮಿಕ ಮಾಹಿತಿಯನ್ನು ಹೊಂದಿರುವುದಿಲ್ಲ.ಪಂಚಾಂಗಗಳಲ್ಲಿ ಇವುಗಳ ಉಲ್ಲೇಖವು ಇಲ್ಲ.ಶಾಸ್ತ್ರೋಕ್ತ ವಿಧಾನಗಳನ್ನು ಪಾಲಿಸುವಾಗ ಶಾಸ್ತ್ರೋಕ್ತವಾಗಿ ಕಲಿತವರಿಂದ ತಿಳಿದು ಪಾಲಿಸಬೇಕು.

**ಮತ್ತೊಂದು ಮನದಮಾತು ಮುಂದಿನವಾರ.**

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,